# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 27

ಜುಲೈ 06 2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org


# ಭಾರತದ ಜನತೆಯ ಹಿತವೋ... ಬುಶ್ ನಿರ್ದೇಶನವೋ...



## ಕಳಚಿದ KFD ಮುಖವಾಡ

ವಿಧಾನಸಭಾ ಕಲಾಪ :

## ಹೊಣೆಗಾರಿಕೆಯಿಂದ ಜಾರಿಕೊಂಡವರು



ಜಮ್ಮು - ಕಾಶ್ಮೀರ ಗಲಭೆ :

## ರಾಜ್ಯಪಾಲರ ಪ್ರಚೋದನಾತ್ಮಕ ಕ್ರಮ

ನೋಟ

# ರಿಟೇಲ್ ಕ್ಷೇತ್ರಕ್ಕೂ ಲಗ್ಗೆ ಇಟ್ಟ ದೈತ್ಯ ಕಂಪನಿಗಳು



ಡಾ. ಜಿ. ಭಾಸ್ಕರ ಮಯ್ಯ

ಭಾರತವು ವ್ಯಾಪಾರ ಕ್ಷೇತ್ರದಲ್ಲಿ ಪ್ರಮುಖವಾಗಿ ಚಿಲ್ಲರೆ ವ್ಯಾಪಾರ ವ್ಯಾಪಾಕವಾಗಿರುವ ದೇಶ. ದೇಶ. ಇಲ್ಲಿ ಪ್ರತಿಯೊಂದು ಊರಿನಲ್ಲೂ ಸಂತೆಗಳು ಬಹಳ ಹಿಂದಿನ ಕಾಲದಿಂದಲೂ ವಿಖ್ಯಾತ. ಈಗಂತೂ ಹಳ್ಳಿ ಹಳ್ಳಿಗಳಲ್ಲಿ ಅಂಗಡಿ ಮುಗ್ಗಟ್ಟುಗಳಿವೆ. ನಗರಗಳಲ್ಲಿ ಚಿಲ್ಲರೆ ಅಂಗಡಿ ವ್ಯಾಪಾರವಲ್ಲದೆ, ಗೂಡಂಗಡಿಗಳು, ಬೀದಿಬದಿಯ ಮಾರಾಟಗಾರರು, ಕೈಗಾಡಿಗಳಲ್ಲಿ ತರಕಾರಿ ಮಾರುವವರು ಬಹುದೊಡ್ಡ ಸಂಖ್ಯೆಯಲ್ಲಿದ್ದಾರೆ. ಇದು ಒಂದು ರೀತಿಯಲ್ಲಿ ಸ್ವಾವಲಂಬಿತ ವ್ಯವಸ್ಥೆ; ವಿಕೇಂದ್ರೀಕೃತ ವ್ಯವಸ್ಥೆ. ಭಾರತದಲ್ಲಿ ಅಂದಾಜು ನಾಲ್ಕು ಕೋಟಿಗಿಂತ ಹೆಚ್ಚು ಚಿಲ್ಲರೆ ಮಾರಾಟಗಾರರಿದ್ದಾರೆ. ಸರಿಸುಮಾರು ಒಂದೂವರೆ ಕೋಟಿಗಳಷ್ಟು ಚಿಲ್ಲರೆ ಮಾರಾಟ ಮಳಿಗೆಗಳು ಭಾರತದಲ್ಲಿವೆ. ಅವುಗಳಲ್ಲಿ ಬಹುಪಾಲು 500 ಚದರಡಿಗಿಂತಲೂ ಕಡಿಮೆ ಪ್ರದೇಶದಲ್ಲಿ ಕಾರ್ಯಾಚರಣೆ ಮಾಡುವವು. ಅಂದರೆ ಪ್ರತೀ ಒಂದು ಸಾವಿರ ಜನರಿಗೆ 15 ಮಳಿಗೆಗಳಿವೆ. ಈ ನಿಟ್ಟಿನಲ್ಲಿ ಇಡೀ ಜಗತ್ತಿನಲ್ಲಿ ಅತಿ ಹೆಚ್ಚು ಚಿಲ್ಲರೆ ವ್ಯಾಪಾರ ಮಳಿಗೆಗಳು ಮತ್ತು ಚಿಲ್ಲರೆ ವ್ಯಾಪಾರಿಗಳು ಇರುವುದು ಭಾರತದಲ್ಲಿ. ಇವುಗಳಲ್ಲಿ ಬಹುದೊಡ್ಡ ಸಂಖ್ಯೆ ಸಣ್ಣ ವ್ಯಾಪಾರಿಗಳದ್ದು. ದೊಡ್ಡ ಬಂಡವಾಳ ತೊಡಗಿಸಿದ ಚಿಲ್ಲರೆ ವ್ಯಾಪಾರಿಗಳ ಸಂಖ್ಯೆ ಕಡಿಮೆ. ಆದರೆ ಮಾರುಕಟ್ಟೆಯ ಮೇಲೆ ಅವರ ಪ್ರಭಾವ ಹೆಚ್ಚು. ಇನ್ನೊಂದೆಡೆ 95 ಶೇಕಡಾ ಚಿಲ್ಲರೆ ಮಾರಾಟಗಾರರು ಅಸಂಘಟಿತರು. ಚಿಲ್ಲರೆ ವ್ಯಾಪಾರವೇ ಅವರ ಕೌಟುಂಬಿಕ ಜೀವನಕ್ಕೆ ಆಧಾರ.

ಈ ರಿಟೇಲ್ ಕ್ಷೇತ್ರದ ಬಹು ಪ್ರಮುಖ ಪಾಲು ಅಕ್ಕಿ, ಬೇಳೆ, ದವಸಧಾನ್ಯ, ಹಣ್ಣು ಹಂಪಲು, ತರಕಾರಿಗಳದ್ದು, ಕೃಷಿಪ್ರಧಾನ ಭಾರತದಲ್ಲಿ 60 ಕೋಟಿ ಜನ ಈ ಕ್ಷೇತ್ರಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಂಬಂಧಿಸಿದ್ದಾರೆ. ಈ ನಿಟ್ಟಿನಲ್ಲಿ ಇದು ನಾಲ್ಕು ಕೋಟಿ ಚಿಲ್ಲರೆ ವ್ಯಾಪಾರಿಗಳ ಪ್ರಶ್ನೆ ಮಾತ್ರವಾಗಿರದೆ ಸಂಪೂರ್ಣ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ, ಭಾರತದ ಬೆನ್ನೆಲುಬಿಗೇ ಸಂಬಂಧಿಸಿದ ಪ್ರಶ್ನೆಯಾಗಿದೆ.

### ಗೆದ್ದಲುಗಳ ಮುತ್ತಿಗೆ

ಜಾಗತೀಕರಣದ ಚಂಡಮಾರುತವು ಯಾವುದೇ ಒಂದು ಕ್ಷೇತ್ರವನ್ನೂ ಬಿಡದೇ ಅಪ್ಪಳಿಸುತ್ತದೆ. ಪ್ರತಿಯೊಂದು ಸಣ್ಣ ಸಣ್ಣ ವಸ್ತುವೂ ಅದರ ಗುರಿಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಬಹು ರಾಷ್ಟ್ರೀಯ ಕಂಪೆನಿಗಳು ಮತ್ತು ಅದರ ದೊಡ್ಡಪ್ಪಂದಿರಾದ ಸಾಮ್ರಾಜ್ಯವಾದಿ ದೇಶಗಳು ಮೂರನೇಯ ವಿಶ್ವದ ಅಭಿವೃದ್ಧಿಶೀಲ ದೇಶಗಳ ಆರ್ಥಿಕ ವ್ಯವಸ್ಥೆಯನ್ನು ಗೆದ್ದಲು ತಿಂದಂತೆ ತಿನ್ನುತ್ತಿವೆ. ಭಾರತದಲ್ಲಿ ಸಣ್ಣ ಕೈಗಾರಿಕೆಗಳ ಸೊಂಟವನ್ನು ಬಹುಬುದ್ಧಿವಂತಿಕೆಯಿಂದ ಈಗಾಗಲೇ ಸಂಪೂರ್ಣವಾಗಿ ಮುರಿದು ಹಾಕಲಾಗಿದೆ. ಈಗ ಸರದಿ ರಿಟೇಲ್ ಕ್ಷೇತ್ರದ್ದು. ಆರ್ಥಿಕ ಸುಧಾರಣೆಯ ಹೆಸರಿನಲ್ಲಿ ರಿಟೇಲ್ ಕ್ಷೇತ್ರದಲ್ಲಿ 49 ಶೇ. ನೇರ ಹೂಡಿಕೆಗೆ (FDI) ಮೂರು ವರ್ಷಗಳ ಹಿಂದೆ ಅವಕಾಶದ ಯೋಜನೆಯಿದ್ದರೆ ಆದೀಗ ಪೂರ್ತಿ 100 ಶೇ. ಗುರಿಯನ್ನಿಟ್ಟುಕೊಂಡು ಕಾರ್ಯಾಚರಿಸುತ್ತಿದೆ. ಸರಕಾರವು ಈ ಬಗ್ಗೆ ಅತ್ಯಂತ ಉದಾರವಾಗಿದೆ. ಕೆಲವು ವರ್ಷಗಳಿಂದ ವಿದೇಶಿ ಹಣ್ಣುಗಳು ಭಾರತದ ಮಾರುಕಟ್ಟೆಯಲ್ಲಿ ತುಂಬಿ ಹೋಗಿರುವುದು ಮುಂದಿನ ಅನಾಹುತಕಾರಿ ಬೆಳವಣಿಗಳಿಗೆ ನಾಂದಿಯಾಗಬಹುದೆಂಬ ಕಲ್ಪನೆ ಯಾರಿಗೂ ಇಲ್ಲ. ಹೊಸ ಆರ್ಥಿಕ ನೀತಿ ಹೇಳಿ ಕೇಳಿ ಉದಾರವಾದಿ. ರಿಟೇಲ್ ಕ್ಷೇತ್ರದಲ್ಲಿ ವಿದೇಶಿ ಹೂಡಿಕೆ, ಬಹುರಾಷ್ಟ್ರಿಯ ಕಂಪೆನಿಗಳ ಪ್ರವೇಶಕ್ಕೂ ಉದಾರವಾದಿ, ಕಲ್ಯಾಣವಾದಿ ಕಾರಣಗಳನ್ನೆ ನೀಡಲಾಗುತ್ತದೆ. ರಿಟೇಲ್ ಕ್ಷೇತ್ರದಲ್ಲಿ 'ಮಧ್ಯವರ್ತಿ ದಲ್ಲಾಳಿಗಳ ಹಾವಳಿಯಿದೆ, ಎಫೀಶಿಯನ್ಸಿ(ದಕ್ಷತೆ) ಯಿಲ್ಲ. ಕ್ವಾಲಿಟಿ (ಗುಣಮಟ್ಟ)ಸರಿಯಾಗಿರುವುದಿಲ್ಲ'. ಆದ್ದರಿಂದ ದೇಶ ವಿದೇಶದ ದೊಡ್ಡ ಕಾರ್ಪೊರೇಟ್ ಕಂಪೆನಿಗಳು ರಿಟೇಲ್ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಪ್ರಯತ್ನಿಸುತ್ತಿವೆ! ಇದರಿಂದ ವ್ಯಾಪಾರ ಕ್ಷೇತ್ರದಲ್ಲಿ ಹೊಸತೇ ಆದ ಒಂದು ಅಧ್ಯಾಯವನ್ನು ಬರೆಯಬಹುದಾಗಿದೆ. ಬಾರತದ ಅನುಸಂಧಾನ ಪರಿಷತ್ ಕೂಡ ಇದನ್ನೇ ಸಾರುತ್ತದೆ! ಪರಿಷತ್ತಿನ ವರದಿಯಲ್ಲಿ ನಿರ್ದೇಶಕ ಹೀಗೆನ್ನುತ್ತಾನೆ: 'ನಿರೀಕ್ಷಿತ ವಿಕಾಸವನ್ನು ಹೊಂದಲು ರಿಟೇಲ್ ಕ್ಷೇತ್ರದಲ್ಲಿ ನೇರ ಹೂಡಿಕೆಗೆ 'FDI' ಅನುಮತಿ ಕೊಡಬೇಕು. ಹಾಲಿ ರಿಟೇಲ್ ಕ್ಷೇತ್ರವು ಹಲವಾರು ಸಮಸ್ಯೆಗಳಿಂದ ಬಳಲುತ್ತಿದೆ. ವಿತರಣೆಯ ಜಾಲವನ್ನು ಶಕ್ತಿಶಾಲಿಯಾಗಿ ಮಾಡಬೇಕಾಗಿದೆ. ಖಾದ್ಯ ಸಂಸ್ಕರಣ, ನಿರ್ಮಾಣ ಘಟಕಗಳಲ್ಲಿ ಹೂಡಿಕೆ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ಟೂರಿಸಂನಂತಹ ಸಂಬಂಧ ಹೊಂದಿದ ಕ್ಷೇತ್ರಗಳಿಗೆ ಪ್ರೋತ್ಸಾಹ ಕೊಡಲು ಈ ಹೂಡಿಕೆ ಅನಿವಾರ್ಯ. ರಿಟೇಲ್ ಕ್ಷೇತ್ರವು ಸಂಘಟಿತವಾಗುತ್ತದೆ. ಹೀಗೆ ಸಂಘಟಿತವಾಗುವುದರಿಂದ ಬೆಲೆಗಳು ಇಳಿಮುಖವಾಗುತ್ತವೆ, ಅಲ್ಲದೆ ಗ್ರಾಹಕನಿಗೆ ಆರಿಸುವ ಅವಕಾಶಗಳು ಹೆಚ್ಚು ಹೆಚ್ಚು ದೊರೆಯುತ್ತದೆ.

> ಜಾಗತೀಕರಣದ ಚಂಡಮಾರುತವು ಯಾವುದೇ ಒಂದು ಕ್ಷೇತ್ರವನ್ನೂ ಬಿಡದೇ ಅಪ್ಪಳಿಸುತ್ತದೆ. ಪ್ರತಿಯೊಂದು ಸಣ್ಣ ಸಣ್ಣ ವಸ್ತುವೂ ಅದರ ಗುರಿಯಿಂದ ತಪ್ಪಿಸಿಕೊಳ್ಳುವಂತಿಲ್ಲ.

### ವಿಕೃತ ಮುಖ

ಆದರೆ ಈ ಎಲ್ಲಾ ತರ್ಕಗಳೂ ದೇಶಿಯ ಬಂಡವಾಳಪತಿಗಳು ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಲಾಭಕೋರ ನೀತಿಗೆ ಪೂರಕವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಭಾರತದ ಬಹುದೊಡ್ಡ ಗ್ರಾಹಕ ಮಾರುಕಟ್ಟೆಯನ್ನು ಕೊಳ್ಳೆ ಹೊಡೆಯಲು ಅನುಕೂಲ ಕ್ಷೇತ್ರವಾಗಿದೆ. ಒಂದು ಕಡೆ ದೊಡ್ಡ ಸಂಖ್ಯೆಯಲ್ಲಿ ಗ್ರಾಹಕರು ದೊರಕಿದರೆ, ಇನ್ನೊಂದೆಡೆ ಅಗ್ಗದ ಶ್ರಮಶಕ್ತಿ, ಕಡಿಮೆ ಖರ್ಚು ಅವರಿಗೆ ಅತಿ ಹೆಚ್ಚು ಲಾಭ ಪಡೆಯಲು ಸಹಕಾರಿಯಾಗಿದೆ. ಒಂದೇ ಸೂರಿನಡಿಯಲ್ಲಿ ಎಲ್ಲಾ ಸಾಮಾನುಗಳು ದೊರಕುವುದು ಎಷ್ಟೊಂದು ಸುಂದರ! ಆದರೆ ಇದರ ಇನ್ನೊಂದು ಮುಖ ಅತ್ಯಂತ ಭಯಾನಕ.

ಮೊದಲು ಭಾರತದ ದೊಡ್ಡ ಈ ನೀತಿಗಳು ವರ್ಷದಿಂದ ವರ್ಷಕ್ಕೆ ತಮ್ಮ ಹೊಸ ವಿಕೃತ ಮುಖವನ್ನು ತೋರಿಸುತ್ತಿವೆ. ಇದರ ಪ್ರಭಾವ ಅತ್ಯಂತ ವಿನಾಶಕಾರಿ. ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಅಪರಿಮಿತ ಉದ್ಯೋಗಾವಕಾಶಗಳಿದ್ದವು. ಅವುಗಳು ಸಮೂಲವಾಗಿ ನಾಶವಾಗಿ ನಿರುದ್ಯೋಗದ ಸಮಸ್ಯೆ ಉಲ್ಬಣಿಸುತ್ತಾ ಇದೆ. ಅಸಂಘಟಿತ, ವಿಕೇಂದ್ರಿಕೃತ, ವ್ಯವಸ್ಥೆ ನಾಶವಾಗಿ ಸಂಘಟಿತ - ತಾನಾಶಾಹಿ ಪ್ರಭುತ್ವ ವಿಜೃಂಭಿಸುತ್ತದೆ.




ವಾಲ್‌ಮಾರ್ಟ್ ಮಳಿಗೆ

ಆರ್ಥಿಕ ಉದಾರೀಕರಣದ ಮೂಲತತ್ವಗಳಲ್ಲಿ ವ್ಯಾಪಾರಿ ಸಮುದಾಯಗಳಿಗೆ ಲಾಭ ಮಾಡಿಕೊಡಲು ಅಸಂಖ್ಯ ಮಾರ್ಗಗಳಿವೆ. ಉದಾಹರಣೆಗೆ, ಎಗ್ರಿಕಲ್ಚರಲ್ ಮಾರ್ಕೆಟಿಂಗ್ ಕಮಿಟಿ ಆಕ್ಟ್‌ನ ಅನ್ವಯ ಸಂಪೂರ್ಣ ದೇಶದ ಕೃಷಿ ಉತ್ಪಾದನೆಯನ್ನು ಖರೀದಿಸಲಾಗುತ್ತದೆ. ಈ ಕಾನೂನಿನಲ್ಲಿ ಮಾಡಲ್ಪಟ್ಟ ತಿದ್ದುಪಡಿಗಳು ಬಹುರಾಷ್ಟ್ರೀಯ ಕಂಪೆನಿಗಳಗೆ ಹಾಗೂ ದೇಶಿ ಬಂಡವಾಳಪತಿಗಳಿಗೆ ಅತ್ಯಂತ ಸಹಕಾರಿಯಾಗಿದೆ. ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಅಸಮಾನವಾದ ಶಕ್ತಿಗಳ ನಡೆಯುವ ಸಂಘರ್ಷದಲ್ಲಿ ಸರಕಾರ ನಿಷ್ಪಕ್ಷ ರೆಫ್ರಿಯ ಪಾತ್ರ ವಹಿಸುವುದಿಲ್ಲ, ಬದಲಿಗೆ ಉಳ್ಳವರ ಪರವಾಗಿಯೇ ನಿಯಮಾವಳಿಗಳನ್ನು ರೂಪಿಸುತ್ತದೆ. ಅಮೇರಿಕಾದ ವಾಲ್‌ಮಾರ್ಟ್ ಕಂಪೆನಿಗೆ ಭಾರತದಲ್ಲಿ ಹೂಡಿಕೆ ಮಾಡಲು ಮೊದಲಿಗೆ ದೇಶಿಯ ಗುತ್ತೇದಾರಿ ಸಂಸ್ಥೆಗಳು ವಿರೋಧಿಸಿದ್ದವು. ಆಗ ಸರಕಾರ ದೇಶೀ ಗುತ್ತೇದಾರಿ ಸಂಸ್ಥೆಗಳನ್ನು ಮೊದಲು ಚಿಲ್ಲರೆ ವ್ಯಾಪಾರ ಕ್ಷೇತ್ರ ಪ್ರವೇಶಿಸಲು ಅನುಮತಿ ನೀಡಿತು. ಆಗ ಈ ಕ್ಷೇತ್ರದ ವ್ಯಾಪಾರಿಗಳು ವಿರೋಧ ವ್ಯಕ್ತಪಡಿಸಿದಾಗ ಅದು ಆರ್ಥಿಕ ಗತಿಶೀಲತೆಯನ್ನು ತಡೆಯುವ ಒಳಸಂಚೆಂದು ದೂರಲಾಯಿತು. ಇದರಿಂದ ಅಭಿವೃದ್ಧಿಯ ಗತಿ ಕುಂಠಿತವಾಗುತ್ತೆಂದು ಕುಂಟು ನೆಪ ಹೇಳಲಾಯಿತು.

ಈಗ ದೇಶೀ ಹಾಗೂ ವಿದೇಶೀ ಬಹುರಾಷ್ಟ್ರೀಯ ಸಮುದಾಯಗಳೆರಡೂ ಒಪ್ಪಂದ ಮಾಡಿಕೊಂಡು ಚಿಲ್ಲರೆ ವ್ಯಾಪಾರ ಕ್ಷೇತ್ರವನ್ನು ತಮ್ಮ ಆಡಂಬೊಲವನ್ನಾಗಿ ಮಾಡಿಕೊಂಡು ನಾಲ್ಕು ಕೋಟಿ ಚಿಲ್ಲರೆ ಮಾರಾಟಗಾರರ ಮತ್ತು ರೈತರ ಶೋಷಣೆ ಮಾಡುತ್ತಿವೆ.

### ಹವಾನಿಯಂತ್ರಿತ ಮಳಿಗೆ

ರಿಲಯನ್ಸ್ 25000 ಕೋಟಿ ರೂಪಾಯಿ ಬಂಡವಾಳ ಹೂಡಿ ದೇಶದಲ್ಲಿ 4000 ರಿಲಯನ್ಸ್ ಫ್ರೆಶ್ ಹವಾನಿಯಂತ್ರಿತ ಮಳಿಗೆ ತೆರೆದಿದೆ. ಮಧ್ಯಮ ವರ್ಗದ ಜನರನ್ನು ಅದು ಸುಲಭವಾಗಿ ಆಕರ್ಷಿಸುತ್ತಿದೆ. ಸದಾ ಬೆಡಗಿಗೆ ಮಾರು ಹೋಗುವ ಬೌದ್ಧಿಕವಾಗಿ ದಿವಾಳಿಯೆದ್ದ ಸಂಸ್ಕೃತಿವಿಹೀನ ನಮ್ಮ ಮಧ್ಯಮ ವರ್ಗ ಈ ಹುನ್ನಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಚೆನ್ನೈಯ ಕೊಯಮತ್ತೂರಿನಲ್ಲಿ ಈ ಮುಂಚೆ ಸಗಟು ಮಾರುಕಟ್ಟೆ ಮಧ್ಯಾಹ್ನದ ತನಕ ಅತ್ಯಂತ ಬಿರುಸಿನ ಚಟುವಟಿಕೆಗಳಿಂದ ಕೂಡಿತ್ತು. ಈಗ ಬೆಳಿಗ್ಗೆ 8 ಗಂಟೆಗೆ ಮಾರುಕಟ್ಟೆ ತಂಡಿ ಬಡಿದಂತೆ ಇರುತ್ತದೆ. ಇದಕ್ಕೆ 'ರಿಲಯನ್ಸ್ ಫ್ರೆಶ್' ಕಾರಣ ಎಂದ ಜನ ಕ್ರೋಧಗೊಂಡಿದ್ದಾರೆ. ಹಿಂದಿನ ವ್ಯಾಪಾರ ವಹಿವಾಟಿಗೆ ಹೋಲಿಸಿದರೆ ಈಗ ಅದು ಶೇ. 50ರಷ್ಟು ಕುಸಿದಿದೆ. ಇದರಿಂದ ಅತ್ಯಂತ ತೊಂದರೆಗೊಳಗಾದ ವರು ಸಣ್ಣ ವ್ಯಾಪಾರಿಗಳು ಮತ್ತು ಬೀದಿ ಮಾರಾಟಗಾರರು. ಕೊಯಮತ್ತೂರಿನ 5000 ದಿನಕೂಲಿ ಕಾರ್ಮಿಕರು ಕಂಗಾಲಾಗಿದ್ದಾರೆ. ಇದೇ ರೀತಿಯ ಪರಿಸ್ಥಿತಿ ಜಲಂಧರ್‌ನ ತರಕಾರಿ ಮಾರುಕಟ್ಟೆಯಲ್ಲಿ ಕಾಣಬಹುದು. ಜಲಂಧರ್ ತರಕಾರಿ ಮಂದಿಗೆ ಪ್ರತಿನಿತ್ಯ ಟ್ರಕ್‌ಗಳು ಹಣ್ಣು ಮತ್ತು ತರಕಾರಿ ಕೊಂಡು ಬರುತ್ತಿದ್ದವು. ಇಲ್ಲಿ ಸರಕುಗಳು ಕಮಿಶನ್ ಏಜೆಂಟ್ ಮತ್ತು ಮಧ್ಯವರ್ತಿಗಳಿಗೆ ನೀಡಲಾಗುತ್ತಿತ್ತು. ಅವರು ಇದನ್ನು ಮಾರುತ್ತಿದ್ದರು. ಮಧ್ಯವರ್ತಿಗಳು ಭ್ರಷ್ಟತೆಗೆ ಕುಖ್ಯಾತರು. ಕಂಪೆನಿಗಳು ನೇರವಾಗಿ ರೈತರಿಂದ ಖರೀದಿಸಿದರೆ ಅದರ ಪರಿಣಾಮ ಬೀರವುದು ಮೊದಲಿಗೆ ಮಧ್ಯವರ್ತಿಗಳ ಮೇಲೆ. ಆದರೆ ಆಶ್ಚರ್ಯವೆಂದರೆ ರಿಲಾಯನ್ಸ್‌ನ ಇಂದಿನ ರಣನೀತಿ ಮಧ್ಯವರ್ತಿಗಳ ಕೈಗಳನ್ನು ಮತ್ತಷ್ಟು ಬಲಪಡಿಸಿದೆ. ಇದೇ ಪರಿಸ್ಥಿತಿ ಇಂದು ದಿಲ್ಲಿ, ಮುಂಬೈ, ರಾಂಚಿ, ಇಂದೋರ್, ಭೋಪಾಲ್ ಮೊದಲಾದ ಪ್ರದೇಶಗಳಲ್ಲಿ ಕಂಡುಬರುತ್ತಿವೆ.

ಇಂದು ರಿಟೇಲ್ ಕ್ಷೇತ್ರದಲ್ಲಿ ಭಾರತದ ಆರ್.ಪಿ.ಜಿ. ಗ್ರೂಪ್, ಪನಟಾಲರಿನ್ ರಿಟೇಲ್, ವಾದಿಯಾ ಸಮೂಹ, ರಹೇಜಾ ಸಮೂಹ, ಆದಿತ್ಯ ಬಿರ್ಲಾ ಗ್ರೂಪ್ ಮತ್ತು ಮುಖೇಶ್ ಅಂಬಾನಿಯ ರಿಲಾಯನ್ಸ್ ಸಮೂಹಗಳು ಸಕ್ರಿಯವಾಗಿವೆ. ಇವುಗಳ ಜತೆಗೆ ಟಿಸ್ಕೊ, ಸೇನ್ಸ್‌ಬರೀ,

ಪುಟ 15 ಕ್ಕೆ

ಸಂಪಾದಕೀಯ

# ಶಿಕ್ಷಣ : ಖಾವಿಪಡೆಗಳ ನೀಲನಕ್ಷೆ

**ಉದಾರತೆಯ ಮುಖವಾಡವನ್ನು ಬಿಜೆಪಿ ಧರಿಸಿರುವಾಗಲೇ ಖಾವೀಪಡೆ ಶಿಕ್ಷಣದ ವಿಕೃತೀಕರಣಕ್ಕೆ ನೀಲನಕ್ಷೆ ಹಿಡಿದು ಹೊರಟಿದೆ.**

ಹೆಗಲ ಮೇಲೆ ಹಸಿರು ಶಾಲು ಆದರೆ ಹೃದಯದೊಳಗೆ ಕೇಸರಿ ಎಂಬ ಸಚಿವ ಈಶ್ವರಪ್ಪನವರ ಹೇಳಿಕೆ ಬಿಜೆಪಿಯು ಈ ಸರ್ಕಾರದ ಆಡಳಿತ ನಡೆಸುವಲ್ಲಿ ಇರಿಸಿಕೊಂಡ ಅಜೆಂಡಾವನ್ನೇ ಧ್ವನಿಸಿದೆ. ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ರೈತರ ಹಿತಕಾಯಲೇಬೇಕೆಂದೇನು ಇಲ್ಲವೆಂದೂ, ತಾವಿರುವುದು ಸಂಘ ಪರಿವಾರದ ಕಾರ್ಯಸೂಚಿಯ ಜಾರಿಗೆ ಎಂಬುದನ್ನು ಅಧಿಕಾರ ವಹಿಸಿಕೊಂಡ 20 ದಿನಗಳಲ್ಲೇ ತೋರಿಸಿಯೂ ಆಗಿದೆ. ಅದರಂತೆಯೇ ಸಂಘಪರಿವಾರದ ಅತಿ ಪ್ರಿಯ ವಾದ ಶಿಕ್ಷಣ ಕ್ಷೇತ್ರದಲ್ಲಿ ಕೋಮುವಾದೀಕರಣ (ಕೇಸರೀಕರಣ)ಕ್ಕೆ ಬದ್ಧತೆಯನ್ನು ಪ್ರಾಥಮಿಕ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಆರಂಭದ ಈ ದಿನಗಳಲ್ಲೇ ಹೊರಗೆಡಹಿದ್ದಾರೆ. ಇತಿಹಾಸ ಬೋಧನೆ, ಪಠ್ಯಗಳನ್ನು ಪುನರ್ ರಚಿಸುವುದಾಗಿಯೂ ಹೇಳಿದ್ದಾರೆ. ಹೀಗೆ ಇತಿಹಾಸವನ್ನು ಫ್ಯಾಸಿಸ್ಟ್ ಮನೋಭಾವದ ಧೋರಣೆಗನುಗುಣವಾಗಿ ಕೇಂದ್ರದಲ್ಲಿ ಹಾಗೂ ಬಿಜೆಪಿ ಆಡಳಿತದ ರಾಜ್ಯ ಸರ್ಕಾರಗಳಲ್ಲಿ ತಿರುಚಿ ವಿಕೃತಗೊಳಿಸುವುದನ್ನೇ ಈ ಸಚಿವ ದೇಶಭಕ್ತಿ ಬೆಳೆಸಲು, ಪಠ್ಯ ಪುಸ್ತಕಗಳ ಕಲಿಕೆಯ ವಿಧಾನದಲ್ಲಿ ಬದಲಾವಣೆ ತರಲು ಇದು ಪೂರಕವೆಂದು ಬಣ್ಣ ಹಚ್ಚಿದ್ದಾರೆ. ಇದೇ ಹೊತ್ತಿನಲ್ಲಿಯೇ ಹಿಮಾಚಲದಲ್ಲಿ ಬಿಜೆಪಿ ಸರ್ಕಾರ ಶಿಕ್ಷಣದ ಕೋಮುವಾದೀ ವಿಕೃತೀಕರಣಕ್ಕೆ ಹೊರಟಿರುವುದನ್ನು ಎಡಶಕ್ತಿಗಳು ಹಾಗೂ ಪ್ರಗತಿಪರರು ಖಂಡಿಸಿ, ಬೀದಿಗಿಳಿಯುತ್ತಿದ್ದಾರೆ. ಇನ್ನು ಕಾಗೇರಿಯ ಹಾದಿ ಏನೆಂಬುದನ್ನು ಇದು ತೋರಿಸುತ್ತದೆ.

ಈ ಹಿಂದೆ ಜೆಡಿ(ಎಸ್) ಜೊತೆಗೆ ಸರ್ಕಾರದಲ್ಲಿದ್ದ ಬಿಜೆಪಿಯು ಸ್ವಾತಂತ್ರ್ಯ ಸಂಗ್ರಾಮ ಹಾಗೂ ದೇಶಭಕ್ತಿ ಉದ್ದೀಪನಗೊಳಿಸುವಂತೆ ಪಠ್ಯ ಪುಸ್ತಕಗಳು ಪುನರ್ ರಚನೆಯಾಗಬೇಕೆಂದೂ, ಪ್ರಾಥಮಿಕ ಹಾಗೂ ಉನ್ನತ ಶಿಕ್ಷಣ ರಂಗದಲ್ಲಿಯೂ ಬದಲಾವಣೆ ತರಬೇಕೆಂದು ತನ್ನ ಪ್ರಯತ್ನವನ್ನು ನಡೆಸಿತ್ತು. ಆ ಸಂದರ್ಭದಲ್ಲಿಯೇ ರಚಿಸಲಾದ ಸಮಿತಿಯನ್ನು ಸರ್ಕಾರದ ಪತನದ ನಂತರವೂ ಪುನರ್ ನವೀಕರಣಗೊಳಿಸಿ ತನ್ನ ಕೆಲಸ ನಡೆಸಿತ್ತು. ತೀರಾ ಇತ್ತೀಚೆಗೆ ಡಾ.ಚಿದಾನಂದಮೂರ್ತಿಯವರನ್ನು ಒಳಗೊಳಿಸಿ ಹಲವು ಅಧ್ಯಾಪಕರುಗಳ ಹಾಜರಿಯಲ್ಲಿ ಸಭೆಯೂ ಜರುಗಿದೆ ಮತ್ತು ಕೇಶವ ಶಿಲ್ಪ ಬಯಸಿದಂತೆ ಬದಲಾವಣೆಯ ನೀಲ ನಕಾಶೆಯೂ ಸಿದ್ಧಗೊಂಡಿದೆ. ಬಿಜೆಪಿ ಸರ್ಕಾರ ರಚನೆಗೊಂಡ ನಂತರ ಈಗ ಅದರ ಜಾರಿಗೆ ಸಂಘ ಪರಿವಾರ ಉತ್ಸುಕವಾಗಿದೆ. ಆದ್ದರಿಂದಲೇ ಶಿಕ್ಷಣ ಸಚಿವರು ತಮ್ಮ ಇಲಾಖೆಯಲ್ಲಿ ತರಬೇಕಾದ ಆದ್ಯತೆಯ ಸುಧಾರಣೆಗಿಂತ ಇತಿಹಾಸ ತಿರುಚುವಿಕೆಯನ್ನೇ ಆದ್ಯತೆಯನ್ನಾಗಿ ತೆಗೆದುಕೊಂಡಿರುವುದು ಖಂಡನೀಯ.




ಕೃಪೆ: ಪ್ರಜಾವಾಣಿ

ಈ ಕೇಸರಿ ಪಡೆ ಕೇವಲ ಶಿಕ್ಷಣದ ಕೋಮುವಾದೀಕರಣ ಮಾತ್ರವಲ್ಲ, ಉದಾರೀಕರಣ, ಜಾಗತೀಕರಣ, ಖಾಸಗೀಕರಣ ನೀತಿಗಳ ಪ್ರಬಲ ಸಮರ್ಥಕ ಹಾಗೂ ಜಾರಿಗೆ ಕಟಿಬದ್ಧ ಎಂಬುದನ್ನು ಮತ್ತೇ ಇಲ್ಲಿ ಜಗಜ್ಜಾಹೀರುಗೊಳಿಸಿವೆ. ಅಂಶ ಹಿಂದಿನ ಸರ್ಕಾರಗಳೂ ಸಹ ಶಿಕ್ಷಣವನ್ನು ಹಂತಹಂತವಾಗಿ ಖಾಸಗಿಯವರಿಗೆ ವಹಿಸುವ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಅದರಲ್ಲಿ 44,000 ಸರ್ಕಾರಿ ಪ್ರಾಥಮಿಕ ಶಾಲೆಗಳ ಪೈಕಿ ಮೊದಲ ಕಂತಿನಲ್ಲಿ 2500ನ್ನು ಉದ್ಯಮಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ಗೆ ವಹಿಸಲು ಹಿಂದಿನ ಸರ್ಕಾರ ನಿರ್ಧರಿಸಿತ್ತು. ಇದಕ್ಕೆ ವ್ಯಾಪಕ ವಿರೋಧವೂ ಬಂದಿತ್ತು. ಇದನ್ನು ತಿಳಿಸದೇ ಶಿಕ್ಷಣ ಸಚಿವರು ಸರ್ಕಾರಿ ಶಾಲೆಗಳನ್ನು ಮಠಾದೀಶರಿಗೆ ವಹಿಸುವುದಾಗಿ ಹೇಳಿದ್ದಾರೆ. ಬಿಸಿಯೂಟದಂತಹ ಕಾರ್ಯಕ್ರಮವನ್ನು ಇಸ್ಕಾನ್‌ನ ಅಕ್ಷಯ ಫೌಂಡೇಷನ್‌ಗೂ ಮತ್ತು ಸಂಸದ ಅನಂತ್‌ಕುಮಾರರ ಪತ್ನಿಯವರ ಒಡೆತನದ ಅದಮ್ಯ ಚೇತನ ಸಂಸ್ಥೆಗೆ ವಹಿಸುವುದಾಗಿಯೂ ಪ್ರಕಟಿಸಿದ್ದಾರೆ. ಒಂದೆಡೆ ಶಿಕ್ಷಣವನ್ನು ಖಾಸಗಿ ಕೈಗಾರಿಕೋದ್ಯಮಿಗಳಿಗೂ, ಮಠಗಳಿಗೂ ವಹಿಸಿಕೊಡುವುದು ಶಿಕ್ಷಣದ ಪರಿಸ್ಥಿತಿ ಏನಾದೀತೆಂದು ಗಂಭೀರವಾಗಿ ಚಿಂತಿಸಬೇಕಿದೆ.

ಹೀಗೆ ಜಾತೀಯತೆ, ಮತೀಯತೆ, ಅಂಧಶ್ರದ್ಧೆಗಳ ಕೂಪದಲ್ಲಿ ಶಿಕ್ಷಣವನ್ನು ಮುಳುಗಿಸಲು ಹೊರಟಿರುವ ಸರ್ಕಾರ ನಾಳಿನ ಪೀಳಿಗೆಯನ್ನೇ ನಾಶ ಮಾಡಲಿದೆ. ನಮ್ಮ ದೇಶ ಒಪ್ಪಿದ ಸಂವಿಧಾನದ ಅಡಿಪಾಯದ ಮತನಿರಪೇಕ್ಷತೆ (ಸೆಕ್ಯುಲಾರಿಸಂ) ಪ್ರಜಾಸತ್ತಾತ್ಮಕ, ವೈಜ್ಞಾನಿಕ ಮೌಲ್ಯಗಳಿಗೆ ಘಾತ ತರುವಂತಹದ್ದು ಸರ್ಕಾರದ ನಿರ್ಧಾರವಾಗಿದೆ.

ಆದ್ದರಿಂದ ನೀಲ ನಕಾಶೆ ಹಿಡಿದು ಸಾರ್ವಜನಿಕವಾಗಿ ಸಮರ್ಥಿಸುತ್ತಿರುವ ಕೋಮುವಾದಿ ಪಡೆಗಳ ಕಾರ್ಯಸೂಚಿಯ ಬಗ್ಗೆ ಎಚ್ಚರಗೊಳ್ಳಬೇಕಿದೆ. ಇದನ್ನು ಎದುರಿಸುವುದು ಅತೀ ಅಗತ್ಯವಾಗಿದೆ.

# ವಿಧಾನಸಭಾ ಕಲಾಪ : ಹೊಣೆಗಾರಿಕೆಯಿಂದ ಜಾರಿಕೊಂಡವರು




**'ಜನರ ಸಂಕಟಗಳಿಗೆ ಜನರೇ ಕಾರಣ' ಎಂದೇ ವಾದಿಸಿದ ಯಡಿಯೂರಪ್ಪನವರ ಸರ್ಕಾರ ಮೂರು ದಿನಗಳ ಕಲಾಪದ ಶಾಸ್ತ್ರ ನಡೆಸಿ, ಹೊಣೆಗೇಡಿತನವನ್ನು, ಜನರ ಬಗೆಗಿನ ದ್ವೇಷವನ್ನೂ ಹೊರ ಹಾಕಿತು.... ವಿರೋಧಪಕ್ಷಗಳೋ....?**

ಹೊಸ ಸರ್ಕಾರ, ಅಧಿಕಾರದಲ್ಲಿರುವವರಿಗೆ ಹೊಸ ಹುಮ್ಮಸ್ಸು! (ಯಾತಕ್ಕಾಗಿ), ವಿಧಾನಸೌಧದ ಗದ್ದುಗೆಯಲ್ಲಿ ಪ್ರತಿಷ್ಠಾಪಿತಗೊಂಡ ನಾಯಕರು-ಒಳಗಿನ ಗದ್ದಲ ಹೊರಗೇನೂ ಕೇಳಿಸುತ್ತಿದೆ. ಅದಕ್ಕೆ 'ತಕ್ಕ ಏರ್ಪಾಡು' ಮಾಡಲಾಗಿದೆ. ಕ್ಯಾಮರಾಗಳ ಕಣ್ಣು, ಪತ್ರಕರ್ತರ ಕೈ ತೊಳೆದುಕೊಂಡು ಕುಂತಿವೆ. ಆದರೆ ಹೊರಗಿನ ಗದ್ದಲ, ಸಂಕಟಗಳು ಒಳಗೆ ಕೇಳಿಸುತ್ತಿಲ್ಲ. ಈಚೆಗಿನ ಮೂರು ದಿನಗಳ ಅಧಿವೇಶನದಲ್ಲಿ ಆದದ್ದು ಇದೇ ಆಡಳಿತ ಪಕ್ಷ ವಿರೋಧ ಪಕ್ಷದವರ ಗದ್ದಲವೋ ಗದ್ದಲ, ಗೊಬ್ಬರ, ಗೋಲಿಬಾರ್, ಆತ್ಮಹತ್ಯೆ ಸುತ್ತಲೇ ಮಾತು ಧರಣಿ. ಆದರೆ ಅಂತಿಮವಾಗಿ ಸಿಕ್ಕ ಪರಿಹಾರವೇನು? ಚರ್ಚೆಯ ಪರಿಣಾಮವೇನು?... ಗೊಬ್ಬರದ ಹಾಹಾಕಾರ ನಿಲ್ಲಲಿಲ್ಲ. ಗುರಿ ಇಟ್ಟ ಕೋವಿಯ ಗುಂಡಷ್ಟೇ ಬದಲಿಸಲಾಗುವುದಂತೆ, ಆತ್ಮಹತ್ಯೆಗಳೋ ನಿತ್ಯದ ಮಾತು. ದಿನಾ ಸಾಯುವವರಿಗೆ ಅಳುವವರ್ಯಾರು?...

**ಅಧಿವೇಶನದ ಶಾಸ್ತ್ರ**

ಮೊನ್ನೆ 23ರಂದು ಆರಂಭಗೊಂಡಿದ್ದ ವಿಧಾನಸಭೆಯ ಅಧಿವೇಶನ ಸೇರಿದ್ದು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಲು, ಅಂಗೀಕರಿಸಲು, ಆದರೆ ವಿಚಿತ್ರವೆಂದರೆ ಇದರ ಮೇಲೆ ಚರ್ಚೆ ನಡೆಯಬೇಕಲ್ಲ. ವಂದನೆಯೂ ಸಲ್ಲಿಸಲಿಲ್ಲ. ಸಭಾಧ್ಯಕ್ಷರೇ ವಿಷಯ ಎತ್ತಿದರು, ಆಡಳಿತ ಪಕ್ಷದ ಒಬ್ಬರು ಮಂಡಿಸಿದರು. ಇನ್ನೊಬ್ಬರು ಅನುಮೋದಿಸಿ, 'ಧ್ವನಿ ಮತದಿಂದ' ಅಂಗೀಕರಿಸಿಯೇ ಬಿಟ್ಟರು. ಶಾಸ್ತ್ರವಂತೂ ಮುಗಿಯಿತು. ಇನ್ನೂ ಅಧಿವೇಶನದ ಬರಖಾಸ್ತು...

ಈ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನೆಪದಲ್ಲಾದರೂ ಸರ್ಕಾರದ ಪ್ರಕಟಿಸಿರುವ ನೀತಿ ನಿಯಮಗಳ ಬಗ್ಗೆ ತೀವ್ರವಾದ ವಿಮರ್ಶೆ ಚಿಂತನ-ಮಂಥನ ನಡೆಯಬೇಕಿತ್ತು. ಮಾತ್ರವಲ್ಲ ರಾಜ್ಯದ ಜನ ಹಾಹಾಕಾರದಲ್ಲಿದ್ದಾರೆ, ಹಲವು ಜ್ವಲಂತ ಸಮಸ್ಯೆಗಳು, ತಕ್ಷಣವೇ ಗಮನಹರಿಸಬೇಕಾದ ವಿಷಯಗಳು ನೂರಾರು. ವಿರೋಧ ಪಕ್ಷಗಳು ಸಹ ಗೋಲಿಬಾರ್, ಗೊಬ್ಬರ, ಪದ್ಮಪ್ರಿಯ ಪ್ರಕರಣದಲ್ಲಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಲಿವೆಯೆಂದು ಪ್ರಚಾರಿಸಲಾಗಿತ್ತು. ಇಂತಹ ವಿಷಯಗಳಲ್ಲಿ ಸಮಗ್ರ ಚರ್ಚೆಯಾಗಬೇಕಿತ್ತು. ಆದರೆ ಹೀಗಾಗಲಿಲ್ಲ. ಆಡಳಿತ -ವಿರೋಧ ಪಕ್ಷದವರಿಗೆ ಬೇಕಿರಲೂ ಇಲ್ಲ ಎಂಬುದು ಕಲಾಪದ ಸಮಯದಲ್ಲಿ ಹೊರಬಿತ್ತು.

ಆದ್ದರಿಂದಲೇ ಯಡಿಯೂರಪ್ಪನವರ ಸರ್ಕಾರ ವಿಸ್ತೃತ ಅವಧಿಯ ಪೂರ್ಣ ಪ್ರಮಾಣದ ಅಧಿವೇಶನವನ್ನೇ ನಡೆಸಬೇಕಿತ್ತು. ಆದರೆ ಮೂರು ದಿನಗಳ ಅವಧಿ ನಿಗದಿ ಮಾಡುವಲ್ಲಿಯೇ ಯಡಿಯೂರಪ್ಪನವರ ಸರ್ಕಾರ ಅಂತಹ ಅವಕಾಶವನ್ನು ನಿರಾಕರಿಸಿತು. ಈ ಮೂರು ದಿನಗಳಲ್ಲಿ ಗಂಭೀರ ಚರ್ಚೆ ನಡೆಸಲು ಸಾಧ್ಯವಿಲ್ಲ ಎಂಬುದು 'ಪೂರ್ಣ ವಯೋಮಾನ' ಇಲ್ಲೇ ಕಳೆದಿದ್ದೇವೆಂಬ ಅವರಿಗೆ, ಬಿಜೆಪಿಗೆ ಅರ್ಥವಾಗದ ಸಂಗತಿಯೇನಲ್ಲ.

**ಕೃಷಿ ಬಿಕ್ಕಟ್ಟು ಕಾರಣ ಅಲ್ಲವೆಂದ ಹೊಣೆಗೇಡಿ ಯಡ್ಡಿ:**

ಈ ನಡುವಿನಲ್ಲಿ ಬಂದ ಪ್ರಶ್ನೆಗಳಿಗೆ ಸರ್ಕಾರ ನೀಡಿದ ಪ್ರತಿಕ್ರಿಯೆಯೂ ಆತಂಕಕಾರಿಯಾಗಿಯೇ ಇತ್ತು. ಗೊಬ್ಬರ ಅಭಾವ, ಗೋಲಿಬಾರ್, ರೈತರ ಆತ್ಮಹತ್ಯೆಗಳ ಕುರಿತು ಒಂದು ಜಂಟಿ ಸದನ ಸಮಿತಿಯು ರಚನೆಯಾಗಬೇಕೆಂಬ ವಿರೋಧ ಪಕ್ಷಗಳ ಕೇಳಿಕೆ ಸರಿಯಾದುದು. ಇಂತಹ ಪ್ರಜಾಸತ್ತಾತ್ಮಕ ವಿಧಾನವನ್ನು ಅನುಸರಿಸಲು ಯಡಿಯೂರಪ್ಪನವರು ಖಡಾತುಂಡವಾಗಿ ನಿರಾಕರಿಸಿದರು. ಪ್ರತಿಯಾಗಿ ತಜ್ಞರ ಸಮಿತಿಯನ್ನು ರಚಿಸುವುದಾಗಿ ಹೇಳಿದ್ದು ವಿಧಾನಸಭೆಯೇ ಉತ್ತರ ಕಂಡುಕೊಳ್ಳಲು ಸಾಧ್ಯವಾಗದೇ, 'ಯಡಿಯೂರಪ್ಪನವರ ತಜ್ಞರು' (ಕೇಶವ ಶಿಲ್ಪದಿಂದಲೂ ಆದೀತು) ಕೊಡುವ ಸಲಹೆಗಳೇ ಸಾಕು ಎಂದು ಸಾಗು ಹಾಕುವ ಕ್ರಮವಾಗುವುದು ಎಂಬುದರಲ್ಲಿ ಸಂಶಯವೇ ಇಲ್ಲ. ಇಂತಹ 'ತಜ್ಞರ' ಹಲವಾರು ವರದಿಗಳು ಧೂಳು ಹಿಡಿದು ಕೂಡಿವೆ. ಡಾ:ವೀರೇಶ್‌ರಂತಹವರ ನೇತೃತ್ವದ ಆಯೋಗವಂತೂ ಆತ್ಮಹತ್ಯೆಗಳಿಗೆ ರೈತರನ್ನೇ ಹೊಣೆಗಾರರನ್ನಾಗಿಸಿದೆ ಮಾತ್ರವಲ್ಲ ಹಣದ ಪರಿಹಾರದ ಆಶೆಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಹೀನಾಯವಾಗಿ ಮೂದಲಿಸಲಾಗಿದೆ.

**ಹವಣಿಕೆ:**

ಮೊನ್ನಿನ ಅಧಿವೇಶನದಲ್ಲಿಯೂ ಯಡಿಯೂರಪ್ಪ ಅವರ ಸರ್ಕಾರ ನೀಡಿದ ಉತ್ತರವೂ ಇದೇ ಧಾಟಿಯದ್ದಾಗಿತ್ತು. ರೈತರ ಆತ್ಮಹತ್ಯೆಗಳ ಬಗ್ಗೆ ವರದಿ ಮಾಡುವಾಗ 'ಅವರ ವೈಯಕ್ತಿಕ ಸಮಸ್ಯೆಗಳೇ ಕಾರಣ' ವೆಂದು ಹೇಳಿದರಲ್ಲದೇ, ಹಾಗೆಯೇ ವರದಿ ನೀಡಲು ಗೃಹಮಂತ್ರಿ ಆಚಾರ್ಯರ ಮೂಲಕ ಆದೇಶವನ್ನು

ಪುಟ 10ಕ್ಕೆ

# ರಾಜಋಷಿಗಳ ಮಾರ್ಗದರ್ಶನವೂ ದರ್ಬಾರ್ ಹಾಲ್ ಸಮಾರಂಭವೂ

**ಆರ್.ರಾಮಕೃಷ್ಣ**

ಕರ್ನಾಟಕ ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ರಾಜ್ಯದಲ್ಲೆಲ್ಲಾ ಸಾಂಗೋಪಾಂಗವಾಗಿ ಭರ್ಜರಿ ಸನ್ಮಾನ ಸಮಾರಂಭಗಳು ನಡೆಯುತ್ತಿವೆ. ರಾಜ್ಯದ ಮಠಾಧೀಶರು, ಸಾಧು, ಸಂತರು ಸ್ವಾಮಿಗಳೆಲ್ಲಾ ಸಂತೃಪ್ತರಾಗಿದ್ದಾರೆ. ಭಕ್ತಾದಿಗಳು ಪೂರೈಸುವ ಹಣ್ಣು ಹಂಪಲು ತಿನ್ನುತ್ತಾ ಹಾಲು ಕುಡಿದು ನಾಡಿನ ಕ್ಷೇಮಕ್ಕಾಗಿ ಧ್ಯಾನ ಮಾಡುತ್ತಿದ್ದಾರೆ.

ನಮ್ಮ ನಾಡು ಮತ್ತಷ್ಟು ಮತ್ತಷ್ಟು ಸಮೃದ್ಧಿಯ ಕಡೆಗೆ ಮುನ್ನಡೆಯಲು ನೂತನ ನೂತನ ಮಹಾರಾಜರು ಚಿಂತನೆ ಗೈಯ್ಯುತ್ತಿದ್ದಾರೆ.

ಇಂತಹ ಸಂತಸದ ಸಂಭ್ರಮದ ಕ್ಷಣವನ್ನು ಸವಿಯಲು ಮನಸ್ಸಿಲ್ಲದ ಕೆಲವು ಕಿಡಿಗೇಡಿಗಳು ವಿರೋಧ ಪಕ್ಷಗಳ ಚಿತಾವಣೆಗಳಿಗೊಳಗಾಗಿ ರಸಗೊಬ್ಬರ, ಬೀಜ ಎಂದು ಇಲ್ಲ, ಸಲ್ಲದ ಕಿತಾಪತಿ ತೆಗೆದು ದೊಂಬಿ ಎಬ್ಬಿಸುವ ಪ್ರಯತ್ನ ಮಾಡಿದರೂ ಸರ್ಕಾರ ಅದಕ್ಕೆಲ್ಲಾ ಸೊಪ್ಪು ಹಾಕದೆ ಸಮರ್ಥವಾಗಿ ದೃಢವಾಗಿ ಎದುರಿಸಿದೆ.

ಈ ಕಿಡಿಗೇಡಿಗಳ ಎದೆಗೆ ಸದೃಢವಾದ ಗುಂಡನ್ನೇ-ಒರಿಜಿನಲ್ ಗುಂಡನ್ನೇ ಹಾಕಿ ದೊಂಬಿಯನ್ನು ಹತ್ತಿಕ್ಕಲಾಗಿದೆ. ಇರಲಿ ಅದೆಲ್ಲಾ ಈಗಾಗಲೇ ಹಳೆಯ ಸಮಾಚಾರವು. ಪರಂತು, ಹೊಸ ಸಮಾಚಾರವೆಂದರೆ, ರಾಜ್ಯದ ನೂತನ ಮಹಾರಾಜರಿಗೆ, ಮಂತ್ರಿಗಳಿಗೆ ಹಿಂದಿನ ಕಾಲದಲ್ಲೆಲ್ಲಾ ಇದ್ದಂತೆ ರಾಜಋಷಿಗಳ ಆಶೀರ್ವಚನ ಮಾರ್ಗದರ್ಶನ ಸರ್ಕಾರಕ್ಕೆ ಬೇಕು ಅನಿಸಿತಂತಲ್ಲ.

ಹೀಗಾಗಿ ನಾಡಿನ ರಾಜಋಷಿ ಸಮಾನರಾದ ಸನ್ಮಾನ್ಯ ಡಾ: ವೀರೇಂದ್ರ ಹೆಗ್ಗಡೆಯವರು ಮಹಾರಾಜರ ದರ್ಬಾರ್‌ಗೆ ಅಂದರೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ಗೆ ಬಿಜಂಗೈಸಿ ಆಶೀರ್ವಚನ ಕೊಡಿಸಿದ್ದಾರಲ್ಲಾ, ಇನ್ನು ರಾಜ್ಯ ಇನ್ನಷ್ಟು, ಮಗದಷ್ಟು ಸಮೃದ್ಧವಾಗದೇ ಇದ್ದೀತೆ.

ಇಂತಹ ಸುಭಿಕ್ಷ ರಾಜ್ಯದಲ್ಲಿ ರೈತರಾದರೂ ಯಾಕೆ ಆತ್ಮ ಹತ್ಯೆ ಮಾಡಿಕೊಂಡಾರು? ಆಕಸ್ಮಾತ್ ಕೆಲವು ರೈತರು ಆತ್ಮ ಹತ್ಯೆ ಮಾಡಿಕೊಂಡರೂ ಅದು ಸರ್ಕಾರವು ಕೊಡುವ ಪರಿಹಾರಕ್ಕಾಗಿ ಎಂದು ನಮ್ಮ ರಾಜಋಷಿಗಳು ತಮ್ಮ ದಿವ್ಯಜ್ಞಾನದಿಂದ ಕಂಡುಕೊಂಡ ಸತ್ಯವನ್ನು ಯಾವ ಲಜ್ಜೆಯೂ ಇಲ್ಲದೆ ಸಮಾರಂಭದಲ್ಲಿ ಸಾರಿಬಿಟ್ಟರಲ್ಲ.

ಸತ್ಯವನ್ನು ಸಾರಲು ಲಜ್ಜೆಯಾದರೂ ಯಾಕೆ? ಹಿಂದೆ ವಿಶ್ವಬ್ಯಾಂಕು ಕೊಟ್ಟ ಜಾಗತೀಕರಣದ ದುರ್ಬೀನು ಹಿಡಿದುಕೊಂಡು ರೈತರ ಆತ್ಮ ಹತ್ಯೆಗಳಿಗೆ ಕಾರಣ ಹುಡುಕಿದ ಶ್ರೀಕೃಷ್ಣರಿಗೂ, ಅವರು ನೇಮಿಸಿದ ಕೃಷಿ ತಜ್ಞರಿಗೂ ಇದೇ ಸತ್ಯವೇ ಗೋಚರವಾಗಿತ್ತಲ್ಲ.



ರಾಜಋಷಿಗಳಾದರೋ ಏನು ಹೇಳಿದರು? 'ರೈತನು ತಾನು ಬದುಕಿದ್ದರೆ ಬೆಲೆ ಇಲ್ಲ. ಸತ್ತರೆ ಬೆಲೆ ಸಿಗುತ್ತದೆ. ಅಂದರೆ ಪರಿಹಾರ ಸಿಗುತ್ತದೆ ಎಂದುಕೊಂಡು ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾನೆ' ಎಂದು ಆಶೀರ್ವಚನ ಕೊಟ್ಟಿದ್ದಾರೆ.

ರಾಜ್ಯದ ದರ್ಬಾರ್‌ನಲ್ಲಿ ನೆರೆದಿದ್ದ ಕೆಲವರು ಮುಖ ಚಿಕ್ಕದು ಮಾಡಿಕೊಂಡರೂ ಬಹುತೇಕರು ಮಹಾರಾಜರಾದಿಯಾಗಿ ಖ್ಯಾತ ಸಾಯಿತಿ, ಬುದ್ಧಿಜೀವಿಗಳು, ಗಣ್ಯ ಸಭಿಕರು ವಂದಿ ಮಾಗಧರೆಲ್ಲ ಇದಕ್ಕೆ ಯಾವ ಆಕ್ಷೇಪವನ್ನು ಎತ್ತದೆ ರಾಜಋಷಿಗಳ ಮಾತನ್ನು ಒಪ್ಪಿ ತಲೆದೂಗಿ ಚಪ್ಪಾಳೆ ತಟ್ಟಿರುವುದರಿಂದ ಹಿಂದಿನ ಶ್ರೀ ಕೃಷ್ಣರ ಸರ್ಕಾರದ ಸತ್ಯದ ಹಾದಿಯನ್ನೇ ಈ ಸರ್ಕಾರವೂ ತುಳಿಯುತ್ತದೆ ಎಂಬ ಬಗೆಗೆ ಈಗ ಯಾವುದೇ ಸಂಶಯ ಅಗತ್ಯವಿಲ್ಲ. ಆಗಲೀಗ, ಕಾರ್ಯಕ್ರಮದ ಪ್ರಸ್ತಾವನೆಯಲ್ಲಿ ನಗೆಯನ್ನೇ ಮೊಗವನ್ನಾಗಿ ಮಾಡಿಕೊಂಡಿದ್ದ ಯುವತಿಯೊಬ್ಬಳು ಪತ್ರಿಕೆಯ ಕೆಲಸ ಎಂದರೆ ಸರ್ಕಾರದ ಕೆಲಸಗಳ ಬಗೆಗೆ 'ಬೊಗಳಿ ಎಚ್ಚರಿಸುವ ಕಾಯಲು ನಾಯಿ'ಯ ಕೆಲಸ ಎಂದು ಬಿಟ್ಟಳಲ್ಲ.

ನಿರೂಪಕಿಯ ಈ ಮಾತು ಅರ್ಥವಾಗದೇ ಕುಳಿತ ಜನರಿಗೆ ಈ ಸಮಾರಂಭವನ್ನು ಪ್ರೇರಿಪಿಸಿದ, ಯೋಜಿಸಿದ ವಿ.ಕ. ಎಂಬ ಪ್ರತಿಕೆಯ ಸಂಪಾದಕ ವಿಪ್ರಭಟ್ಟರು ನಂತರ ಈ ರೂಪಕದ ಈ ಮಾತಿನ ಅರ್ಥವನ್ನು ಬಿಡಿಸಿ ಹೇಳಿದರಲ್ಲ; ಜನರ ದೂರು ದುಮ್ಮಾನಗಳಿಗೆ 'ನಮ್ಮ ಆಸೆ-ನಿಮ್ಮ ಭಾಷೆ' ಅಂತ ಒಂದು ಅಂಕಣದಲ್ಲಿ ವೇದಿಕೆ ಒದಗಿಸಿ ಅಭಿಯಾನ ನಡೆಸಿದ ಭಟ್ಟರು ಆ ದೂರು ದುಮ್ಮಾನಗಳನ್ನು ರಾಜರ ದರ್ಬಾರಿಗೆ ತಂದು ಮಹಾರಾಜರ ಪಾದ ಕಮಲಗಳಲ್ಲಿ ಇಡಲು ಈ ಸಮಾರಂಭವನ್ನು ಯೋಜಿಸಿದರಂತಲ್ಲ.

ಪುಟ 15ಕ್ಕೆ

# 'ಹೃದಯದಲಿ ಇದೇನಿದು.....?'

ಗೊಬ್ಬರ ಸಮಸ್ಯೆ ಬಗ್ಗೆ ಬಿ.ಜೆ.ಪಿ ಯಿಂದ ಬೀದಿ ಹೋರಾಟ. !ಗೊಬ್ಬರ ಸಮಸ್ಯೆ ಬಗ್ಗೆ ದೆಹಲಿಯಲ್ಲಿ ಧರಣ ಮಾಡುವುದಾಗಿ ಮುಖ್ಯಮಂತ್ರಿ ಬೆದರಿಕೆ.

---

ನಿಮ್ಮದೇ ಪಕ್ಷ ಕಣ್ರೀ ಈಗ ಅಧಿಕಾರದಲ್ಲಿರೋದು! ಒಪ್ಕೊಂಡಂಗಾಯ್ತಲ್ರೀ, ನಿಮಗೆ ಆಡಳಿತ ಮಾಡಕ್ಕೆ ಬರಲ್ಲ, ಬಂದಿರುವ ಗೊಬ್ಬರ ನಾದರೂ ಹಂಚಿಲ್ಲ, ಕಾಳಸಂತೆಕೋರರನ್ನು ಪತ್ತೆ ಮಾಡಲಿಲ್ಲ, ನಕಲಿ ಓರಾಟ ಮಾಡಕ್ಕೇ ಲಾಯಕ್ಕು ಅಂತ!

•••

ಗೊಬ್ಬರ ಸಮಸ್ಯೆಗೆ ರಾಜ್ಯಪಾಲರು ಕಾರಣ ಅಂತ ಕಾಲು ಕೆರ್ಕೊತಿದ್ದೋರು ಇದ್ದಕ್ಕಿದ್ದಂತೆ (ಲಾಭ ಇಲ್ಲ ಅಂತ ಗೊತ್ತಾಗಿ?) ಗೊಬ್ಬರ ಸಮಸ್ಯೆಗೆ ಕೇಂದ್ರ ಸರ್ಕಾರ ಕಾರಣ , ರಾಜ್ಯದ ಪಾತ್ರ ಏನೂ ಇಲ್ಲ ಅಂತ ಕಿರಿಚಿ ಕೊಳ್ಳುತ್ತಿದ್ದಾರೆ.

---

ರಾಜ್ಯಪಾಲರ ಆಡಳಿತದಲ್ಲಿದ್ದ ಅಧಿಕಾರಿಗಳೇ ಅಲ್ವೇನ್ರೀ ಈಗ್ಲೂ ಇರೋದು? ಅವ್ರಿಗೇನ್ರೀ ಮಾಡಿದೀರಾ? ಆ ಅಧಿಕಾರಿಗಳ ವಿರುದ್ಧನೂ ಧರಣ ಮಾಡ್ತೀರೇನ್ರೀ?

•••

ಸರ್ಕಾರ, ಅಧಿಕಾರ, ಗೋಲಿಬಾರು, ಆರೋಪ, ಹೋರಾಟ, ಧರಣ, ಎಲ್ಲಾ ನೀವೇ ಮಾಡಿ, 'ಕಮಲ' ಹಾಸನ್ ಥರ ಹೀರೋ, ವಿಲನ್ನು, ಮುದುಕಿ, ಸಹ ನಟರು ಎಲ್ಲಾ ರೋಲೂ ನೀವೇ ಮಾಡಿದ್ರೆ, ಬೇರೆಯವರು ಏನ್ರೀ ಮಾಡಬೇಕು?

---

ಇದುವರೆಗೂ ರಾಜ್ಯದಲ್ಲಿ ಗೊಬ್ಬರಕ್ಕಾಗಿ ಯಾವ ರೈತರೂ ಸತ್ತಿಲ್ಲ ಅಂತ ಸನ್ಮಾನ್ಯ ಶ್ರೀ ಶ್ರೀ ಉಗ್ರಪ್ರತಾಪಿ ಮುಖ್ಯಮಂತ್ರಿ ಗಳ ಉವಾಚ.

•••

ಆಹಹಾ., ಏನ್ ಕರೆಕ್ಟಾಗಿ ಹೇಳಿದ್ದಾರಲ್ರೀ? ಗೊಬ್ಬರಕ್ಕಾಗಿ ಯಾವ ರೈತರೂ ಸತ್ತಿಲ್ಲ! ಆಕಸ್ಮಾತ್ ಗೊಬ್ಬರಕ್ಕಾಗಿ ಸತ್ತಿದ್ದರೂ ಅವರು ರೈತರಲ್ಲ! ಆಕಸ್ಮಾತ್ ಅವರು ರೈತರಾಗಿದ್ದರೂ ಅವರು ಗೊಬ್ಬರಕ್ಕಾಗಿ ಸತ್ತಿಲ್ಲ! ಆಕಸ್ಮಾತ್ ಅವರು ರೈತರೇ ಆಗಿದ್ದು, ಗೊಬ್ಬರಕ್ಕಾಗೇ ಸತ್ತಿದ್ದರೆ ಅದಕ್ಕೆ ರಾಜ್ಯ ಸರ್ಕಾರ ಕಾರಣ ಅಲ್ಲ.

---

ನಮ್ಮ ಹೃದಯದಲ್ಲಿ ಕೇಸರಿ ಇದೆ , ಹಸಿರು ಶಾಲು ಹೊದ್ದದ್ದು ಜನರಿಗೆ ರೈತರಿಗೆ ತೋರಿಸಲು ಮಾತ್ರ - ಕೆ.ಎಸ್. ಈಶ್ವರಪ್ಪ.

•••

ಅಯ್ಯೋ , ಅಯ್ಯೋ, ಅಯ್ಯೋ, ಏನ್ರೀ ಇದು? ಒಂದೊದ್ ಸಲ ಹಿಂಗೆ ಸತ್ಯದ ತಲೆ ಮೇಲೆ ಹೊಡೆದಂಗೆ ನಿಜ ಹೇಳಿಬಿಟ್ಟರೆ, ನಮ್ಗೊಂದ್ ಥರಾ ಶಾಕ್ ಆಗ್ಬಿಡುತ್ತಪ್ಪ!

---

'ರೈತರ ಮೇಲೆ ಗೋಲಿಬಾರ್ ಬಗ್ಗೆ ಸದನದಲ್ಲಿ ಚರ್ಚೆ ನಡೆಯುಯುವಾಗ ರೇವಣ್ಣ ಪಕ್ಷ ಭೇದವಿಲ್ಲದೆ ಎಲ್ಲ ಸದಸ್ಯರೂ ನಗೆಗಡಲಿನಲ್ಲಿ ತೇಲುವಂತೆ ಮಾಡಿದರು.

•••

ರೇವಣ್ಣ, ನೀವೂ ಒಂದು ಕಾಮಿಡಿ ಸೀರಿಯಲ್ ಮಾಡ್ಬೋದು ಕಣ್ರೀ . ಹಾಸ್ಯ ಸಂಜೆ, ಹಾಸ್ಯ ರಾತ್ರಿ ಅಂತ ನಡೆಯೋ ಎಲ್ಲ ಕಾರ್ಯಕ್ರಮಗಳಲ್ಲೂ ಅದದೇ ಮುಖಗಳನ್ನು ನೋಡೀ ನೋಡೀ, ಅದದೇ ಹಳಸಲು ಜೋಕುಗಳನ್ನು ಕೇಳೀ ಕೇಳೀ, ಬೋರಾಗಿದೆ. ಗೋಲಿಬಾರಲ್ಲೂ ಹಾಸ್ಯ, ಮರ್ಡರಲ್ಲೂ ಹಾಸ್ಯ ಕಾಣೋ ನಿಮ್ಮ ಪ್ರತಿಭೆ ಬರೀ ಸದನಕ್ಕೆ ಸೀಮಿತ ಆಗಬಾರದು ಕಣ್ರೀ.

---

ಹಣದುಬ್ಬರ ಶೇ.11.05ಕ್ಕೆ ಏರಿದ್ರೂ, ಸನ್ಮಾನ್ಯ ವಿ(ಪಿ)ತ್ತ ಸಚಿವ ಶ್ರೀ ಚಿದಂ ಭರ್ಜಿ 'ಏನೂ ಗಾಬರಿ ಆಗಬೇಡಿ ಅಂತ ಜನಕ್ಕೆ ಸಮಾಧಾನ ಹೇಳಿದ್ದಾರೆ.

•••

ಇಷ್ಟಕ್ಕೆಲ್ಲ ಹೆದ್ರುಕೊಂಡ್ರೆ ಹೆಂಗೆ? ಮುಂದೆ ಇನ್ನೂ ಏನೇನು ಕಾದಿದೆಯೋ ಅಂತ ಏನ್ರೀ?

---

ಕಚ್ಚಾ ತೈಲ ಬೆಲೆ ಏರಿಕೆಗೆ ಸಟ್ಟಾ ವ್ಯಾಪಾರ ಕಾರಣ ಅಂತ ಚಿದಂ'ಭರ್ಜಿ' ಒಪೆಕ್ ರಾಷ್ಟ್ರಗಳಿಗೆ ಹೇಳಿದ್ದಾರೆ.

•••

ನಾವೂ ಅದನ್ನೇ ಕಣ್ರೀ ಬಡಕೋತಿರೋದು, 'ಆಹಾರ ಧಾನ್ಯಗಳ ಸಟ್ಟಾ ವ್ಯಾಪಾರವೇ ಬೆಲೆ ಏರಿಕೆಗೆ ಕಾರಣ, ಮೊದಲು ಅದನ್ನು ನಿಲ್ಲಿಸಿ ಅಂತ. ಇಲ್ಲಿ ಏನೂ ಮಾಡದೇ ಹೋಗಿ, ಅಲ್ಲಿ ಕತೆ ಹೇಳ್ತೀರಲ್ರೀ. ?

---

ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಜೀ ಪೆನ್ನು ಹಿಡ್ ಕೊಂಡು ಓಡ್‌ತಾ ಇದಾರಂತೆ, ಅಣು ಒಪ್ಪಂದಕ್ಕೆ ಸಹಿ ಹಾಕಲು.

•••

ಯಾಕ್ರೀ ಮನಮೋಹನ್‌ಜೀ, ಅ(ನ)ರ್ಥ ಮಂತ್ರಿ ಆಗಿದ್ದಾಗ ಎಲ್. ಪಿ. ಜಿ. ಗೆ ಮುನ್ನುಡಿ, ಪ್ರಾರ್ಥನೆ ಬರೆದೋರು ನೀವೇ ಅಂತ ಕಿರೀಟ ಧರಿಸಿದ್ದೀರಿ, ಈಗ ಚರಮ ಗೀತೆನೂ ಬರೆದು ಅದನ್ನು ನಿಮ್ಮ ಕಿರೀಟದ ಗರಿ ಮಾಡಕೋಬೇಕೂಂತಿ ದಿರೇನ್ರೀ?

(ಎಲ್.ಪಿ.ಜಿ : ಲೂಟೀಕರಣ, ಪಾಪರೀಕರಣ, ಗುಲಾಮೀಕರಣ)




# ಕಳಚುತ್ತಿರುವ ಕೆ.ಎಫ್.ಡಿ. ಮುಖವಾಡ

**ಕೆಎಫ್‌ಡಿಯಿಂದಾಗಿ ಮುಸ್ಲಿಂ ಸಮುದಾಯದ ಯುವಕರು ದಾರಿತಪ್ಪುತ್ತಿರುವುದು, ಮುಸ್ಲಿಂ ಸಮುದಾಯ ಅಪಾಯದಲ್ಲಿ ಸಿಲುಕುತ್ತಿರುವುದು, ಭಜರಂಗದಳ, ಬಿಜೆಪಿಗೆ ಪರೋಕ್ಷವಾಗಿ ಕೆಎಫ್‌ಡಿ ಯಿಂದ ಲಾಭವಾಗುತ್ತಿರುವು ದರಿಂದ ಕೆಎಫ್‌ಡಿಯ ಬೆಳವಣಿಗೆಯನ್ನು ತಡೆಗಟ್ಟುವ ಯತ್ನ ಮುಸ್ಲಿಂ ಪ್ರಜ್ಞಾವಂತರಿಂದ ಆರಂಭವಾಗಿದೆ.**

ಸಂಘ ಪರಿವಾರದ ವಿರುದ್ಧ ಹೋರಾಟ, ಜಾತ್ಯಾತೀತಿತೆ ಮುಸ್ಲಿಮರ ರಕ್ಷಣೆ ಮುಂತಾದ ಮುಖವಾಡಗಳನ್ನು ಧರಿಸಿ ಮುಸ್ಲಿಮರನ್ನು ಹಾಗೂ ಜಾತ್ಯಾತೀತ ಸಂಘಟನೆಗಳನ್ನು ಮರುಳುಗೊಳಿಸಿದ್ದ ಕೆಎಫ್‌ಡಿಯ ಘುಖವಾಡ ಕರಾವಳಿಯಲ್ಲಿ ಒಂದೊಂದಾಗಿ ಕಳಚಿ ಬೀಳತೊಡಗಿದೆ. ಮುಖವಾಡದ ಹಿಂದಿರುವ ಕೆಎಫ್‌ಡಿಯ ಕರಾಳ ಮುಖವನ್ನು ಕಂಡು ಕರಾವಳಿಯ ಮುಸ್ಲಿಮರು ದಂಗು ಬಡಿದು ಹೋಗಿದ್ದಾರೆ.

**ಇಮೇಜ್‌ಗೆ ಯತ್ನ :**

ಬಹಿರಂಗದಲ್ಲಿ ಸಂಘ ಪರಿವಾರದ ಕೋಮುವಾದದ ವಿರುದ್ಧ ಚಳುವಳಿ ನಡೆಸುತ್ತಾ ಕೆಲವು ಜಾತ್ಯಾತೀತ ಮನೋಭಾವದವರ ಒಲವು ಗಳಿಸಿಕೊಂಡ ಕೆಎಫ್‌ಡಿ ಮಾವೋವಾದಿಗಳೊಂದಿಗೆ ರಾಷ್ಟ್ರೀಯ ಮಟ್ಟದಲ್ಲಿ ತಮಗಿದ್ದ ಹೊಂದಾಣಿಕೆಯ ಅನುಸಾರವಾಗಿ ಕೋಮುಸೌಹಾರ್ದ ವೇದಿಕೆಯ ಮುಂಚೂಣಿಯಲ್ಲಿದ್ದು ಮಿಂಚುತ್ತಿತ್ತು. ಕೋಮು ಸೌಹಾರ್ದ ವೇದಿಕೆಯಿಂದಾಗಿ ಮುಸ್ಲಿಮರ ಮಧ್ಯೆ, ಜಾತ್ಯಾತೀತ ಸಂಘಟನೆಗಳ ನಡುವೆ ಪ್ರಭಾವ ವಿಸ್ತರಿಸಿಕೊಂಡಿತ್ತು. ದಲಿತರ, ಶೋಷಿತರ ಬಗ್ಗೆ ಭಾಷಣ ಬಿಗಿಯುತ್ತಿದ್ದ ಕೆಎಫ್‌ಡಿ ಸಾಮ್ರಾಜ್ಯಶಾಹಿಗಳ ವಿರುದ್ಧ, ಬುಷ್ ಭಾರತ ಭೇಟಿಯ ವಿರುದ್ಧ ಕಾರ್ಯಕ್ರಮ ನಡೆಸಿ, ಎಡಪಂಥೀಯ ಇಮೇಜ್ ಗಳಿಸಿಕೊಳ್ಳುವ ಪ್ರಯತ್ನವನ್ನು ಜೋರಾಗಿಯೇ ನಡೆಸಿ ಸ್ವಲ್ಪ ಮಟ್ಟಿನ ಯಶಸ್ಸು ಗಳಿಸಿಕೊಂಡಿತ್ತು.

ಆದರೆ ಆಂತರಿಕವಾಗಿ ತನ್ನ ಕಾರ್ಯಕರ್ತರನ್ನು ಕಟ್ಟಾ ಮತೀಯ ತೀವ್ರವಾದಿಗಳಾಗಿ ಪರಿವರ್ತಿಸುತ್ತಿರುವ ಕೆಎಫ್‌ಡಿ ಅವರ ಮನಸ್ಸಿನಲ್ಲಿ ಕುರುಡು ಮತೀಯ ದ್ವೇಷವನ್ನು ಮೂಡಿಸಿದೆ. ಹೀಗೆ ಬ್ರೈನ್‌ವಾಷ್‌ಗೊಳಗಾದ ಯುವಕರನ್ನು ಬಳಸಿಕೊಂಡು ಬಲಿಷ್ಠವಾದ ಸಂಘಟನೆ ಕಟ್ಟಿದ ಅವರು ಸಾವಿರಾರು ಜನರನ್ನು ಸೇರಿಸಿ ಸಭೆ ನಡೆಸುವಷ್ಟರ ಮಟ್ಟಿಗಿನ ಶಕ್ತಿ ಬೆಳೆಸಿಕೊಂಡಿದ್ದರು. ಕೆಎಫ್‌ಡಿಯ ನೈಜ ಮುಖವನ್ನು ಅರಿತಿದ್ದ [illegible] ಮೂರು ವರ್ಷಗಳ ಹಿಂದೆಯೇ ತನ್ನ ರಾಜ್ಯ ಸಮ್ಮೇಳನದಲ್ಲಿ ಕೆಎಫ್‌ಡಿಯ ಅಪಾಯಗಳ ಬಗ್ಗೆ ನಿರ್ಣಯ ಅಂಗೀಕರಿಸಿತ್ತು. ಆ ಸಂದರ್ಭದಲ್ಲಿ ನಿರ್ಣಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ಹಲವರಿಗೆ ಇಂದು ವಾಸ್ತವ ಅರಿವಾಗತೊಡಗಿದೆ.


**ಅಸಲೀಮುಖ:**

ತನ್ನ ಕಾರ್ಯಕ್ರಮ, 'ಶಿಸ್ತು', ಪ್ರಚಾರ ವೈಖರಿಯಿಂದ ಮುಸ್ಲಿಂ ಯುವಕರನ್ನು ಆಕರ್ಷಿಸಿದ ಕೆಎಫ್‌ಡಿ ತನ್ನ ನೆಲೆಗಟ್ಟಿಗೊಂಡ ನಂತರ ಅಸಲಿ ಕಾರ್ಯಕ್ರಮ ಆರಂಭಸಿತು. ಭಜರಂಗ ದಳದ ಜೊತೆಗೆ ಅವರದೇ ಮಾದರಿಯಲ್ಲಿ ಕಾದಾಟಕ್ಕೆ ಇಳಿಯಿತು. ಮುಸ್ಲಿಂ ಹುಡುಗಿಯರ ಜೊತೆಗೆ ಮಾತನಾಡುವ ಹಿಂದೂ ಹುಡುಗರಿಗೆ ಹಲ್ಲೆ, ಮುಸ್ಲಿಂ ಪ್ರೇಮಿಗಳನ್ನು ಸಾರ್ವಜನಿಕ ವಾಗಿ ಹಿಡಿದು ಮಾನ ಹರಾಜು ಹಾಕುವುದು, ಜೊತೆಯಲ್ಲಿ ತಿರುಗಾಡಿದ ಕಾರಣಕ್ಕೆ ಬಲವಂತದ ಮದುವೆ ಮಾಡಿಸುವುದು, ಸಣ್ಣಪುಟ್ಟ ಕಾರಣಗಳನ್ನು ಮುಂದಿಟ್ಟು ಹಿಂದೂ ಗಳೊಂದಿಗೆ ಕಾಲುಕೆರೆದು ಜಗಕ್ಕಿಳಿಯುವುದು ಮುಂತಾದ ಪುಂಡಾಟದಲ್ಲಿ ತೊಡಗಿತು. ಬಿ.ಸಿ.ರೋಡಿನ ಹೂವಿನ ವ್ಯಾಪಾರಿಯ ಮೇಲಿನ ಮಾರಣಾಂತಿಕ ಹಲ್ಲೆ, ಪಡುಬಿದ್ರೆಯ ಭಜರಂಗಿ ಪ್ರಕಾಶನ ಕೊಲೆ ಯತ್ನ ಮುಂತಾದವುಗಳಲ್ಲಿ ಕೆಎಫ್‌ಡಿಯ ನೆರಳಿನ ಆರೋಪ ಕಾಣಿಸಿಕೊಂಡಿತು.

**ಭಜರಂಗದಳದ ಜೊತೆಗೆ ಅವರದೇ ಮಾದರಿಯಲ್ಲಿ ಕೆಎಫ್‌ಡಿ ಕಾದಾಟಕ್ಕೆ ಇಳಿಯಿತು. ಮುಸ್ಲಿಂ ಹುಡುಗಿಯರ ಜೊತೆಗೆ ಮಾತನಾಡುವ ಹಿಂದೂ ಹುಡುಗರಿಗೆ ಹಲ್ಲೆ, ಮುಸ್ಲಿಂ ಪ್ರೇಮಿಗಳನ್ನು ಸಾರ್ವಜನಿಕವಾಗಿ ಹಿಡಿದು ಮಾನ ಹರಾಜು ಹಾಕುವುದು, ಜೊತೆಯಲ್ಲಿ ತಿರುಗಾಡಿದ ಕಾರಣಕ್ಕೆ ಬಲವಂತದ ಮದುವೆ ಮಾಡಿಸುವುದು, ಸಣ್ಣಪುಟ್ಟ ಕಾರಣಗಳನ್ನು ಮುಂದಿಟ್ಟು ಹಿಂದೂಗಳೊಂದಿಗೆ ಕಾಲುಕೆರೆದು ಜಗಕ್ಕಿಳಿಯುವುದು ಮುಂತಾದ ಪುಂಡಾಟದಲ್ಲಿ ತೊಡಗಿತು.**

ಸುಖಾನಂದ ಶೆಟ್ಟಿಯ ಹತ್ಯೆ, ಇತ್ತೀಚೆಗೆ ಜಾಗರಣ ವೇದಿಕೆಯ ಮುಖಂಡ ರವಿರಾಜನ ಕೊಲೆ ಯತ್ನ ಮುಂತಾದವುಗಳಲ್ಲಿ ಕೆಲವು ಕೆಎಫ್‌ಡಿ ಕಾರ್ಯಕತರು ಜೈಲು ಪಾಲಾಗಿದ್ದಾರೆ. ಇದು ಇನ್ನೊಂದು ರೀತಿಯಲ್ಲಿ ಜಿಲ್ಲೆಯಲ್ಲಿ ಪ್ರಭಾವ ಕಳೆದುಕೊಳ್ಳುತ್ತಿದ್ದ ಭಜರಂಗದಳವನ್ನು ಮತ್ತೆ ಗಟ್ಟಿಗೊಳಿಸಲು ಸಹಕಾರಿಯಾಯಿತು. ಈ ಎಲ್ಲಾ ಪ್ರಸಂಗಗಳನ್ನು ಅವರು ಬಳಸಿಕೊಂಡರು.

ಇಷ್ಟು ಸಾಲದೆಂಬಂತೆ ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಾವೋವಾದಿಗಳ ಒಂದು ಬಣದೊಂದಿಗೆ ಕೈ ಜೋಡಿಸಿ ಪ್ರಜಾಪ್ರಭುತ್ವಕ್ಕಾಗಿ ಜನತೆ ಎಂಬ ವೇದಿಕೆಯನ್ನು ರಚಿಸಿ ಬಿಜೆಪಿಯನ್ನು ಸೋಲಿಸುವ ಅಭ್ಯರ್ಥಿಗಳಿಗೆ



ನಮ್ಮ ಬೆಂಬಲ ಎಂದು ರಂಗಕ್ಕಿಳಿಯಿತು. ಕರಾವಳಿಯಲ್ಲಿಯೂ ಕವಿರಂನ ಕೆ.ಎಲ್.ಅಶೋಕ ರೊಂದಿಗೆ ಪತ್ರಿಕಾ ಗೋಷ್ಠಿಯನ್ನು ನಡೆಸಿತು.

ಕೆಲವೇ ದಿನಗಳಲ್ಲಿ 'ಕವಿರಂ' ಗೆ ಕೈ ಕೊಟ್ಟು ತಾನು ಚುನಾವಣೆಗೆ ಸ್ಪಧಿಸುವುದಾಗಿ ಘೋಷಿಸಿ, ಕರಾವಳಿಯ ನಾಲ್ಕೈದು ಕಡೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಿತು. 'ಮೂಲ್ಕಿಯ ಕಾಂಗ್ರೆಸ್ ಅಭ್ಯರ್ಥಿ ತಮ್ಮ ಸಂಘಟನೆಗೆ ಗೌರವ ನೀಡಲಿಲ್ಲ' ಎಂಬ ನೆಪವನ್ನೊಡ್ಡಿ ಅವರನ್ನು ಸೋಲಿಸುವುದಾಗಿ ಘೋಷಿಸಿತು.

**ಭಸ್ಮಾಸುರ -ಬಹಿರಂಗ :**

'ತಾನು ಏನು ಹೇಳಿದರೂ ಮುಸ್ಲಿಮರು ಬೆಂಬಲಿಸುತ್ತಾರೆ' ಎಂಬ ಭ್ರಮೆಯಲ್ಲಿದ್ದ ಕೆಎಫ್‌ಡಿಗೆ ಆವಾಗ ಮುಸ್ಲಿಮರು ಸರಿಯಾಗಿ ಜಾಡಿಸ ತೊಡಗಿದರು. ಮುಖಭಂಗ ಕ್ಕೊಳಗಾದ ಸಂಘಟನೆಯು ಅಭ್ಯರ್ಥಿಗಳನ್ನು ಹಿಂದಕ್ಕೆ ಪಡೆಯಿತು. ಅಷ್ಟಕ್ಕೆ ಸುಮ್ಮನಾಗದೇ 'ಕರ್ನಾಟಕದ ಮೋದಿ' ಬಂಟ್ವಾಳದ ನಾಗರಾಜಶೆಟ್ಟಿಯನ್ನು ಗೆಲ್ಲಿಸಲು ಪಣತೊಟ್ಟರು. ಬಿಜೆಪಿಯ ನಾಗರಾಜಶೆಟ್ಟಿ ಯೊಂದಿಗೆ ಒಳ ಒಪ್ಪಂದವನ್ನು ಮಾಡಿ ಕೊಂಡು, ಕಾಂಗ್ರೆಸ್ ಬಂಡಾಯ ನಾಯಕ ಕುಂಠಿಕೊಪ್ಪ ಇಬ್ರಾಹಿಂಗೆ ಗಾಳಿ ಹಾಕಿ ಜೆಡಿ(ಎಸ್) ಅಭ್ಯರ್ಥಿಯನ್ನಾಗಿ ಬಂಟ್ವಾಳದಲ್ಲಿ ರಮಾನಾಥ ರೈಗಳ ಎದುರು ನಿಲ್ಲಿಸಿ ರಾತ್ರಿ ಹಗಲು ಕೆಎಫ್‌ಡಿಯ ಕಾರ್ಯಕರ್ತರು ಇಬ್ರಾಹಿಂ ಪರ ಕೆಲಸ ಮಾಡಿದರು. ಆದರೆ ಬಂಟ್ವಾಳದ ಮುಸ್ಲಿಮರು ಕೆಎಫ್‌ಡಿಯ ಭಸ್ಮಾಸುರ ಮುಖವನ್ನು ಕಂಡು ಮುಂಬರುವ ಅಪಾಯವನ್ನು ಅರಿತು, ಒಂದಾಗಿ ನಿಂತು ಕಾಂಗ್ರೆಸ್‌ನ ರಮಾನಾಥರೈಯನ್ನು ಗೆಲ್ಲಿಸಿದರು. ಚಿಲ್ಲರೆ ಮತ ಪಡೆದ ಇಬ್ರಾಹಿಂರೊಂದಿಗೆ ಕೆಎಫ್‌ಡಿಯ ಮಾನ ಬಂಟ್ವಾಳದಲ್ಲಿ ಬಹಿರಂಗವಾಗಿ ಹರಾಜಾಯಿತು. ಕೆಲವೆಡೆ ಕೆಎಫ್‌ಡಿ ಬೆಂಬಲಿಸಿದ್ದ ಕಾಂಗ್ರೆಸ್ ಅಭ್ಯರ್ಥಿಗಳು ಸೋಲು ಕಂಡರು. ಈಗ ಚುನಾವಣೆಯು ಮುಗಿದ ನಂತರ ಕೆಎಫ್‌ಡಿಯ 'ಮೀರ್ ಸಾದಕ್' ತನದ ಬಗ್ಗೆಯೇ ಮುಸ್ಲಿಂ ಸಮುದಾಯುದಲ್ಲಿ ಚರ್ಚೆಯಾಗುತ್ತಿದೆ. ಕೆಎಫ್‌ಡಿಯಿಂದಾಗಿ ಮುಸ್ಲಿಂ ಸಮುದಾಯದ ಯುವಕರು ದಾರಿತಪ್ಪುತ್ತಿರುವುದು, ಮುಸ್ಲಿಂ ಸಮುದಾಯ ಅಪಾಯದಲ್ಲಿ ಸಿಲುಕುತ್ತಿರುವುದು, ಭಜರಂಗದಳ, ಬಿಜೆಪಿಗೆ ಪರೋಕ್ಷವಾಗಿ ಕೆಎಫ್‌ಡಿಯಿಂದ ಲಾಭವಾಗುತ್ತಿರುವುದರಿಂದ ಕೆಎಫ್‌ಡಿಯ ಬೆಳವಣಿಗೆಯನ್ನು ತಡೆಗಟ್ಟುವ ಯತ್ನ ಮುಸ್ಲಿಂ ಪ್ರಜ್ಞಾವಂತರಿಂದ ಆರಂಭವಾಗಿದೆ.

**ಗೂಸ ತಿಂದ ಕೆಎಫ್‌ಡಿ**

ಕೆಎಫ್‌ಡಿಯ ಆರಂಭದ ದಿನಗಳಲ್ಲಿ ಸಂಘಟನೆ ಕಟ್ಟಿ ಬೆಳೆಸಿದ ಪ್ರಜ್ಞಾವಂತ ಮುಸ್ಲಿಂ ಯುವಕರು ಸಂಘಟನೆ ತೊರೆದು ಹೊರಬರ ತೊಡಗಿದ್ದಾರೆ. ಕೆಎಫ್‌ಡಿಯ ಶಕ್ತಿ ಕೇಂದ್ರವಾದ ಬಂಟ್ವಾಳದಲ್ಲಂತೂ ಕೆಎಫ್‌ಡಿಗೆ ಬಿದ್ದ ಏಟು ಬಲವಾಗಿಯೇ ಇದೆ. ಕೆಎಫ್‌ಡಿಯ ಮತೀಯ ತೀವ್ರವಾದಕ್ಕೆ ಎದುರಾಗಿ ಮುಸ್ಲಿಂ ಸೌಹಾರ್ದ ಒಕ್ಕೂಟವನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಕೆಎಫ್‌ಡಿಯನ್ನು ಒಪ್ಪದ ಯುವಕರ ಜೊತೆಗೆ ಕೆಎಫ್‌ಡಿಯನ್ನು ತೊರೆದು ಬಂದಿರುವ ಮುಖಂಡರು ತೊಡಗಿಸಿಕೊಂಡಿದ್ದಾರೆ.

ಒಟ್ಟಾರೆ ಕೆಎಫ್‌ಡಿಯ ಬಣ್ಣ ಬಯಲಾಗತೊಡಗಿದೆ. ಈಗ ಮತ್ತೆ ಹೊಸ ನಾಟಕ ಆರಂಭಿಸಿರುವ ಕೆಎಫ್‌ಡಿ ಆಗಸ್ಟ್ 15 ರಂದು ಫ್ರೀಡಂ ಪೆರೇಡ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಗೋಡೆ ಬರಹಗಳನ್ನು ಬರೆಯತೊಡಗಿದ್ದಾರೆ. ಕಾರ್ಯಕರ್ತರ ಮಾರ್ಚ್ ಫಾಸ್ಟ್ ಪ್ರಾಕ್ಟೀಸ್ ಆರಂಭವಾಗಿದೆ. ಮಾರ್ಚ್‌ಫಾಸ್ಟ್ ಪ್ರಾಕ್ಟೀಸ್‌ಗೆ ಎಲ್ಲೆಡೆ ಮುಸ್ಲಿಮರು ವಿರೋಧ ವ್ಯಕ್ತಪಡಿಸತೊಡಗಿದ್ದಾರೆ. ಕಳೆದುಹೋದ ಇಮೇಜ್ ಗಳಿಸಿಕೊಳ್ಳಲು ಕೆಎಫ್‌ಡಿ ನಡೆಸುತ್ತಿರುವ ಸರ್ಕಸ್ ವಿಫಲವಾಗತೊಡಗಿದೆ. ಒಟ್ಟಾರೆ ಕೆಎಫ್‌ಡಿ ಕಂಗಾಲಾಗಿದೆ. ಶಾಂತಿ ಪ್ರಿಯ ಮುಸ್ಲೀಮರು ನಿಟ್ಟುಸಿರು ಬಿಡತೊಡಗಿದ್ದಾರೆ.

ದುರಂತವೆಂದರೆ ಇಷ್ಟೆಲ್ಲಾ ಆದರೂ ಜಿ.ರಾಜಶೇಖರ್‌ರಂತಹ ಸೆಕ್ಯುಲರ್ ಬುದ್ಧಿಜೀವಿಗಳು ಈಗಲೂ ಕೆಎಫ್‌ಡಿಯ ಬ್ರೈನ್‌ವಾಶ್‌ಗೊಳಗಾದ ಕಾರ್ಯಕರ್ತರ ಹಾಗೆ ಕೆಎಫ್‌ಡಿಯ ಕಾರ್ಯಕ್ರಮದಲ್ಲಿ ಜಾತ್ಯಾತೀತತೆಯ, ಕೋಮುವಾದದ ಬಗ್ಗೆ ಭಾಷಣ ಬಿಗಿಯುತ್ತಿರುವುದು!

– ರಫೀಕ್

# 'ಕಾರ್ಮಿಕರು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಲಿ'

## - ಯಶವಂತ ಮರೋಳಿ

'ಶೋಷಕ ವರ್ಗ ನಿರಂತರವಾಗಿ ದುಡಿಯುವ ವರ್ಗವನ್ನು ಶೋಷಿಸುತ್ತಾ ಬಂದಿದೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 60 ವರ್ಷಗಳು ಕಳೆದರೂ ಕೂಡ ಕಾರ್ಮಿಕ ವರ್ಗದ ಜನತೆ ತಮ್ಮ ಬದುಕನ್ನು ಉತ್ತಮಪಡಿಸಲು ಸಾಧ್ಯವಾಗಿಲ್ಲ. ಇಂತಹ



ಸಂದರ್ಭದಲ್ಲಿ ತಮ್ಮ ಬದುಕಿನ ಮೇಲೆ ದಾಳಿ ನಡೆಸಲು ಶೋಷಕ ವರ್ಗದ ವಿರುದ್ಧ ಕಾರ್ಮಿಕರು ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳುವ ಮೂಲಕ ಸುಂದರ ಸಮಾಜದ ನಿರ್ಮಾಣಕ್ಕೆ ಕಟ್ಟಬದ್ಧರಾಗಬೇಕಾಗಿದೆ' ಎಂದು ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಯಶವಂತ ಮರೋಳಿಯವರು ಕಾರ್ಮಿಕರಿಗೆ ಕರೆ ನೀಡಿದರು.

ಅವರು ತಾ:15.06.2008ರಂದು ದಕ್ಷಿಣ ಕನ್ನಡ ಜಿಲ್ಲೆ ಉರ್ವಾಸ್ಟೋರ್‌ನ ಕೊಟ್ಟಾರ ಶಾಲೆಯಲ್ಲಿ ಜರುಗಿದ ಕಟ್ಟಡ ಕಾರ್ಮಿಕರಿಗೆ ಗುರುತು ಚೀಟಿ ವಿತರಣಾ ಸಮಾರಂಭದಲ್ಲಿ ಮಾತನಾಡುತ್ತಾ ಈ ಮಾತುಗಳನ್ನು ಹೇಳಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾಧ್ಯಕ್ಷರಾದ ಬಿ.ಎಂ.ಭಟ್‌ರವರು 'ಕಟ್ಟಡ ಕಾರ್ಮಿಕರು ನಿರಂತರ ಹೋರಾಟದ ಫಲವಾಗಿ ಕರ್ನಾಟಕದಲ್ಲಿ ಕೆಲವು ಸವಲತ್ತುಗಳನ್ನು ಪಡೆಯುತ್ತಿದ್ದರೂ, ಅದು ಏನೇನೂ ಸಾಕಾಗುವುದಿಲ್ಲ. ಇನ್ನಷ್ಟು ಹೆಚ್ಚಿನ ಸವಲತ್ತುಗಳನ್ನು ಪಡೆಯಬೇಕಾದರೆ ಕಟ್ಟಡ ಕಾರ್ಮಿಕರು ಸಂಘಟಿತ ಹೋರಾಟ ಕೈಗೊಳ್ಳಬೇಕಾಗಿದೆ' ಎಂದು ಹೇಳಿದರು. ಇನ್ನೊರ್ವ ಮುಖ್ಯ ಅತಿಥಿಯಾದ ಕಟ್ಟಡ ಕಾರ್ಮಿಕರ ಸಂಘಟನೆಯ ಮಂಗಳೂರು ನಗರ ಮುಖಂಡರಾದ ಸ್ಯಾಮುವೆಲ್ ಟೈಟಸ್‌ರವರು 'ಕಾರ್ಮಿಕರಿಗೆ ಸಿಗುವಂತಹ ಸೌಲಭ್ಯಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಾಗಿದೆ. ಆ ಮೂಲಕ ಕಟ್ಟಡ ಕಾರ್ಮಿಕರ ಸಂಘಟನೆಯನ್ನು ಬಲಿಷ್ಠಗೊಳಿಸಬೇಕಾಗಿದೆ' ಎಂದು ಕಿವಿಮಾತು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಟ್ಟಡ ಕಾರ್ಮಿಕರ ಸ್ಥಳೀಯ ಮುಖಂಡರಾದ ಪ್ರಕಾಶ್‌ರವರು ವಹಿಸಿದ್ದರು. ವೇದಿಕೆಯಲ್ಲಿ ದುಗ್ಗಪ್ಪರವರು ಉಪಸ್ಥಿತರಿದ್ದರು. ○



# ನಿತ್ಯ ನರಕಯಾತನೆ ವಿರುದ್ಧ ಪ್ರತಿಭಟನೆ

ನಮ್ಮ ಗ್ರಾಮ ಸಮುದಾಯ ನಿತ್ಯ ಅನುಭವಿಸುವ ಅನೇಕ ನರಕಯಾತನೆಯ ನೋವನ್ನು ತಾತ ಮುತ್ತಜ್ಜನ ಕಾಲದಿಂದ ಅನುಭವಿಸುತ್ತಾ ಬಂದಿದ್ದಾರೆ. ಆ ನೋವುಗಳಿಗೆ ಪರಿಹಾರ ಸ್ವಾತಂತ್ರ್ಯದ ಅರವತ್ತನೇ ಸಂಭ್ರಮ ಆಚರಿಸಿದರೂ ಸಿಗದೇ ಇರುವುದು ಸರ್ಕಾರಗಳ ಆಡಳಿತಕ್ಕೆ ಇದೊಂದು ಸಾಕ್ಷಿಯಾಗಿದೆ. ಪಂಚಾಯ್ತಿ ರಾಜ್ಯ ವ್ಯವಸ್ಥೆಯಿಂದ ಗ್ರಾಮೀಣ ಸಮಗ್ರ ಅಭಿವೃದ್ಧಿಯ ಕನಸು ಇನ್ನೂ ನನಸಾಗಿ ಉಳಿದಿರುವುದಕ್ಕೆ ಕೆಂಗಲ್ ಗ್ರಾಮದ ನೂರಾರು ವರುಷಗಳ ಹಿಂದಿನ ಪಳಿಯುಳಿಕೆಗಳು ಜೀವಂತ ಸಾಕ್ಷಿಯಾಗಿದೆ.

2005ರಲ್ಲಿ ಜಾಗೃತಗೊಂಡ ಜನತೆ ಹಮಾಲಿ ಕಾರ್ಮಿಕರ ಸಂಘಟನೆ ರಚಿಸಿಕೊಂಡು ಪ್ರಾಂತ ಕೃಷಿ ಕೂಲಿಕಾರರ ಸಂಘದ ಜೊತೆ ಸೇರಿಕೊಂಡು ಸ್ಥಳೀಯ ಸಮಸ್ಯೆಗಳನ್ನು ಪಟ್ಟಿ ಮಾಡಿ ಗ್ರಾಮ ಪಂಚಾಯ್ತಿಗೆ ತಾಲ್ಲೂಕು ಪಂಚಾಯ್ತಿಗಳಿಗೆ, ಮನವಿ ಸಲ್ಲಿಸಿ ಕಾಲುಸೋಲುವವರೆಗೂ ಅಲೆದರೂ ಪ್ರಯೋಜನವಾಗಲಿಲ್ಲ; 2006 ರಲ್ಲಿ ಪೋಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ, ಧಡೇಸ್ಗೂರು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಮತ್ತು ಜನ ಪ್ರತಿನಿಧಿಗಳು ಆಶ್ವಾಸನೆಕೊಟ್ಟರೂ, ನಮ್ಮ ಬೇಡಿಕೆ ಈಡೇರಿಸಲಿಲ್ಲ.

ಕಾರಣ 20.06.2008 ರಂದು ನಮ್ಮ ಸಂಘಟನೆ ಪುನಃ ಕುಡಿಯುವ ನೀರಿಗಾಗಿ, ಮಹಿಳೆಯರಿಗೆ ಪಾಯಿಖಾನೆ, ಓಣಿಗಳಲ್ಲಿ ರಸ್ತೆಗೆ ಬಂಡೆ, ಚರಂಡಿ ನಿರ್ಮಾಣ, ವಸತಿ ನಿವೇಶನದಂತಹ ಅನೇಕ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮನವಿ ಪತ್ರ ಕೊಡಲು ಐ.ಬಿ.ಯಿಂದ 350 ಜನರ ಮೆರವಣಿಗೆ ಮೂಲ
ತಪ್ಪಡಿ ಬಡಿಯುತ್ತಸಾಗಿ, ಪಂಚಾಯ್ತಿಗೆ ಮನವಿ ಪತ್ರ ಕೊಡಲಾಯಿತು. ಸಭೆಯನ್ನುದ್ದೇಶಿಸಿ ಕೃಷಿ ಕಾರ್ಮಿ ಸಂಘಟನೆಯ ಮುಖಂಡ ಕಾಂ: ನಾರಾಯಣ ಕಿಲ್ಲೇದ್ ಮಾತನಾಡುತ್ತಾ, ಪಂಚಾಯ್ತಿಯ ವಿಳಂಬ ಧೋರಣೆಯನ್ನು ಖಂಡಿಸಿದರು. ಇನ್ನೊಬ್ಬ ರೈತ ಮುಖಂಡ ಕಾಂ: ಮಲ್ಲಯ್ಯ ಜಾಲಹಳ್ಳಿಯವರು ಪಂಚಾಯ್ತಿ ಭ್ರಷ್ಟಾಚಾರದ ಬಗ್ಗೆ ಬಿಡಿಸಿಡುತ್ತಾ ಪಂಚಾಯ್ತಿ ಇನ್ನು ಮುಂದೆ ಜವಾಬ್ದಾರಿ ಯಿಂದ ವರ್ತಿಸಬೇಕೆಂದು ಒತ್ತಾಯಿಸಿದರು.

ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ಕಾಂ:ನರಸಿಂಹಪ್ಪ ಮಾತನಾಡುತ್ತಾ ಪಂಚಾಯ್ತಿ ಜನಪರ ಅಧಿಕಾರ ನಡೆಯಲು ಅನುಭವದ ಕೊರತೆ ಇದ್ದರೆ, ಪಶ್ಚಿಮಬಂಗಾಳಕ್ಕೆ ಹೋಗಿ ಒಮ್ಮೆ ನೋಡಿಕೊಂಡಾದರೂ ಬಂದು ಜನಪರ ಅಧಿಕಾರ ನಡೆಸುವಂತೆ ಒತ್ತಾಯಿಸುತ್ತಾ, ಈ ಹೋರಾಟಕ್ಕೆ ಸಂಪೂರ್ಣ ಪಕ್ಷದ ಬೆಂಬಲ ಘೋಷಿಸಿದರು. ಅಪ್ಪಣ್ಣ ಕಾಂಬ್ಳೆ ನಿರೂಪಿಸಿದರು.


ಯಂಕಪ್ಪಸ ಹಮಾಲರ ಸಂಘಟನೆ ಅಧ್ಯಕ್ಷರು, ಡಿವೈಎಫ್‌ಐ ಚಂದ್ರಪ್ಪ, ಕರಿಯಪ್ಪ ಹಮಾಲರ ಸಂಘಟನೆ ಕಾರ್ಯದರ್ಶಿ ಮುದಿಯಪ್ಪ ತಳವಾರ, ಕೆ.ಅಲೇಶ್, ಪೀರಸಾಬ್, ಪ್ರಾಂತ ರೈತ ಸಂಘದ ಅಧ್ಯಕ್ಷ ಶಂಕ್ರಪ್ಪ, ಉಪಾಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ಕೆ.ಸತ್ಯನಾರಾಯಣರೆಡ್ಡಿ, ಕೆ.ಮಂಜುನಾಥ್, ಜುಲ್ಪಿ ನಾಗೇಶ್, ಪಾರ್ವತಮ್ಮ, ಈರಮ್ಮಾ, ಮೈಬೂಬು, ಯಮುನಪ್ಪ ಮುಂತಾದವರು ಭಾಗವಹಿಸಿದ್ದರು. ●

# ಬಿ.ಎಸ್.ಎನ್.ಎಲ್. ಖಾಯಂ ಅಲ್ಲದ ಕಾರ್ಮಿಕರ ಉಡುಪಿ ಜಿಲ್ಲಾ ಸಮಾವೇಶ

ಸಿ.ಐ.ಟಿ.ಯು.ನ ನೇತೃತ್ವದಲ್ಲಿ ಉಡುಪಿ ಜಿಲ್ಲಾ ಬಿ.ಎಸ್.ಎನ್.ಎಲ್. ಗುತ್ತಿಗೆ ಮತ್ತು ಹಂಗಾಮಿ ನೌಕರರ ಜಿಲ್ಲಾ ಸಮಾವೇಶವು ದಿನಾಂಕ:01.06.08ರಂದು ಕಾಂ: ಶಶಿಧರ ಗೊಲ್ಲರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನಡೆಯಿತು.

ಸಮಾವೇಶವನ್ನು ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕಾಂ:ಅದಮಾರು ಶ್ರೀಪತಿ ಆಚಾರ್ಯ ಉದ್ಘಾಟಿಸಿ ಬಿ.ಎಸ್.ಎನ್.ಎಲ್. ಸೇರಿದಂತೆ ಸಾರ್ವಜನಿಕ ರಂಗದ ಕೈಗಾರಿಕೆಗಳು ದೇಶದ ಜನತೆಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಕಳೆದ 50 ವರ್ಷಗಳಲ್ಲಿ ಅಮೋಘ ಕೊಡುಗೆಯನ್ನು ನೀಡಿವೆ. ಜನರ ತೆರಿಗೆ ಹಣದಿಂದ ಕಟ್ಟಿ ಬೆಳೆಸಲ್ಪಟ್ಟ ಸಾರ್ವಜನಿಕ ರಂಗದ ಉದ್ದಿಮೆಗಳ ಮೇಲೆ ಈಗ ವಿದೇಶಿ ಬಂಡವಾಳಗಾರರ ಹದ್ದಿನ ಕಣ್ಣು ಬಿದ್ದಿರುತ್ತದೆ. ವಿದೇಶಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಒತ್ತಡಕ್ಕೆ ನಮ್ಮ ಸರ್ಕಾರಗಳು ಬಲಿಯಾಗಿ ಇವುಗಳನ್ನು ಪರಭಾರೆ ಮಾಡುವ ದೇಶ ದ್ರೋಹಿ ಕೆಲಸ ಮಾಡುತ್ತಿವೆ. ದೇಶದ ಹಿತ ದೃಷ್ಟಿಯಿಂದ ಸಾರ್ವಜನಿಕ ರಂಗದ ಸಂಸ್ಥೆಗಳನ್ನು ಈ ಕೈಗಾರಿಕೆಗಳ ಕಾರ್ಮಿಕ ವರ್ಗ ಉಳಿಸುವ ಮತ್ತು ಬೆಳೆಸುವ ಕರ್ತವ್ಯ ನಿರ್ವಹಿಸಬೇಕು. ತೀರಾ ಶೋಷಣೆಗೆ ಒಳಗಾಗಿರುವ ಗುತ್ತಿಗೆ ಮತ್ತು ತಾತ್ಕಾಲಿಕ ಕಾರ್ಮಿಕರ ಹಿತಾಸಕ್ತಿ ರಕ್ಷಣೆಗೆ ಸಿ.ಐ.ಟಿ.ಯು. ನಿರಂತರವಾಗಿ ಕೆಲಸ ಮಾಡುತ್ತಿದೆ. ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಒಂದಾಗಿ ಹೋರಾಟಗಳ ಮೂಲಕ ತಮ್ಮ ಹಕ್ಕುಗಳ ರಕ್ಷಣೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಗಳಲ್ಲಿ ಒಬ್ಬರಾದ, ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ರಾಜ್ಯ ಸಂಘಟನೆಯ ಸಂಘಟನಾ ಕಾರ್ಯದರ್ಶಿ ಕಾಂ:ಮಹಾಂತೇಶ್.ಕೆ ಸಮಾವೇಶದಲ್ಲಿ ಸಂದೇಶ ನೀಡಿ ಗುತ್ತಿಗೆ ಮತ್ತು ತಾತ್ಕಾಲಿಕ ಕಾರ್ಮಿಕರು ಸಂಘಟಿತರಾಗಿ ಹೋರಾಟಗಳನ್ನು ನಡೆಸಿದರೆ ಮಾತ್ರ ತಮಗೆ ಅನ್ವಯವಾಗುವ ಕಾನೂನುಬದ್ಧ ಸವಲತ್ತುಗಳನ್ನು ಪಡೆಯಲು ಸಾಧ್ಯ. ಸಂಘಟನಾ ಶಕ್ತಿಯ ಹೋರಾಟದಲ್ಲಿ ಎಲ್ಲರೂ ತೊಡಗಿಸಿಕೊಂಡು ಸಂಘಟನೆಯನ್ನು ಬಲಪಡಿಸಿ ಸವಲತ್ತುಗಳನ್ನು ಪಡೆಯಲು ಸಾಧ್ಯ. ಸಂಘಟನಾ ಶಕ್ತಿಯ ಹೋರಾಟದಲ್ಲಿ ಎಲ್ಲರೂ ತೊಡಗಿಸಿಕೊಂಡು ಸಂಘಟನೆಯನ್ನು ಬಲಪಡಿಸಿ ಸವಲತ್ತುಗಳನ್ನು ಪಡೆಯುವಂತೆ ಕರೆ ನೀಡಿದರು.




ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಅಖಿಲ ಭಾರತ ಸಂಘಟನೆಯ ಉಪಾಧ್ಯಕ್ಷರಾದ ಕಾಂ:ಚೆಲುವರಾಜ್ ಸಮಾವೇಶದಲ್ಲಿ ಮಾತನಾಡುತ್ತಾ ಕೊಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಸಮಾವೇಶದ ತೀರ್ಮಾನಗಳನ್ನು ವಿವರಿಸಿದರು. ಗುತ್ತಿಗೆ ಮತ್ತು ತಾತ್ಕಾಲಿಕ ನೌಕರರು ಸಂಘದ ಸದಸ್ಯರಾಗಿ ಸಂಘವನ್ನು ಸಂಖ್ಯಾಬಲದಲ್ಲಿ ಮತ್ತು ಆರ್ಥಿಕವಾಗಿ ಬಲಪಡಿಸಲು ಕರೆ ನೀಡಿದರು.

ಬಿ.ಎಸ್.ಎನ್.ಎಲ್.ಇ.ಯು. ಕರ್ನಾಟಕ ವಲಯ ಅಧ್ಯಕ್ಷರಾದ ಕಾಂ:ಬಿ.ಪಿ.ನಾರಾಯಣನವರು ಹಾಗೂ ಸಮಾವೇಶದ ಅಧ್ಯಕ್ಷರಾದ ಕಾಂ:ಶಶಿಧರ ಗೊಲ್ಲರವರು ಬಿಎಸ್‌ಎನ್‌ಎಲ್ ಗುತ್ತಿಗೆ ಮತ್ತು ತಾತ್ಕಾಲಿಕ ನೌಕರ ಸಂಘಟನೆಯ ಕೆಲಸ ಮತ್ತು ಹೋರಾಟಗಳಿಗೆ ಪೂರ್ತಿ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಸಮಾವೇಶದಲ್ಲಿ ಗೌರವ ಅಧ್ಯಕ್ಷರಾಗಿ ಕಾಂ:ವಿಶ್ವನಾಥ ರೈ, ಅಧ್ಯಕ್ಷರಾಗಿ ಕಾಂ:ಶಶಿಧರ ಗೊಲ್ಲ, ಕಾರ್ಯದರ್ಶಿಯಾಗಿ ಕಾಂ:ಮೋಹನ್ ಯು. ಖಜಾಂಚಿಯಾಗಿ ಕಾಂ:ಪಿ.ಮುಕುಂದನ್ ಮತ್ತು ಇತರ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಆರಂಭದಲ್ಲಿ ಕಾಂ: ಎ.ಎಂ.ಪೂಜಾರಿ ಯವರು ಸ್ವಾಗತಿಸಿದರು. ಕಾಂ:ಮೋಹನ್ ವಂದಿಸಿದರು. ○

# ಕೇರಳ : ಆಹಾರ ಭದ್ರತೆಗಾಗಿ ಜನತಾ ಆಂದೋಲನ

ಕೇರಳ ಮೊದಲಿನಿಂದಲೂ ಆಹಾರ ಕೊರತೆಯ ರಾಜ್ಯ. ಅಲ್ಲಿ ಭತ್ತದ ಉತ್ಪಾದನೆ ಒಟ್ಟು ಆವಶ್ಯಕತೆಯ ಸುಮಾರು 20 ಶೇ. ಮಾತ್ರ. ಮತ್ತು ಈ ಕೊರತೆ ಕಳೆದ ಕೆಲವು ವರ್ಷಗಳಲ್ಲಿ ಸತತವಾಗಿ ಹೆಚ್ಚುತ್ತಲೆ ಇದೆ. ಆದರೆ ಉದಾರೀಕರಣದ ದಿನಗಳು ಆರಂಭವಾಗುವ ವರೆಗೆ ಇದು ಸಮಸ್ಯೆಯಾಗಿರಲಿಲ್ಲ. ಏಕೆಂದರೆ ಕೇರಳಕ್ಕೆ ಪ್ರಮುಖ ಹಣದ ಬೆಳೆಗಳಾದ ರಬ್ಬರ್, ತೆಂಗು, ಚಹಾ, ಕಾಫಿ ಮತ್ತು ಮಸಾಲೆ ಸಾಮಗ್ರಿಗಳ ವಿಶೇಷ ಅನುಕೂಲ ಇತ್ತು. ಆದ್ದರಿಂದ ಸ್ವಾತಂತ್ರ್ಯದ ನಂತರ ರೂಪುಗೊಂಡ ಆಹಾರ ನೀತಿ ದೇಶಕ್ಕೆ ಅಮೂಲ್ಯ ವಿದೇಶೀ ವಿನಿಮಯ ತರುವ ಈ ರಫ್ತು-ಆಧಾರಿತ ಬೆಳೆಗಳನ್ನು ಬೆಳೆಸುವ ಜವಾಬ್ದಾರಿ ವಹಿಸಿ, ಅದಕ್ಕೆ ಪ್ರತಿಯಾಗಿ ರಾಜ್ಯಕ್ಕೆ ಆಹಾರ ಭದ್ರತೆ ಒದಗಿಸುವ ಜವಾಬ್ದಾರಿಯನ್ನು ಕೇಂದ್ರ ವಹಿಸಿಕೊಂಡಿತು.

ಇದು ಒಂದು ರಾಷ್ಟ್ರೀಯ ಶ್ರಮವಿಭಜನೆಯಾಗಿತ್ತು. ಆದ್ದರಿಂದ ಆಹಾರ ಭದ್ರತೆ ರಾಜ್ಯದ ಅಭಿವೃದ್ಧಿ ಯೋಜನೆಗಳಲ್ಲಿ ಪ್ರಮುಖವಾಗಿರಲಿಲ್ಲ. ಆದರೆ ಪರಿಸ್ಥಿತಿ ಈಗ ಬದಲಾಗಿದೆ. ಇದಕ್ಕೆ ಕಾರಣ ನವ-ಉದಾರವಾದಿ ನೀತಿಗಳು. ನಿಜ ಸಂಗತಿಯೆಂದರೆ ನವ-ಉದಾರವಾದಿ ನೀತಿಗಳನ್ನು ಟೀಕಿಸುತ್ತಿರುವವರು ಬಹಳ ದಿನಗಳಿಂದ ಈ ರೀತಿಯ ಆಹಾರ ಬಿಕ್ಕಟ್ಟು ಆವರಿಸುವ ಬಗ್ಗೆ ಮುನ್ನೆಚ್ಚರಿಕೆ ನೀಡಿದ್ದರು. ಆದರೆ ಉದಾರವಾದವನ್ನು ಅಪ್ಪಿಕೊಂಡ ನಮ್ಮ ಆಳರಸರು, ಎನ್‌ಡಿಎ ಸರಕಾರವಾಗಲೀ, ಯುಪಿಎ ಸರಕಾರವಾಗಲೀ ಅದಕ್ಕೆ ಕಿವಿಗೊಟ್ಟಿರಲಿಲ್ಲ. ಈಗ ಆ ಬಿಕ್ಕಟ್ಟು ಬಂದೇ ಬಿಟ್ಟಿದೆ.

**ಪಡಿತರದ ಬೆಂಬಲ:**

ಕೇರಳದಲ್ಲಿ ಎಡ ಆಂದೋಲನದ ಶಕ್ತಿಯಿಂದಾಗಿ ರೂಪುಗೊಂಡ ಸಾರ್ವಜನಿಕ ವಿತರಣಾ ಪದ್ಧತಿಯಿಂದಾಗಿ ಆಹಾರದ ಕೊರತೆ ರಾಜ್ಯವನ್ನು ಅಷ್ಟಾಗಿ ಬಾಧಿಸಿರಲಿಲ್ಲ. ಆದರೆ ಈಗ ಆ ವ್ಯವಸ್ಥೆಯನ್ನೇ ನವ-ಉದಾರವಾದಿ ನೀತಿಗಳು ಕಳಚಿ ಹಾಕುತ್ತಿವೆ. ಕೇಂದ್ರ ಸರಕಾರ ರಾಜ್ಯದ ಅಕ್ಕಿ ಕೋಟಾದಲ್ಲಿ ತೀವ್ರ ಕಡಿತ ಮಾಡಿದೆ. 2007ರಲ್ಲಿ 1,13,420 ಮೆಟ್ರಿಕ್ ಟನ್ ಇದ್ದದ್ದು 2008ರಲ್ಲಿ 17000 ಮೆಟ್ರಿಕ್ ಟನ್ನಿಗಿಳಿದಿದೆ. ಈ ಹಿನ್ನೆಲೆಯಲ್ಲಿ ಆಹಾರ ಬಿಕ್ಕಟ್ಟು ಇಡಿ ವಿಶ್ವವನ್ನು ಆವರಿಸುತ್ತಿರುವ ಸಂದರ್ಭದಲ್ಲಿ ಕೇರಳದ ಎಲ್‌ಡಿಎಫ್ ಸರಕಾರ ರಾಜ್ಯದಲ್ಲಿ ಒಂದು 'ಹೆಚ್ಚು ಆಹಾರ ಬೆಳೆಸಿ' ಎಂಬ ಜನತಾ ಆಂದೋಲನವನ್ನು ಆರಂಭಿಸಲು ಮುಂದಾಗಿದೆ. ಆಹಾರ ಬಿಕ್ಕಟ್ಟು ಒಂದು ದೀರ್ಘಕಾಲೀನ ಪ್ರಶ್ನೆಯಾಗಿ ಉಳಿಯುವ ಸಂಭವವಿರುವುದರಿಂದ ಇದೊಂದು ದೀರ್ಘಕಾಲೀನ ಆಂದೋಲನವಾಗಲಿದೆ. ಇತರ ರಾಜ್ಯಗಳಿಗೆ ಮಾದರಿಯಾಗಲಿದೆ

ರಾಜ್ಯದ ಎಲ್‌ಡಿಎಫ್ ಸರಕಾರ ಹನ್ನೊಂದನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಮುಖ ಬದಲಾವಣೆ ಮಾಡಿದೆ. ಈ ಬಾರಿ ಆಹಾರಭದ್ರತೆಗೆ ಮೊತ್ತಮೊದಲ ಬಾರಿಗೆ ಪ್ರಮುಖ ಸ್ಥಾನ ನೀಡಲಾಗಿದೆ. ಇದರ ಭಾಗವಾಗಿಯೇ 'ಹೆಚ್ಚು ಆಹಾರ ಬೆಳೆಸಿ' ಜನತಾ ಆಂದೋಲನ ರೂಪಿಸಲಾಗಿದೆ.

**ನಿರ್ದಿಷ್ಟ ಕ್ರಮಗಳು :**

ಭತ್ತದ ಉತ್ಪಾದನೆಯನ್ನು ರೈತರಿಗೆ ಲಾಭದಾಯಕಗೊಳಿಸುವುದು ಮತ್ತು ಆಕರ್ಷಕಗೊಳಿಸುವುದು ಈ ಆಂದೋಲನದ ಕೇಂದ್ರ ಬಿಂದು. ಇದನ್ನು ಗುಂಪು ಬೇಸಾಯ, ಬೀಳುಭೂಮಿಯನ್ನು ಭತ್ತ ಬೆಳೆಯಲು ಉಪಯೋಗಿಸುವುದು, ಮಣ್ಣು ಆರೋಗ್ಯ ಕಾರ್ಡುಗಳ ವಿತರಣೆ, ನೀರಾವರಿ ಮತ್ತು ನೀರು ನಿರ್ವಹಣಾ ಸೇವೆಗಳನ್ನು ಉತ್ತಮಗೊಳಿಸುವುದು, ಪ್ರಮಾಣಿತ ಬೀಜಗಳನ್ನು ಸಮಯಕ್ಕೆ ಸರಿಯಾಗಿ, ಗ್ಯಾರಂಟಿಯಾಗಿ ಒದಗಿಸುವುದು, ಬಡ್ಡಿರಹಿತ ಸಾಲ ಒದಗಿಸುವುದು, ವಿಸ್ತರಣ ಸೇವೆಗಳನ್ನು ಬಲಪಡಿಸುವುದು, ಶ್ರಮ-ಸ್ನೇಹಿ ಯಾಂತ್ರೀಕರಣ ಕಾರ್ಯಕ್ರಮ, ಹಸುಸಾಕಣೆ, ದ್ವಿದಳ ಧಾನ್ಯಗಳ ಬೇಸಾಯ, ಕೋಳಿ ಸಾಕಣೆ ಮತ್ತು ಮೀನುಗಾರಿಕೆ ಮುಂತಾದ ಪೂರಕ ಚಟುವಟಿಕೆಗಳಿಂದ ರೈತರು ಮತ್ತು ಕೃಷಿ ಕೂಲಿಕಾರರಿಗೆ ಪೂರಕ ಆದಾಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಭತ್ತಕ್ಕೆ ಫಲದಾಯಕ ಬೆಲೆಗಳನ್ನು ಸಮಯಕ್ಕೆ ಸರಿಯಾಗಿ ನೀಡುವುದರ ಮೂಲಕ ಸಾಧಿಸಲಾಗುವುದು ಎಂದು ಹೇಳಲಾಗಿದೆ.



**ಏರಿಕೆ ಗುರಿ:**

ಅಕ್ಕಿ ಉತ್ಪಾದನೆಯನ್ನು 2005-06ರ 6.3ಲಕ್ಷ ಮೆಟ್ರಿಕ್ ಟನ್ನಿನಿಂದ 2011-12ರ ವೇಳೆಗೆ 9.45ಲಕ್ಷಕ್ಕೆ ಏರಿಸುವುದು ಈ ಅಹಾರಭದ್ರತೆ ಪ್ರಾಜೆಕ್ಟಿನ ಗುರಿ. ಹಾಲು ಉತ್ಪಾದನೆಯನ್ನು 20.63ಲಕ್ಷ ಮೆಟ್ರಿಕ್ ಟನ್ನಿನಿಂದ 35 ಲಕ್ಷಕ್ಕೆ, ಮೊಟ್ಟೆ ಉತ್ಪಾದನೆಯನ್ನು 119.6ಕೋಟಿಯಿಂದ 239.5ಕೋಟಿಗೆ ಏರಿಸುವ ಗುರಿಯೂ ಈ ಯೋಜನೆಯ ಭಾಗ. ಈ ಆಂದೋಲನದ ಮೂಲಕ ಸುಮಾರು 30ಸಾವಿರ ಹೆಕ್ಟೇರ್ ಬೀಳು ಭೂಮಿಯನ್ನು ಮತ್ತೆ ಸಾಗುವಳಿಗೆ ಒಳಪಡಿಸುವ ಗುರಿಯೂ ಇದೆ. ಎನ್‌ಆರ್‌ಇಜಿಎ, ಆರ್‌ಕೆವಿವೈ ಮುಂತಾದ ಕೇಂದ್ರಸರಕಾರದ ಹೊಸ ಯೋಜನೆಗಳನ್ನು ಬಳಸಿ ಈ ಗುರಿಗಳ ಮಧ್ಯಂತರ ಪರಾಮರ್ಶೆ ನಡೆಸಿ ಅವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆಯೂ ಇದೆ ಎಂದು ಹೇಳಲಾಗಿದೆ.

**ಬಜೆಟ್ ಬೆಂಬಲ :**

ಈ ಆಹಾರ ಭದ್ರತಾ ಆಂದೋಲನ ಒಂದು ಬಹು ಆಯಾಮಗಳ, ಬಹುವಿಭಾಗೀಯ ಕಾರ್ಯಕ್ರಮವಾಗಿದ್ದು ಸಂಪನ್ಮೂಲಗಳ ಕೊರತೆ ಬಾರದಂತೆ ನೋಡಿಕೊಳ್ಳ ಲಾಗುವುದು ಎಂದೂ ಎಲ್‌ಡಿಎಫ್ ಸರಕಾರ ಹೇಳಿದೆ. 2008-09ರಲ್ಲೇ ಸುಮಾರು 1000ಕೋಟಿ ರೂ.ಗಳನ್ನು ಇದಕ್ಕೆ ಕೊಡಲಾಗುವುದು. ಸರಕಾರ ರಾಷ್ಟ್ರೀಯ ಆಹಾರ ಭದ್ರತಾ ಮಿಶನ್‌ನ ಅಡಿಯಲ್ಲಿ ರಾಜ್ಯ ಪಡೆಯುವ ಹಣದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲೂ ಪ್ರಯತ್ನಿಸುತ್ತದೆ ಎಂದು ಹೇಳಿದೆ. ವಿವಿಧ ಸರಕಾರೀ ಇಲಾಖೆಗಳು, ಸ್ಥಳೀಯ ಸರಕಾರಗಳು, 'ಕೃಷಿ ಭವನ'ಗಳು ಮತ್ತು 'ಪದಶೇಖರ ಸಮಿತಿ'ಗಳನ್ನು, ಈ ಮೂಲಕ ರೈತರನ್ನು ಈ ಬೃಹತ್ ಕಾರ್ಯಕ್ರಮದಲ್ಲಿ ಒಳಗೊಳ್ಳಲಾಗುವುದು.

ಸದ್ಯ ಭವಿಷ್ಯದಲ್ಲಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವುದು ಕೇರಳಕ್ಕೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಈ ಜನತಾ ಆಂದೋಲನ ರಾಜ್ಯದ ಆಹಾರ ಭದ್ರತೆಯನ್ನು ಗಣನೀಯವಾಗಿ ಉತ್ತಮಗೊಳಿಸಿ ಬೇರೆ ರಾಜ್ಯಗಳಿಗೆ ಮಾದರಿಯಾಗಲಿದೆ ಎಂದು ಪರಿಣತರು ಅಭಿಪ್ರಾಯ ಪಡುತ್ತಿದ್ದಾರೆ. ○

**ಜಮ್ಮು ಮತ್ತು ಕಾಶ್ಮೀರ ಗಲಭೆ**

# ರಾಜ್ಯಪಾಲರ ಪ್ರಚೋದನಾತ್ಮಕ ಕ್ರಮ

ಪೂರ್ವಗ್ರಹ ಪೀಡಿತನಾದ ರಾಜಕಾರಣಿಯಾಗಲಿ, ಅಧಿಕಾರಿಯಾಗಲಿ ಅಥವಾ ಇನ್ನ್ಯಾವುದೋ ವ್ಯಕ್ತಿಯಾಗಲಿ ಮನಸೋ ಇಚ್ಛೆ ನಡೆದುಕೊಂಡಾಗ ಸಾಮಾಜಿಕ ಸ್ವಾಸ್ಥ್ಯ ಕದಡಿ ಉದ್ವಿಗ್ನ ಪರಿಸ್ಥಿತಿ ಹೇಗೆ ಸೃಷ್ಟಿಯಾಗುತ್ತದೆ ಎಂಬುದಕ್ಕೆ ಕಳೆದ ನಾಲ್ಕು ದಿನಗಳಲ್ಲಿನ ಕಾಶ್ಮೀರದ ಬೆಳವಣಿಗೆಗಳು ಸಾಕ್ಷಿಯಾಗಿವೆ. ಭಾರತದ ಬಹುತೇಕ ಪ್ರದೇಶಗಳಲ್ಲಿ ಇಂತಹುದೇ ಪರಿಸ್ಥಿತಿ ಇದ್ದರೂ ಇಲ್ಲಿ ಕಾಶ್ಮೀರ ಕುರಿತು ಮಾತ್ರ ಪ್ರಸ್ತಾಪಿಸಲಾಗುತ್ತಿದೆ. ಅತ್ಯಂತ ಸೂಕ್ಷ್ಮವಾದ ಧರ್ಮ, ಜಾತಿ ವ್ಯವಸ್ಥೆ ಹೊಂದಿರುವ ಭಾರತದಲ್ಲಿ ವ್ಯಕ್ತಿಯೊಬ್ಬ ಎಂತಹ ಅನಾಹುತಗಳಿಗೆ ಎಡೆಮಾಡಿಕೊಡಲಿದೆ ಎಂಬುದು ಇಲ್ಲಿನ ಪ್ರಮುಖ ಅಂಶವಾಗಿದೆ.



ಅಮರನಾಥ ಯಾತ್ರೆ ಮಂಡಳಿ (ಎಸ್‌ಎಎಸ್‌ಬಿ)ಗೆ 39.88 ಹೆಕ್ಟೇರ್ ಅರಣ್ಯ ಭೂಮಿಯನ್ನು ಸರ್ಕಾರ ಹಸ್ತಾಂತರ ಮಾಡಿದ್ದರಿಂದಾಗಿ ಈ ಗಲಭೆಗಳು ಸೃಷ್ಟಿಯಾಗಿವೆ. ರಾಜ್ಯಪಾಲರ ಈ ಕ್ರಮವು ಜನರಲ್ಲಿ ಕಾಶ್ಮೀರಿತನಕ್ಕೆ ಧಕ್ಕೆ ತರುವುದೆಂಬ ಆತಂಕ ಮೂಡಿಸಿರುವುದರಿಂದ ಪರಿಸ್ಥಿತಿ ಬಿಗಡಾಯಿಸಿದೆ. ಇದರಿಂದಾಗಿ ಸೈಯದ್ ಆಲಿ ಗಿಲಾನಿಯಂತಹ ಹುರಿಯತ್‌ನ ತೀವ್ರವಾದಿ, ಮೂಲಭೂತವಾದಿಗಳ ಪರಿಸ್ಥಿತಿಯನ್ನು ದುರ್ಬಳಕೆ ಮಾಡಲು ಅವಕಾಶವಾಗಿದೆ. ಜೂನ್ 25ರವರೆಗೂ ಅಂದಿನ ಜಮ್ಮು ಮತ್ತು ಕಾಶ್ಮೀರ ಗೌರ್ನರ್ ಎಸ್.ಕೆ. ಸಿನ್ಹ ಅಮರನಾಥ ಯಾತ್ರೆ ಮಂಡಳಿಯ ಅಧ್ಯಕ್ಷರಾಗಿದ್ದರು. ಆದರೆ ಈಗ ಅವರು ನಿವೃತ್ತರಾಗಿದ್ದಾರೆ. ನಿವೃತ್ತನಾಗುವ ಮನುಷ್ಯ ರಾಜ್ಯವೊಂದಕ್ಕೆ ಬೆಂಕಿ ಇಟ್ಟು ಹಿಂತಿರುಗುವ ಅಗತ್ಯವಾದರೂ ಇತ್ತೆ.

ಭೂಮಿ ಮಂಜೂರು ಮಾಡಿರುವುದರಿಂದ ಇಡೀ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಪರಂಪರೆ ಮತ್ತು ಇತಿಹಾಸಕ್ಕೇ ಭೀತಿ ಉಂಟು ಮಾಡುವ ಲಕ್ಷಣಗಳು ಗೋಚರಿಸುತ್ತಿವೆ. ಅಮರನಾಥ ಮಂಡಳಿಯ ಅಧ್ಯಕ್ಷರು ಮತ್ತು ಗೌರ್ನರ್ ಆಗಿದ್ದ ಸಿನ್ಹ ಅಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾರೆ.

ಯಾತ್ರೆಯ ಅವಧಿಯನ್ನು ಒಂದು ತಿಂಗಳಿನಿಂದ ಎರಡು ತಿಂಗಳಿಗೆ ವಿಸ್ತರಿಸಬೇಕೆಂದು ಇದಕ್ಕೂ ಮೊದಲೇ ಸಿನ್ಹ ಮುಖ್ಯ ಮಂತ್ರಿ ಆಜಾದ್‌ರೊಂದಿಗೆ ಸಂಘರ್ಷಕ್ಕೆ ಅಣಿಯಾಗಿದ್ದರು. ಅಮರನಾಥ ಯಾತ್ರೆಗೆ ಪ್ರತ್ಯೇಕ ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕೆಂತಲೂ ಆರಂಭದಲ್ಲಿ ಒತ್ತಾಯಿಸಿದ್ದರು. ಆದರೆ ಪಿಡಿಪಿ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳು ಈ ಪ್ರಸ್ತಾವನೆಗೆ ವಿರೋಧ ವ್ಯಕ್ತಪಡಿಸಿದ್ದವು. ಈ ರೀತಿ ಸ್ವತಂತ್ರ ಮಂಡಳಿ ಸ್ಥಾಪಿಸುವುದು ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಎಂತಲೂ

ಪುಟ 11 ಕ್ಕೆ

ಶೇಕಡಾ 11 ದಾಟಿದ ಹಣದುಬ್ಬರ ಮತ್ತು ನಾಗಲೋಟ ಹೂಡಿರುವ ಬೆಲೆಯೇರಿಕೆಗಳು ಜನಗಳ ಬದುಕನ್ನು ಅಸಹನೀಯಗೊಳಿಸಿರುವಾಗ, ಇದನ್ನು ಎದುರಿಸುವುದಕ್ಕಿಂತ ಅಮೆರಿಕಾದೊಡನೆ ಹೇಗಾದರೂ ಪರಮಾಣು ವ್ಯವಹಾರ ಕುದುರಿಸುವುದೇ ದೇಶದ ಆದ್ಯತೆ ಎಂಬಂತೆ ಬಿಂಬಿಸಲು ಕಳೆದೆರಡು ವಾರ ಪ್ರಯತ್ನಿಸಲಾಯಿತು. ಇದನ್ನು ಖಡಾಖಂಡಿತವಾಗಿ ವಿರೋಧಿಸಿದ ಎಡಪಕ್ಷಗಳು ಅನಗತ್ಯವಾಗಿ ಬಿಕ್ಕಟ್ಟು ಸೃಷ್ಟಿಸುತ್ತಿವೆ ಎಂದು ಚಿತ್ರಿಸಲಾಗುತ್ತಿದೆ. ಆದರೆ ನಿಜ ಸಂಗತಿಯೇನು? ಈ ಸಂಘರ್ಷದ ಮುಂಚೂಣಿಯಲ್ಲಿರುವ ಪ್ರಕಾಶ್ ಕಾರಟ್‌ರವರೇ ಇಲ್ಲಿ ವಿವರಿಸಿದ್ದಾರೆ.



## ಅಣು ಒಪ್ಪಂದ

# ಭಾರತದ ಜನತೆಯ ಹಿತವ್ರೋ ಬುಶ್ ನಿರ್ದೇಶನವ್ರೋ...



**ಪ್ರಕಾಶ್ ಕಾರಟ್**

ಪರಮಾಣು ವ್ಯವಹಾರ ಕುರಿತ ಯುಪಿಎ-ಎಡಪಕ್ಷಗಳ ಸಮಿತಿಯ ಒಂಭತ್ತನೇ ಸಭೆ ಸಮೀಪಿಸುತ್ತಿದ್ದಂತೆ ದೇಶವನ್ನು ಮತ್ತೊಮ್ಮೆ ಈ ಪರಮಾಣು ವ್ಯವಹಾರದ ಭವಿಷ್ಯದ ವಿಷಯದಲ್ಲಿ ಒಂದು ರಾಜಕೀಯ ಬಿಕ್ಕಟ್ಟಿನತ್ತ ತಳ್ಳಲಾಯಿತು. ಈ ಬಿಕ್ಕಟ್ಟಿಗೆ ಕಾರಣವೇನು?

ಇದಕ್ಕೆ ಉತ್ತರ ನೇರವಾಗಿ ಪ್ರಧಾನಮಂತ್ರಿಗಳು ಮತ್ತೆ ನಡೆಸಿದ ಪ್ರಯತ್ನದಲ್ಲಿದೆ. ಸುರಕ್ಷತಾ ಒಪ್ಪಂದದ ಪಠ್ಯದ ಮೇಲೆ ಅಂತರ್‍ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ (ಐಎಇಎ)ಯ ಮಂಜೂರಾತಿ ಪಡೆಯಲು ಅದರ ಆಡಳಿತಗಾರರ ಮಂಡಳಿ(ಬೋರ್ಡ್ ಆಫ್ ಗವರ್ನರ್ಸ್)ಯ ಬಳಿ ಹೋಗಲು ಹೊಸ ಪ್ರಯತ್ನ ನಡೆಸಲಾಗಿದೆ. ಇದು ಭಾರತ-ಅಮೆರಿಕಾ ಪರಮಾಣು ವ್ಯವಹಾರವನ್ನು ಮುಂದಕ್ಕೊಯ್ಯುವತ್ತಲೇ ಮತ್ತು 123 ಒಪ್ಪಂದವನ್ನು ಕಾರ್ಯಗತಗೊಳಿಸುವತ್ತಲೇ ಇಟ್ಟ ಹೆಜ್ಜೆ.

### ವ್ಯತಿರಿಕ್ತ ಹೆಜ್ಜೆ

ಐಎಇಎ ಆಡಳಿತಗಾರರ ಮಂಡಳಿಯ ಬಳಿ ಸಾರುವ ಅವರ ಈ ತುರ್ತು ಹೆಜ್ಜೆ ನವಂಬರ್ 2007ರಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳ ಮುಖಂಡರ ನಡುವೆ ಆದ ತಿಳುವಳಿಕೆಗೆ ವ್ಯತಿರಿಕ್ತವಾದದ್ದು. ಸರಕಾರ ಮಾತುಕತೆಗೆ ಐಎಇಎ ಸೆಕ್ರೆಟಾರಿಯೆಟ್ (ಕಾರ್ಯದರ್ಶಿ ಮಂಡಳಿ) ಬಳಿ ಹೋಗುತ್ತದೆ, ಆದರೆ ಮಂಜೂರಾತಿಗೆ ಆಡಳಿತಗಾರರ ಮಂಡಳಿಗೆ ಹೋಗುವುದಿಲ್ಲ ಎಂಬುದು ಆ ತಿಳುವಳಿಕೆ. ಈ ಮಾತುಕತೆಗಳ ಫಲಿತಾಂಶವನ್ನು ಯುಪಿಎ-ಎಡಪಕ್ಷಗಳ ಸಮಿತಿಯ ಪರಿಗಣನೆಗೆ ಹಾಗೂ ಅದು ಕಂಡುಕೊಂಡ ಅಂಶಗಳನ್ನು ಅಂತಿಮಗೊಳಿಸಲಿಕ್ಕಾಗಿ ವರದಿ ಮಾಡಲಾಗುವುದು. ಎಡಪಕ್ಷಗಳ ಒಪ್ಪಿಗೆಯಿಲ್ಲದೆ ಐಎಇಎ ರಂಗದಲ್ಲಿ ಯಾವುದೇ ಮುಂದಿನ ಹೆಜ್ಜೆಯಿಡಲಾಗದು ಎಂದು ಸ್ಪಷ್ಟವಾಗಿ ಹೇಳಲಾಗಿತ್ತು. ಕಾಂಗ್ರೆಸ್ ಮುಖಂಡತ್ವವೂ ಇದನ್ನು ಸ್ವೀಕರಿಸಿತ್ತು.

ಈ ಪರಸ್ಪರ ತಿಳುವಳಿಕೆಯನ್ನು ನವಂಬರ್ 16, 2007ರಂದು ನಡೆದ ಯುಪಿಎ-ಎಡಪಕ್ಷಗಳ ಸಮಿತಿಯ ಆರನೇ ಸಭೆಯ ಹೇಳಿಕೆಯಲ್ಲಿ ಅಳವಡಿಸಲಾಗಿತ್ತು. 'ಸರಕಾರ ಮಾತುಕತೆಗಳಿಗೆ ಹೋಗುತ್ತದೆ ಮತ್ತು ಅದರ ಫಲಿತಾಂಶವನ್ನು ಸಮಿತಿಗೆ, ಅದು ಕಂಡುಕೊಂಡ ಅಂಶಗಳನ್ನು ಅಂತಿಮಗೊಳಿಸುವ ಮೊದಲು ಪರಿಗಣನೆಗಾಗಿ ಸಲ್ಲಿಸುತ್ತದೆ. ಭಾರತ-ಅಮೆರಿಕಾ ನಾಗರಿಕ ಪರಮಾಣು ಸಹಕಾರ ಒಪ್ಪಂದವನ್ನು ಕಾರ್ಯಗತಗೊಳಿಸುವ ಮೊದಲು ಸಮಿತಿ ಅಂತಿಮಗೊಳಿಸಿದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು' ಎಂದು ಸಭೆಯ ನಂತರ ನೀಡಿದ ಹೇಳಿಕೆ ತಿಳಿಸಿತ್ತು.


ಮೇ ತಿಂಗಳಲ್ಲಿ ಯುಪಿಎ-ಎಡಪಕ್ಷಗಳ ಸಮಿತಿಯ ಎಂಟನೇ ಸಭೆಯ ವೇಳೆಗೆ ಸುರಕ್ಷತಾ ಒಪ್ಪಂದದ ಪಠ್ಯದ

## ಸಂಘರ್ಷದ ಬಳಿಕವೂ...

ಅಮೆರಿಕಾ ಸಂಯುಕ್ತ ಸಂಸ್ಥಾನ ಪರಮಾಣು ಶಕ್ತಿಯ ಶಾಂತಿಯುತ ಬಳಕೆ ಕುರಿತಂತೆ ಬೇರೆ ಯಾವುದೇ ದೇಶದೊಂದಿಗೆ ವ್ಯವಹಾರ ನಡೆಸಬೇಕಾದರೆ ಈ ಬಗ್ಗೆ ಒಂದು ಒಪ್ಪಂದ ಮಾಡಿಕೊಳ್ಳಬೇಕು ಎಂದು ಅಲ್ಲಿನ ಅಣುಶಕ್ತಿ ಕಾನೂನಿನ 123 ನೇ ವಿಭಾಗ ವಿಧಿಸುತ್ತದೆ. ಇಂತಹ ಸುಮಾರು 25 ಒಪ್ಪಂದಗಳನ್ನು ಅಮೇರಿಕಾ ವಿವಿಧ ದೇಶಗಳೊಂದಿಗೆ ಮಾಡಿದೆ. ಈ ಹಿಂದೆ 1963ರಲ್ಲಿ ಭಾರತದೊಂದಿಗೂ ಇಂತಹ ಒಂದು ಒಪ್ಪಂದ ಮಾಡಿಕೊಂಡಿತ್ತು. ಈ ಬಾರಿಯ ಒಪ್ಪಂದದ ಪ್ರಕ್ರಿಯೆ ಜುಲೈ 18, 2005 ರಂದು ಭಾರತದ ಪ್ರಧಾನ ಮಂತ್ರಿಗಳ ಅಮೆರಿಕಾ ಭೇಟಿಯ ಸಂದರ್ಭದಲ್ಲಿ ಆರಂಭವಾಯಿತು. ಭಾರತ ಪೋಖ್ರಾನ್‌ನಲ್ಲಿ 1974ರಲ್ಲಿ ನಡೆಸಿದ ಮೊದಲ ಪರಮಾಣು ಪರೀಕ್ಷೆ ಹಾಗೂ 1998ರಲ್ಲಿ ನಡೆಸಿದ ಎರಡನೆ ಪರೀಕ್ಷೆಯಿಂದಾಗಿ ಹಲವು ನಿರ್ಬಂಧಗಳಿಗೆ ಒಳಗಾಗಿದ್ದು ಅವುಗಳಿಂದ ಹೊರಬರಲು ಇಂತಹ ಒಂದು ವ್ಯವಹಾರ ಬೇಕಾಗಿದೆ ಎಂದು ಈ ಪ್ರಕ್ರಿಯೆ ಆರಂಭ ವಾಯಿತು. ಮನಮೋಹನ್ ಸಿಂಗ್ ಮತ್ತು ಬುಶ್ ಪರಮಾಣು, ಬಾಹ್ಯಾಕಾಶ ಮತ್ತು ಇತರ ಪ್ರಕ್ರಿಯೆಗಳಲ್ಲಿ ಸಹಕಾರ ಕುರಿತಂತೆ ಒಂದು ಹೇಳಿಕೆ ನೀಡಿದರು. ಮುಂದೆ ಅಧ್ಯಕ್ಷ ಬುಶ್‌ರವರ ಭಾರತ ಭೇಟಿ ಕಾಲದಲ್ಲಿ ಭಾರತದ ನಾಗರಿಕ ಮತ್ತು ಮಿಲಿಟರಿ ಪರಮಾಣು ಸೌಲಭ್ಯಗಳನ್ನು ಪ್ರತ್ಯೇಕಿಸುವ ಬಗ್ಗೆ ಮಾರ್ಚ್ 21, 2006ರಂದು ಒಪ್ಪಂದ ನಡೆಯಿತು.

ನಂತರ 123 ಒಪ್ಪಂದದ ಕುರಿತು ಎರಡೂ ದೇಶಗಳ ನಡುವೆ ಮಾತುಕತೆಗಳು ಆರಂಭವಾದವು. ಅಮೆರಿಕಾದ ಕಾನೂನುಗಳ ಪ್ರಕಾರ ಅಲ್ಲಿನ ಕಾಂಗ್ರೆಸ್ಸಿ(ಸಂಸತ್ತು)ನ ಎರಡೂ ಸದನಗಳಲ್ಲಿ ಈ ಬಗ್ಗೆ ಚರ್ಚೆಯಾಗಬೇಕು. ಈ ಒಪ್ಪಂದಕ್ಕೆ ಕಾನೂನಿನ ಆಧಾರ ಕಲ್ಪಿಸುವ ಮಸೂದೆಗಳು ಅಲ್ಲಿಯ ಕಾಂಗ್ರೆಸ್ಸಿನ ಎರಡೂ ಸದನಗಳಲ್ಲಿ ಮಂಡಿಸಲ್ಪಟ್ಟು ಚರ್ಚೆ ನಡೆಯಿತು. ಆ ಮಸೂದೆಗಳ ಬಗ್ಗೆ ಭಾರತದ ರಾಜಕೀಯ ಪಕ್ಷಗಳಿಂದ ಮುಖ್ಯವಾಗಿ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳಿಂದ ಹಾಗೂ ಕೆಲವು ಹಿರಿಯ ಅಣು ವಿಜ್ಞಾನಿಗಳಿಂದಲೂ ವಿಮರ್ಶೆಗಳು ಬಂದವು. ಈ ಹಿನ್ನೆಲೆಯಲ್ಲಿ ಅಗಸ್ಟ್ 17 ರಂದು ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಒಂದು ವಿವರವಾದ ಉತ್ತರದಲ್ಲಿ ಹಲವು ಭರವಸೆಗಳನ್ನು ನೀಡಿದರು.

ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ಡಿಸೆಂಬರ್ 18 ರಂದು 123 ಒಪ್ಪಂದಕ್ಕೆ ಆಧಾರ ಕಲ್ಪಿಸುವ ಕಾನೂನನ್ನು ಅಂಗೀಕರಿಸಿತು. ಇದನ್ನು 'ಸಂಯುಕ್ತ ಸಂಸ್ಥಾನಗಳು-ಭಾರತ ಶಾಂತಿಯುತ ಅಣು ಶಕ್ತಿ ಸಹಕಾರ ಕಾನೂನು, 2006' ಅಥವಾ ಸಂಕ್ಷಿಪ್ತವಾಗಿ ಹೈಡ್ ಆಕ್ಟ್ ಎನ್ನಲಾಗುತ್ತದೆ (ಆಗ ಅಮೆರಿಕಾದ ಕಾಂಗ್ರೆಸ್ಸಿನ ಪ್ರತಿನಿಧಿ ಸದನ ಅಥವಾ ಹೌಸ್ ಆಫ್ ರೆಪ್ರೆಸೆಂಟೇಟಿವ್ಸನ ಅಂತರ್‍ರಾಷ್ಟ್ರೀಯ ಸಂಬಂಧಗಳ ಸಮಿತಿಯ ಅಧ್ಯಕ್ಷರ ಹೆಸರು ಹೆನ್ರಿ ಜೆ ಹೈಡ್). ಈ ಕಾನೂನಿಗೂ ಭಾರತದಲ್ಲಿ ಬಹಳ ಟೀಕೆಗಳು ಬಂದವು.




ಕೃಪೆ: ದ ಹಿಂದೂ

ಪುಟ 10 ಕ್ಕೆ

ಮಂಜೂರಾತಿಗೆ.ಆಡಳಿತಗಾರರ ಮಂಡಳಿಯೆದುರು ಹೋಗಲು ಸರಕಾರಕ್ಕೆ ಅವಕಾಶ ನೀಡಬೇಕು ಎಂಬ ಬೇಡಿಕೆಯನ್ನು ಯುಪಿಎ ಯವರು ಎತ್ತಿದರು. ಸಮಿತಿ ಇನ್ನೂ ಸುರಕ್ಷತಾ ಒಪ್ಪಂದದ ಚರ್ಚೆಯಲ್ಲಿ ತೊಡಗಿತ್ತು. ಎಡ ಪಕ್ಷಗಳು ಒಪ್ಪಂದದ ಪಠ್ಯವನ್ನು ಕುರಿತು ಹಲವಾರು ವಿಷಯಗಳನ್ನು ಎತ್ತಿದ್ದವು. ಆದರೆ ಪಠ್ಯವನ್ನು ಅದು ಗೋಪ್ಯ ಎಂದು ವರ್ಗೀಕರಿಸಲಾಗಿದೆ ಎಂಬ ಸಬೂಬು ಹೇಳಿ ಸಮಿತಿಯ ಮುಂದೆ ಇಡಲಿಲ್ಲ. ಸಮಿತಿ ಸುರಕ್ಷತಾ ಒಪ್ಪಂದದ ಸ್ವರೂಪದ ಬಗ್ಗೆ ಯಾವುದೇ ತೀರ್ಮಾನಕ್ಕೆ ಬಂದಿರಲಿಲ್ಲ ಅಥವಾ ತಾನು ಕಂಡುಕೊಂಡ ಸಂಗತಿಗಳನ್ನು ಅಂತಿಮಗೊಳಿಸಿರಲಿಲ್ಲ. ಸರಕಾರ ಆ ನಂತರವೇ ಮುಂದುವರೆಯುವ ಬಗ್ಗೆ ಯೋಚಿಸಬೇಕಾಗಿತ್ತು.

**ಬುಶ್ ಬಯಕೆ, ನಮ್ಮ ಬಯಕೆ !**

ಈ ಘಟ್ಟದಲ್ಲಿ ಐಎಇಎ ಆಡಳಿತ ಮಂಡಳಿಯ ಬಳಿ ಹೋಗುವ ತುರ್ತಾದರೂ ಏನಿತ್ತು? ಅದರ ಹಿಂದಿರುವ ಕಾರಣ ಬುಶ್ ಆಡಳಿತದ ಒತ್ತಾಯ. ಭಾರತ ಐಎಇಎಯೊಂದಿಗೆ ಸುರಕ್ಷತಾ ಒಪ್ಪಂದದ ವಿಧಾನಗಳನ್ನು ಪೂರ್ಣಗೊಳಿಸಬೇಕು, ಈ ಮೂಲಕ ಅಮೆರಿಕನ್ನರು ಪರಮಾಣು ಪೂರೈಕೆದಾರರ ಗುಂಪಿ(ಎನ್‌ಎಸ್‌ಜಿ)ನಲ್ಲಿ ಭಾರತದೊಂದಿಗೆ ಪರಮಾಣು ವ್ಯಾಪಾರಕ್ಕೆ ವಿನಾಯ್ತಿ ನೀಡುವಂತೆ ಪ್ರಕ್ರಿಯೆಯನ್ನು ಔಪಚಾರಿಕವಾಗಿ ಆರಂಭಿಸುವ ಕ್ರಮವನ್ನು ಕೈಗೊಳ್ಳಬಹುದೆಂದು ಈ ಒತ್ತಾಯ. ಪ್ರಸಕ್ತ ಅಮೆರಿಕನ್ ಕಾಂಗ್ರೆಸ್(ಸಂಸತ್ತು)ಗೆ ಈ 123 ಒಪ್ಪಂದವನ್ನು ಅಂಗೀಕರಿಸುವಷ್ಟು ಸಮಯ ಉಳಿದಿಲ್ಲ ಎಂದು ಬುಶ್ ಆಡಳಿತಕ್ಕೆ ಚೆನ್ನಾಗಿ ಗೊತ್ತಿದೆ. ಎನ್‌ಎಸ್‌ಜಿ ಯಿಂದ ಅನುಮತಿ ದೊರೆಯುವ ವೇಳೆಗೆ ಅಮೆರಿಕನ್ ಕಾಂಗ್ರೆಸ್ ಅದನ್ನು ಪರಿಶೀಲಿಸಿ 123 ಒಪ್ಪಂದವನ್ನು ಅಂಗೀಕರಿಸಲು ತುಂಬ ವಿಳಂಬವಾಗಿರುತ್ತದೆ. ತನ್ನ ಅಧ್ಯಕ್ಷತೆಯ ಕೊನೆಯ ಕೆಲವು ಕಳಂಕಿತ ತಿಂಗಳುಗಳಲ್ಲಿ ಕನಿಷ್ಟ ಈ ಪರಮಾಣು ವ್ಯವಹಾರವಾದರೂ ಮುಂದಿನ ಅಧ್ಯಕ್ಷರು ಕೈಗೆತ್ತಿಕೊಳ್ಳಬಹುದಾದ ತನ್ನ ಒಂದು ಬಳುವಳಿಯಾಗಿ ಇರುತ್ತದೆ ಎಂಬುದು ಆಧ್ಯಕ್ಷ



ಜಂಟಿ ಸಭೆ ನಂತರ ಸೀತಾರಾಂ ಯೆಚೂರಿ, ಪ್ರಣವ ಮುಖರ್ಜಿ

ಬುಶ್‌ರವರ ಬಯಕೆ. ಆತನ ಅಧಿಕಾರಾವಧಿ ಮುಗಿಯುವುದರೊಳಗೆ ಎನ್‌ಎಸ್‌ಜಿ ಅನುಮತಿ ಸಿಕ್ಕರೆ ಇದು ಖಂಡಿತವಾಗುತ್ತದೆ.

ಅಮೆರಿಕಾ ಹಾಕಿದ ಈ ವೇಳಾಪಟ್ಟಿಯೇ ಪ್ರಧಾನ ಮಂತ್ರಿಗಳು ಪರಿಣಾಮಗಳ ಪರಿವೆಯೇ ಇಲ್ಲದೆ ಮುಂದುವರೆಯುವಂತೆ ಒತ್ತಾಸೆ ನೀಡಿದ್ದು.

ಇಲ್ಲಿ ಅನುಸರಿಸಿದ ತಂತ್ರವೆಂದರೆ ಎಡಪಕ್ಷಗಳು ಚೂರುಚೂರೇ ಒಪ್ಪುವಂತೆ ಪ್ರಯತ್ನಿಸುತ್ತಾ ಹಂತ-ಹಂತವಾಗಿ 123 ಒಪ್ಪಂದವನ್ನು ಕಾರ್ಯಗತಗೊಳಿಸುವುದು. ಒಮ್ಮೆ ಆಡಳಿತಗಾರರ ಮಂಡಳಿಯ ಬಳಿ ಹೋದ ಮೇಲೆ ಸರಕಾರ ಮತ್ತೆ ಮುಂದುವರೆಯುವುದಿಲ್ಲ ಎಂದು ಎಡಪಕ್ಷಗಳಿಗೆ ಹೇಳಲಾಯಿತು. ಇದು ಈ ಹಿಂದೆ ನವಂಬರ್ 2007 ರಲ್ಲಿ ಕಾರ್ಯದರ್ಶಿಮಂಡಳಿಯೊಂದಿಗೆ ಮಾತುಕತೆಗಿಂತ ಮುಂದೆ ಹೋಗುವುದಿಲ್ಲ ಎಂಬ ಭರವಸೆಯ ರೀತಿಯದ್ದೇ. ಭಾರತ ಎನ್‌ಎಸ್‌ಜಿಯ ಸದಸ್ಯನಲ್ಲ. ಆದ್ದರಿಂದ ಭಾರತ-ಅಮೆರಿಕಾ ಪರಮಾಣು ಸಹಕಾರ ಒಪ್ಪಂದದ ಅಡಿಯಲ್ಲಿ ಅಲ್ಲಿ ಭಾರತದ ಕೆಲಸಕ್ಕೆ ಇತರ ಸದಸ್ಯರನ್ನು ಹೇಗಾದರೂ ಒಪ್ಪಿಸುವ ಜವಾಬ್ದಾರಿ ಅಮೆರಿಕಾದ್ದೇ ಎಂಬುದು ಎಲ್ಲರಿಗೂ ಗೊತ್ತು. ಇದನ್ನು ಪ್ರಧಾನ ಮಂತ್ರಿಗಳು ಮಾರ್ಚ್7, 2006 ರಂದು ಸಂಸತ್ತಿನಲ್ಲಿ ಭಾರತದ ಅಣುಸ್ಥಾವರಗಳನ್ನು ಪ್ರತ್ಯೇಕಗೊಳಿಸುವ ಯೋಜನೆಯ ಬಗ್ಗೆ ನೀಡಿದ ಹೇಳಿಕೆಯಲ್ಲಿ ದೃಢಪಡಿಸಿದ್ದಾರೆ. 'ಅಮೆರಿಕಾ ಪ್ರತ್ಯೇಕಗೊಳಿಸುವ ಯೋಜನೆಯನ್ನು ಒಪ್ಪಿಕೊಂಡಿದೆ. ಅದು ಈಗ ಅಮೆರಿಕಾದ ಕಾಂಗ್ರೆಸ್ ತನ್ನ ಕಾನೂನುಗಳನ್ನು ತಿದ್ದುಪಡಿ ಮಾಡುವಂತೆ ಮತ್ತು ಪರಮಾಣು ಪೂರೈಕೆದಾರರ ಗುಂಪು ತನ್ನ ಮಾರ್ಗನಿರ್ದೇಶನಗಳನ್ನು ಭಾರತ ಮತ್ತು ಅಂತರ್ರಾಷ್ಟ್ರೀಯ ಸಮುದಾಯದ ನಡುವೆ ಪೂರ್ಣ ನಾಗರಿಕ ಸಹಕಾರ ಸಾಧ್ಯವಾಗುವಂತೆ ಹೊಂದಿಸಿಕೊಳ್ಳುವಂತೆ ಮಾಡುವ ಆಶಯ ಹೊಂದಿದೆ' ಎಂದು ತಮ್ಮ ಹೇಳಿಕೆಯಲ್ಲಿ ಅವರು ಹೇಳಿದ್ದರು.

> "ಮನಮೋಹನ್ ಸಿಂಗ್ ಈಡೇರಿಸಬೇಕಾದ್ದು ಭಾರತದ ಜನತೆಗೆ ಕೊಟ್ಟ ಭರವಸೆಗಳನ್ನು, ಜಾರ್ಜ್‌ಬುಶ್‌ಗೆ ಕೊಟ್ಟ ಭರವಸೆಗಳನ್ನಲ್ಲ."
> - ಪ್ರಕಾಶ್ ಕಾರಟ್

ಎಲ್ಲಾ ಅಮೆರಿಕನ್ ಪಾಸ್‌ಪೋರ್ಟ್‌ಗಾಗಿ

ಪರಮಾಣು ಪೂರೈಕೆದಾರರ ಗುಂಪಿನಲ್ಲಿ ಅಮೆರಿಕ ಈಗಾಗಲೇ ಸಮಾಲೋಚನಾ ಪ್ರಕ್ರಿಯೆಯನ್ನು ಆರಂಭಿಸಿದೆ ಎಂಬುದು ವಾಸ್ತವ ಸಂಗತಿ. ಸೆಪ್ಟಂಬರ್ 2007ರಲ್ಲಿ ಬುಶ್ ಆಡಳಿತ 'ಭಾರತದೊಂದಿಗೆ ನಾಗರಿಕ ಪರಮಾಣು ಸಹಕಾರ' ಎಂಬ ನಿರ್ಧಾರಣಾ-ಪೂರ್ವ ಕರಡನ್ನು ಎನ್‌ಎಸ್‌ಜಿ ಯ ಒಂದು ಅನೌಪಚಾರಿಕ ಸಭೆಗೆ ಸಲ್ಲಿಸಿತ್ತು. ನಂತರ ಒಂದು ಪರಿಷ್ಕೃತ ಟಿಪ್ಪಣಿಯನ್ನು ಸಲ್ಲಿಸಲಾಯಿತು ಎಂದು ತಿಳಿದು ಬಂದಿದೆ. ಇತ್ತೀಚೆಗೆ ಮೇ 2008ರಲ್ಲಿ ಅಧಿಕಾರದಿಂದ ಇಳಿದ ಪರಮಾಣು ಪೂರೈಕೆದಾರರ ಗುಂಪಿನ ಮಾಜಿ ಅಧ್ಯಕ್ಷ ಅಬ್ದುಲ್ ಎಸ್ ಮಿಂಟಿ ಹೇಳಿದಂತೆ 'ಎನ್‌ಎಸ್‌ಜಿ ಈ ವಿಷಯವನ್ನು ವಿಧ್ಯುಕ್ತವಾಗಿ ಪರಿಶೀಲಿಸಿಲ್ಲ. ಐಎಇಎ ಯೊಂದಿಗೆ ಸುರಕ್ಷತಾ ಒಪ್ಪಂದ ಪೂರ್ಣಗೊಂಡಿತೆಂದಾಗ ಮಾತ್ರವೇ ಅದು ಈ ವಿಧಾನವನ್ನು ಆರಂಭಿಸಲು ಸಾಧ್ಯ. ಅದು ಹೇಗೆ ನಡೆಯಬಹುದೆಂದರೆ ಅಮೆರಿಕಾ ವಿಧ್ಯುಕ್ತವಾಗಿ ವಿನಾಯ್ತಿಗೆ ಒಂದು ವಿನಂತಿ ಮಾಡಿಕೊಳ್ಳುತ್ತದೆ ಮತ್ತು ಒಮ್ಮೆ ಅದರ ಒಕ್ಕಣಿಕೆ ನಮ್ಮ ಮುಂದೆ ಬಂತೆಂದರೆ ಹಾಗೂ ಆ ಒಕ್ಕಣಿಕೆ ಎನ್‌ಎಸ್‌ಜಿಯ ಎಲ್ಲಾ ಸದಸ್ಯರ ಮೇಲೆ ಏನು ಪರಿಣಾಮ ಬೀರಬಹುದು ಎಂದು ನೋಡಿದ ಮೇಲೆ ಅವರು ತಾವೇನು ಮಾಡಬೇಕು ಎಂದು ತೀವ್ರ ನಿಸ್ಸಹಾಯ ಸ್ಥಿತಿಯಲ್ಲಿರುತ್ತಾರೆ' (ಎನ್‌ಡಿಟಿವಿಯ ವಿಜ್ಞಾನ ಸಂಪಾದಕರೊಂದಿಗೆ ಸಂದರ್ಶನದಲ್ಲಿ- ವರದಿ, ಹಿಂದೂ, ಜೂನ್ 14, 2008).

ಐಎಇಎ ಆಡಳಿತ ಮಂಡಳಿಯ ಮಂಜೂರಾತಿ ಪಡೆದಾಗ ಅನೌಪಚಾರಿಕ ಸಮಾಲೋಚನೆಗಳನ್ನು ವಿಧ್ಯುಕ್ತಗೊಳಿಸಲಾಗುತ್ತದೆ. ಹೀಗೆ ಪರಮಾಣು ವ್ಯವಹಾರವನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯನ್ನು ಮುಂದೊಯ್ಯಲು ಮಂಡಳಿಯ

ಪುಟ 12ಕ್ಕೆ

# ಇದು ಕೇವಲ ಪರಮಾಣು ಒಪ್ಪಂದ ಅಲ್ಲ....

ಇದು ಕೇವಲ ಒಂದು ಪರಮಾಣು ಸಹಕಾರ ಒಪ್ಪಂದವಷ್ಟೇ ಅಲ್ಲ, ಇದಕ್ಕೆ ಹಲವು ಆಯಾಮಗಳಿವೆ, ಅವುಗಳಲ್ಲಿ ಹಲವು ಆತಂಕಕಾರಿಯಾದ ಸಂಗತಿಗಳಿವೆ ಎಂಬುದು ಇದನ್ನು ವಿರೋಧಿಸುವವರ ಮುಖ್ಯ ವಾದ. ಇದರಲ್ಲಿ ಅಮೆರಿಕಾದ ಸಾಮರಿಕ ಅಂದರೆ ಯುದ್ಧನೀತಿಯ ಹಿತಾಸಕ್ತಿಗಳು, ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಮೊಟಕುಗೊಳಿಸುವ ಅಂಶಗಳು, ನಮ್ಮ ದೇಶದ ರಕ್ಷಣೆ, ಉದ್ದಿಮೆ, ಕೃಷಿ ಮತ್ತು ಶಿಕ್ಷಣದ ಮೇಲೂ ನಕಾರಾತ್ಮಕ ಪ್ರಭಾವ ಬೀರುವ ಅಂಶಗಳು ಇವೆ. ಆದ್ದರಿಂದ ಇವೆಲ್ಲದರ ಬಗ್ಗೆ ಚರ್ಚೆಯಾಗಬೇಕು ಎಂಬ ಆಗ್ರಹ ಬಂದಿದೆ. ಇದು ಕೇವಲ ಒಂದು ಪರಮಾಣು ಒಪ್ಪಂದ ಅಲ್ಲ ಎಂಬುದು ಅಮೆರಿಕಾದ ಸರಕಾರದ ವಕ್ತಾರರ ಹೇಳಿಕೆಗಳಿಂದಲೂ ಸ್ಪಷ್ಟವಾಗುತ್ತದೆ. ಜುಲೈ 27, 2007 ರಂದು ಈ ಒಪ್ಪಂದವನ್ನು ಅಂತಿಮಗೊಳಿಸಿದ ಕೂಡಲೆ ಅಮೆರಿಕಾದ ವಿದೇಶಾಂಗ ರಾಜಕೀಯ ವ್ಯವಹಾರಗಳ ಅಪರ ಕಾರ್ಯದರ್ಶಿ (ಅಂಡರ್ ಸೆಕ್ರೆಟರಿ) ನಿಕೋಲಾಸ್ ಬರ್ನ್ಸ್ ಅಧಿಕೃತ ಹೇಳಿಕೆಯಲ್ಲಿ ಇದರಿಂದಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಆಗುವ ಪ್ರಯೋಜನಗಳ ಪಟ್ಟಿ ಮಾಡಿದ್ದರು. ನಂತರ 'ಫಾರಿನ್ ಅಫೇರ್ಸ್' (ವಿದೇಶಾಂಗ ವ್ಯವಹಾರಗಳು) ಪತ್ರಿಕೆಯ ನವೆಂಬರ್-ಡಿಸೆಂಬರ್ ಸಂಚಿಕೆಯಲ್ಲಿ ಅವರ ಲೇಖನದ ಶಿರೋನಾಮೆಯೇ 'ಭಾರತದೊಂದಿಗೆ ಅಮೆರಿಕಾದ ಸಾಮರಿಕ ಅವಕಾಶ: ಹೊಸ ಅಮೆರಿಕಾ-ಭಾರತ ಪಾಲುದಾರಿಕೆ'. ಅದರಲ್ಲಿ ಅವರು ಈ 'ಪ್ರಯೋಜನ'ಗಳನ್ನು ವಿಶದಪಡಿಸಿದ್ದಾರೆ-' ಈ ಒಪ್ಪಂದ ಸಾಮರಿಕ (ಯುದ್ಧ) ಪಾಲುದಾರಿಕೆಯನ್ನು ಆಳಗೊಳಿಸುತ್ತದೆ, ಭಾರತದಲ್ಲಿ ಅಮೆರಿಕಾದ ವ್ಯಾಪಾರಸ್ಥರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ, ಇರಾನ್‌ನಂತಹ ಪರಮಾಣು ಬಹಿಷ್ಕೃತರಿಗೆ ಶಕ್ತಿಶಾಲಿ ಸಂದೇಶ ನೀಡುತ್ತದೆ, ಮಿಲಿಟರಿ ತರಬೇತಿ, ಸಮರಾಭ್ಯಾಸಗಳು, ಭಾರತೀಯ ಸಶಸ್ತ್ರ ಪಡೆಗಳಿಗೆ ಅಮೆರಿಕನ್ ಮಿಲಿಟರಿ ಮಾರಾಟಗಳು.....?.



ಅಮೆರಿಕಾದ ಆಧ್ಯಕ್ಷ ಬುಶ್‌ರಿಂದ ಹಿಡಿದು ಬರ್ನ್ಸ್, ಭಾರತದಲ್ಲಿ ಅಮೆರಿಕನ್ ರಾಯಭಾರಿ ಮಲ್‌ಫೋರ್ಡ್ ಮುಂತಾದವರ ವರ್ತನೆಯೇ, ಈ ಒಪ್ಪಂದ ಬೇಗನೇ ಕಾರ್ಯಗತವಾಗಬೇಕು ಎಂಬ ತರಾತುರಿಯೇ ಸಂದೇಹಕ್ಕೆ ಎಡೆಮಾಡಿಕೊಡುತ್ತದೆ. ಜಾರ್ಜ್ ಬುಶ್ ಭಾರತದ ಮಹಾನ್ ಗೆಳೆಯ, ಅವರು ಈ ಒಪ್ಪಂದ ಏರ್ಪಡುವಲ್ಲಿ ನೆರವಾಗಿದ್ದಾರೆ ಎನ್ನುತ್ತಾರೆ ನಮ್ಮ ಪ್ರಧಾನ ಮಂತ್ರಿಗಳು. ಮಾಧ್ಯಮಗಳಲ್ಲಿ ಬರುವ ವರದಿಗಳ ಪ್ರಕಾರ ಜಾರ್ಜ್ ಬುಶ್‌ರವರ ಬಗ್ಗೆ ಅವರ ದೇಶದಲ್ಲಿಯೇ ಹಿಂದೆ ಯಾವ ಅಧ್ಯಕ್ಷರ ಬಗ್ಗೆಯೂ ಇಲ್ಲದ್ದಷ್ಟು ಕೆಟ್ಟ ಸಾರ್ವಜನಿಕಾಭಿಪ್ರಾಯ ಇದೆ. ತನ್ನ ದೇಶದಲ್ಲಿಯೇ ಅಪ್ರಿಯನಾಗಿರುವಾತ ನಮ್ಮ ದೇಶದ ಅತ್ಯುತ್ತಮ ಗೆಳೆಯ ಹೇಗಾಗಲು ಸಾಧ್ಯ.? ವಾಸ್ತವವಾಗಿ ಮುಂದಿನ ಅಧ್ಯಕ್ಷೀಯ ಚುನಾವಣೆಯ ಮೊದಲು ಒಂದಾದರೂ ಸಕಾರಾತ್ಮಕ ಸಾಧನೆಯನ್ನು ತೋರಿಸಲಿಕ್ಕಾಗಿ ಈ ತರಾತುರಿ ಎಂದೂ ಹೇಳಲಾಗುತ್ತಿದೆ. ಅಮೆರಿಕಾದ, ಅದಕ್ಕಿಂತ ಹೆಚ್ಚಾಗಿ ಅದರ ಈಗಿನ ಆಡಳಿತಕಾರರ ಹಿತಾಸಕ್ತಿ ಈಡೇರಿಸಲು ಭಾರತ ತನ್ನ ಸ್ವತಂತ್ರ ವಿದೇಶಾಂಗ ನೀತಿ, ದೇಶೀ ಪರಮಾಣು ಕಾರ್ಯಕ್ರಮ ಮತ್ತು ಭದ್ರತಾ ಕಾಳಜಿಗಳ ಮೇಲೆ ಮಾತ್ರವಲ್ಲ, ನಮ್ಮ ಉದ್ದಿಮೆಗಳು, ಕೃಷಿ ಮತ್ತು ಶಿಕ್ಷಣ ರಂಗದ ಮೇಲೂ ಇದು ಬೀರಬಹುದಾದ ಗಂಭೀರ ಪರಿಣಾಮಗಳನ್ನು ಪರಿಶೀಲಿಸದೆ ಮುಂದುವರೆಯಬೇಕೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ○

# ಹೊಣೆಗಾರಿಕೆಯಿಂದ ಜಾರಿಕೊಂಡವರು

ಪುಟ 3 ರಿಂದ

ಹೊರಡಿಸಿದರು! (ವಿರೋಧ ಪಕ್ಷದಲ್ಲಿದ್ದಾಗ ಏನೆಲ್ಲಾ ಆಡಿದರು ಎಂಬುದು ಅವರಿಗೆ ಮರೆತು ಹೋಗಿದೆ) ಗೊಬ್ಬರ ಸಾಕಷ್ಟಿದೆ ಎಂದು ಹೇಳುತ್ತಿದ್ದವರೇ, ತೀವ್ರ ಕೊರತೆಯಿದ್ದು ಕೇಂದ್ರ ಸರ್ಕಾರ ಮಾತ್ರವೇ ಇದಕ್ಕೆ ಹೊಣೆಯೆಂದರು '500 ಕೋಟಿ ಹಣ ಕೊಡುವೆ ಗೊಬ್ಬರ ತಂದು ಕೊಡಿ' ಎಂದು ಯಡ್ಡಿ ಹೇಳಿದ್ದರಲ್ಲಿ ಕಾಳಜಿಗಿಂತ ಮೂದಲಿಕೆ ಇತ್ತು. ಅಂತಿಮವಾಗಿ ಇಂತಹ ಹೇಳಿಕೆಯಿಂದ, 'ನಿಮಗೆ ಗೊಬ್ಬರ ಸಿಗುವುದಿಲ್ಲ' ನಮ್ಮ ಹಣೆಬರಹ ಎಂದು ರೈತರಿಗೆ ಹೇಳಿ ಆತ್ಮ ವಿಶ್ವಾಸ ಕಳೆಯುವಂತಹ ಹಾಗೂ ವ್ಯವಸ್ಥೆ ಕಲ್ಪಿಸುವ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಸಂದೇಶ ರವಾನಿಸಿದ ಮುಖ್ಯಮಂತ್ರಿ ಹೇಳುವ ಸುಳ್ಳುಗಳನ್ನೇ ಒಪ್ಪಬೇಕೆಂದು ಇದೆಯಾ? ಅಂತೆಯೇ ಧರಣಿನಿರತ ಕಾಂಗ್ರೆಸ್ಸಿಗರಿಗೆ 'ಪ್ರಧಾನಿಗೆ ದೂರು ನೀಡುವೆ' ಎಂದು ಹೆದರಿಸಲು ಹೋದದ್ದು ಹಾಸ್ಯಾಸ್ಪದ ಸಂಗತಿ.

**ಹೈಟೆಕ್ ಬೆನ್ನುಹತ್ತಿ:** ಸರ್ಕಾರಕ್ಕೆ ಕೃಷಿ ಬಿಕ್ಕಟ್ಟಿನ ತೀವ್ರತೆ, ಕೈಗಾರಿಕೆಗಳ ಮುಗ್ಗಟ್ಟು, ಬಗ್ಗೆ ಒಂದು ಆಳವಾದ, ಸಮಗ್ರವಾದ ಚರ್ಚೆಗೆ ತಯಾರಿಯೇ ಇಲ್ಲ ಎಂಬುದು ಆತಂಕದ ಸಂಗತಿಯೇ ಆಗಿದೆ. ಈಗಲೂ ಅಭಿವೃದ್ಧಿಯ ಮಂತ್ರ ಜಪಿಸುವ ಸರ್ಕಾರ ಬೆಂಗಳೂರು ಅಭಿವೃದ್ಧಿಗೆ ಮಹಾ ಸಮಾಲೋಚನೆ, ಕಾರ್ಯ ಯೋಜನೆ ರೂಪಿಸುವುದರಲ್ಲೇ ಮಗ್ನವಾಗಿದೆ. ಹಿಂದೆ ಎಸ್.ಎಂ.ಕೃಷ್ಣರಂತಹ ಹೈಟೆಕ್ ಮುಖ್ಯಮಂತ್ರಿಯವರೂ ಇಡೀ ಕಸರತ್ತು ನಡೆಸಿ ಕಾರ್ಪೋರೇಟ್ ಕಂಪನಿಗಳ ಯಜಮಾನರಿಂದ ಶಹಬ್ಬಾಸ್ ಹೇಳಿಸಿಕೊಂಡಿದ್ದರು. ಯಡಿಯೂರಪ್ಪನವರ ಬಿಜೆಪಿ ಸರ್ಕಾರವೂ ಇದಕ್ಕೆ ಹಾತೊರೆಯುತ್ತಿದೆ. ಅಂದರೆ ಪರಿಣಾಮ ಫಲಿತಾಂಶ? ಇತ್ತೀಚಿನ ದಿನಗಳಲ್ಲಂತೂ ಸಂಸದೀಯ ಕಲಾಪಗಳು ನೆಪ ಮಾತ್ರಕ್ಕೆ ಎಂಬಂತಹ ವಾತಾವರಣ ನಿರ್ಮಾಣವಾಗುತ್ತಿದೆ. ಕಲಾಪದ ಅಮೂಲ್ಯ ಸಮಯ 'ಕಾಲಹರಣ' ದಲ್ಲೇ ಕಳೆಯಲಾಗುತ್ತದೆ. ಗದ್ದಲದ ನಡುವೆಯೇ ಮಹತ್ವದ ಮಸೂದೆಗಳು ಅಂಗೀಕಾರಗೊಳ್ಳುತ್ತವೆ. ಬಂದ ಚರ್ಚೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಸೂಚಿಸುವ ಪ್ರಯತ್ನಗಳು ಸರ್ಕಾರದಿಂದಲೂ ನಡೆಯುವುದಿಲ್ಲ. ಪ್ರಜಾಪ್ರಭುತೀಯ ಮೌಲ್ಯಗಳಿಗೆ ಒಲವಿಲ್ಲದ ಸರ್ಕಾರ ಕಾರ್ಪೋರೇಟ್ ಕಂಪನಿಯಂತೆ ವ್ಯವಹಾರಿಕ ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತದೆ.

ಮೊನ್ನಿನ ಕಿರು ಅಧಿವೇಶನದಲ್ಲಿ ಸರ್ಕಾರ ವರ್ತಿಸಿದ್ದು, ವಿರೋಧಪಕ್ಷಗಳು ವಹಿಸಿದ ಪಾತ್ರವೂ ಹೆಚ್ಚಿನ ಆಶಾದಾಯಕ ಬೆಳವಣಿಗೆಯನ್ನು ಹುಟ್ಟಿಸಲಿಲ್ಲ. ಅರ್ಥಪೂರ್ಣ ಕಲಾಪಗಳಾಗಿ ಆಗ್ರಹದ ಅಗತ್ಯವಿದೆ.

# ಸಂಘರ್ಷದ ಬಳಿಕವೂ.....

ಪುಟ 8 ರಿಂದ

123 ಒಪ್ಪಂದಕ್ಕೆ ಮಾತುಕತೆಗಳು ಮುಂದುವರೆದವು. ಜುಲೈ 17ರಿಂದ 20ರವರೆಗೆ ವಾಶಿಂಗ್ಟನ್‌ನಲ್ಲಿ ಐದನೆ ಸುತ್ತಿನ ಮಾತುಕತೆಗಳು ನಡೆದವು. ಜುಲೈ 21, 2007ರಂದು 123 ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ ಎಂದು ಪ್ರಕಟಿಸಲಾಯಿತು. ಮೇಲ್ನೋಟಕ್ಕೆ ಈ ಒಪ್ಪಂದ ಅದುವರೆಗೆ ಬಂದ ಟೀಕೆಗಳನ್ನು ಗಮನಕ್ಕೆ ತಗೊಂಡಿದೆ ಎಂದು ಹೇಳಲಾದರೂ ಇದು ಅದಾಗಲೇ ಅಮೆರಿಕಾದ ಸಂಸತ್ತು ಅಂಗೀಕರಿಸಿದ ಹೈಡ್ ಆಕ್ಟ್‌ಗೆ ಒಳಪಟ್ಟಿದ್ದು ಅದು ಹಲವು ಆಕ್ಷೇಪಾರ್ಹ ಅಂಶಗಳನ್ನು ಒಳಗೊಂಡಿದೆ ಎಂದು ಕಂಡು ಬಂತು. ಆದ್ದರಿಂದ ಇದನ್ನು ಭಾರತದ ಸಂಸತ್ತಿನಲ್ಲೂ ಚರ್ಚಿಸಬೇಕು ಎಂಬ ಬೇಡಿಕೆ ಬಂತು. ಎಡಪಕ್ಷಗಳು ಮಾತ್ರವಲ್ಲ, ಬಿಜೆಪಿ ಮತ್ತು ಇತರ ವಿರೋಧ ಪಕ್ಷಗಳಿಂದಲೂ ವಿರೋಧ ವ್ಯಕ್ತವಾಯಿತು. ಈ ಒಪ್ಪಂದ ಕಾರ್ಯಗತವಾಗ ಬೇಕಾದರೆ ಭಾರತದ ಸಂಸತ್ತಿನ ಅಂಗೀಕಾರವೇನೂ ಬೇಕಾಗಿಲ್ಲ. ಆದರೆ ಅಮೆರಿಕಾದ ಕಾಂಗ್ರೆಸ್ ಇದಕ್ಕೆ ಅನುಮೋದನೆ ನೀಡಬೇಕಾಗುತ್ತದೆ. ಅದರ ಮೊದಲು ಅಂತರ್‍ರಾಷ್ಟ್ರೀಯ ಅಣು ಶಕ್ತಿ ಆಯೋಗ (ಐಎಇಎ) ದೊಂದಿಗೆ ಅನಂತಕಾಲದ ಸುರಕ್ಷಣಾ ಕ್ರಮಗಳ ಬಗ್ಗೆ ಮಾತುಕತೆ ನಡೆಸಿ ಒಪ್ಪಂದಕ್ಕೆ ಬರಬೇಕು. ನಂತರ ಪರಮಾಣು ಪೂರೈಕೆ ಗುಂಪು(ಎನ್ ಎಸ್ ಜಿ) ತನ್ನ ಮಾರ್ಗನಿರ್ದೇಶ ನಗಳಿಗೆ ಅನುಸಾರವಾಗಿ ಪರಮಾಣು ಸಾಮಗ್ರಿ ಗಳನ್ನು ಪೂರೈಸಲು ಒಪ್ಪಬೇಕು. ಎಡಪಕ್ಷಗಳು ಅಗಸ್ಟ್ 7ರಂದು ಒಂದು ಹೇಳಿಕೆ ನೀಡಿ ಈ ಒಪ್ಪಂದಕ್ಕೆ ಬಂದಿರುವ ಆಕ್ಷೇಪಣೆಗಳು ಗಂಭೀರ ಸ್ವರೂಪದವಾಗಿದ್ದು ಈ ಬಗ್ಗೆ ಸಂಪೂರ್ಣ ಚರ್ಚೆಯಾಗದೆ ಇದನ್ನು ಈಗಲೇ ಕಾರ್ಯಗತ ಗೊಳಿಸುವ ಮಾತುಕತೆಗಳಿಗೆ ಮುಂದಾಗಬಾರದು ಎಂದು ಆಗ್ರಹಿಸಿದವು. ಆರಂಭದಲ್ಲಿ ಕಾಂಗ್ರೆಸ್ ಮುಖಂಡರು ಇದನ್ನು ನಿರ್ಲಕ್ಷಿಸಿದರೂ ಎಡಪಕ್ಷಗಳ ದೃಢ ನಿಲುವಿನಿಂದಾಗಿ ಈ ಬಗ್ಗೆ ಚರ್ಚಿಸಲು ಯುಪಿಎ ಮತ್ತು ಎಡಪಕ್ಷಗಳ ಮುಖಂಡರಿರುವ ಒಂದು ಸಮಿತಿಯನ್ನು ರಚಿಸಲಾಯಿತು.

# ಭಾರತದ ಜನತೆಯ ಹಿತವೋ....

ಪುಟ 9 ರಿಂದ

ಮಂಜೂರಾತಿ ಒಂದು ಅಗತ್ಯ ಹೆಜ್ಜೆ.

ಐಎಇಎ ಮಂಜೂರಾತಿ ರಶ್ಯಾ ಮತ್ತು ಫ್ರಾನ್ಸಿನೊಂದಿಗೆ ಪರಮಾಣು ಸಹಕಾರಕ್ಕೆ ದಾರಿ ತೆರೆಯುತ್ತದೆ ಎಂಬುದನ್ನು ಮನದಲ್ಲಿಟ್ಟುಕೊಂಡು ತೆಗೆದು ಕೊಳ್ಳಲಾಗುತ್ತಿದೆ ಎಂದು ಎಡಪಕ್ಷಗಳಿಗೆ ಮನದಟ್ಟು ಮಾಡಿಸಲು ಯುಪಿಎ ಕಡೆಯವರು ಪ್ರಯತ್ನಿಸುತ್ತಿದ್ದಾರೆ. 123 ಒಪ್ಪಂದ ಈಗ ಅಜೆಂಡಾದಲ್ಲಿಯೇ ಇಲ್ಲವೇನೋ ಎಂಬ ಪೋಸು ಕೊಡುತ್ತಿದ್ದಾರೆ. ಇದಕ್ಕಿಂತ ಸತ್ಯದೂರವಾದದ್ದು ಬೇರೊಂದಿಲ್ಲ. 123 ಒಪ್ಪಂದವನ್ನು ಬದಿಗೊತ್ತಿ ಭಾರತ ಬೇರೆ ದೇಶಗಳೊಂದಿಗೆ ಪರಮಾಣು ವಾಣಿಜ್ಯದಲ್ಲಿ ತೊಡಗುವಂತಹ ಅತ್ಯಂತ ಕೆಟ್ಟ ಸ್ಥಿತಿ ಏರ್ಪಟ್ಟರೆ ಎನ್‌ಎಸ್‌ಜಿ ಭಾರತಕ್ಕೆ ವಿನಾಯ್ತಿ ಕೊಡದಂತೆ ಅಮೆರಿಕಾ ಮಾಡುತ್ತದೆ ಎಂದು ಅಮೆರಿಕಾದ ಉಪ ವಿದೇಶಾಂಗ ಕಾರ್ಯದರ್ಶಿ ನಿಕೊಲಾಸ್ ಬರ್ನ್ಸ್ ಫೆಬ್ರುವರಿ 2008 ರಲ್ಲಿ ಖಂಡ ತುಂಡವಾಗಿ ಹೇಳಿದ್ದಾರೆ. ಹೀಗೆ ಈಗ ಪಡೆಯಲು ಪ್ರಯತ್ನಿಸುತ್ತಿರುವ 'ಫಾಸ್ ಪೋರ್ಟ್' 'ಅಮೆರಿಕನ್ ಪಾಸ್‌ಪೋರ್ಟ್' ಅಲ್ಲದೆ ಬೇರೇನೂ ಅಲ್ಲ.

123 ಒಪ್ಪಂದ ಯಾವ ಹೈಡ್ ಆಕ್ಟ್ ಮೇಲೆ ಆಧರಿಸಿದೆಯೋ ಅದು ಪ್ರಧಾನ ಮಂತ್ರಿಗಳು ಆಗಸ್ಟ್ 2006ರಲ್ಲಿ ಸಂಸತ್ತಿಗೆ ನೀಡಿದ ಎಲ್ಲಾ ಭರವಸೆಗಳನ್ನು ಶೂನ್ಯಗೊಳಿಸಿದೆ ಎಂಬ ಕಾರಣದಿಂದಲೇ




ಸಿಪಿಐ(ಎಂ) ಮತ್ತು ಎಡಪಕ್ಷಗಳು ಈ ಪರಮಾಣು ವ್ಯವಹಾರವನ್ನು ನಿರಂತರವಾಗಿ ವಿರೋಧಿಸಿಕೊಂಡು ಬಂದಿವೆ. ಇದು ಭಾರತದ ವಿದೇಶಾಂಗ ನೀತಿ ಮತ್ತು ಭದ್ರತಾ ವ್ಯವಹಾರಗಳನ್ನು ಕುರಿತಂತೆ ವ್ಯಾಪಕ ಪರಿಣಾಮಗಳನ್ನು ಬೀರುವಂತದ್ದು.

ಎಡ ಪಕ್ಷಗಳು ಅಮೆರಿಕಾದೊಂದಿಗೆ ಒಂದು ಸಾಮರಿಕ ಮೈತ್ರಿಗೆ ಎಂದೂ ಸಮ್ಮತಿಸುವುದಿಲ್ಲ ಎಂದು ಚೆನ್ನಾಗಿ ತಿಳಿದಿದ್ದರೂ ಯುಪಿಎ ಸರಕಾರ ಮತ್ತು ಕಾಂಗ್ರೆಸ್ ಮುಖಂಡತ್ವ ಇದನ್ನು ಮುಂದೊತ್ತಲು ಪ್ರಯತ್ನಿಸುತ್ತಿರುವುದು ನಿಜಕ್ಕೂ ಆಶ್ಚರ್ಯಕರ. ಜೂನ್ 2005ರಲ್ಲಿ ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕಿದಂದಿನಿಂದ ಸಂಘರ್ಷ ಆರಂಭವಾಯಿತು. ಪರಮಾಣು ವ್ಯವಹಾರದ ಮೂಲಕ ಗಟ್ಟಿಗೊಳಿಸಲ್ಪಟ್ಟ ಇಂತಹ ಒಂದು ಸಾಮರಿಕ ಮೈತ್ರಿಯನ್ನು ತಡೆಯಲು ಎಡ ಪಕ್ಷಗಳು ಕಳೆದ ಮೂರು ವರ್ಷಗಳಿಂದ ಹೋರಾಟವನ್ನು ನಡೆಸುತ್ತಿವೆ.

ಆದ್ದರಿಂದ ಸುರಕ್ಷತಾ ಒಪ್ಪಂದಕ್ಕೆ ಮಂಜೂರಾತಿ ಪಡೆಯಲು ಸರಕಾರ ಐಎಇಎ ಆಡಳಿತ ಮಂಡಳಿಯ ಬಳಿಗೆ ಹೋಗುವ ವಿಚಾರದಲ್ಲಿ ಯಾವುದೇ ರಾಜಿಯಿರುವುದಿಲ್ಲ.

**ಸರಕಾರ ತಳೆಯಬಹುದಾದ ಪ್ರಾಮಾಣಿಕ ನಿಲುವು**

ಸರಕಾರ ಈ ಹಂತದಲ್ಲಿಯೂ ತಳೆಯಬಹುದಾದ ಒಂದು ಪ್ರಾಮಾಣಿಕ ಮತ್ತು ಗೌರವಾರ್ಹ ನಿಲುವೆಂದರೆ ಇಂತಹ ಒಂದು ಭಾರೀ ಮಹತ್ವದ ಅಂತರ್‍ರಾಷ್ಟ್ರೀಯ ಒಪ್ಪಂದಕ್ಕೆ ರಾಜಕೀಯ ಒಮ್ಮತ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ, ಸರಕಾರಕ್ಕೆ ಈ ವ್ಯವಹಾರ ದೇಶಕ್ಕೆ ಒಳ್ಳೆಯದು ಎಂದು ಮನವರಿಕೆಯಾಗಿದ್ದರೂ ಅದು ಮುಂದುವರೆಯುವುದಿಲ್ಲ ಎಂದು ಹೇಳುವುದು. ಸಂಸತ್ತಿನಲ್ಲಿ ಡಿಸೆಂಬರ್ 2007 ರಲ್ಲಿ ನಡೆದ ಚರ್ಚೆ ನಿಜವಾಗಿಯೂ ಬಹುಪಾಲು ಸದಸ್ಯರು ಈ ವ್ಯವಹಾರವನ್ನು ಮುಂದುವರೆಸುವುದಕ್ಕೆ ವಿರೋಧವಾಗಿದ್ದಾರೆ ಎಂದು ತೋರಿಸಿತು.

ಹಣದುಬ್ಬರ ಮತ್ತು ನಾಗಲೋಟ ಹೂಡಿರುವ ಬೆಲೆಗಳು ಜನಗಳ ಬದುಕನ್ನು ಅಸಹನೀಯ ಗೊಳಿಸಿರುವ ಸಂದರ್ಭದಲ್ಲಿ ದೇಶವನ್ನು ಈ ಬಿಕ್ಕಟ್ಟಿಗೆ ತಳ್ಳಲಾಗಿದೆ. ಸರಕಾರ ಬೆಲೆಯೇರಿಕೆಯನ್ನು ತಡೆಯುವಲ್ಲಿ ಸಂಪೂರ್ಣ ವಿಫಲವಾಗಿದೆ. ದೇಶದ ನಾಯಕತ್ವ ವಿಶ್ವವೆಲ್ಲಾ ಹೀನಾಮಾನವಾಗಿ ಬಯ್ಯುತ್ತಿರುವ, ತನ್ನ ದೇಶದಲ್ಲೇ ಅತ್ಯಂತ ಕಡಿಮೆ ವಿಶ್ವಾಸಾರ್ಹತೆಯಿರುವ ಒಬ್ಬ ಅಮೆರಿಕನ್ ಅಧ್ಯಕ್ಷನಿಗೆ ಕೊಟ್ಟ ಮಾತನ್ನು ನೆರವೇರಿಸುವ ಮತ್ತು ಅಮೆರಿಕಾದೊಂದಿಗೆ ಸಾಮರಿಕ ಪಾಲುದಾರನಾಗುವ ಕಣ್ಣೋಟದ ಗೀಳು ಹತ್ತಿಸಿಕೊಂಡದ್ದನ್ನು ನೋಡುತ್ತಿದೆ. ನಮ್ಮ ದೇಶದ ಮತ್ತು ಜನಗಳ ಆದ್ಯತೆಗಳನ್ನು ಗಮನದಲ್ಲಿಟ್ಟಿದ್ದರೆ ಸರಕಾರ ಹಣದುಬ್ಬರವನ್ನು ಮತ್ತು ಬೆಲೆಯೇರಿಕೆಯನ್ನು ಹತ್ತಿಕ್ಕಲು ಯುದ್ಧೋಪಾದಿಯಲ್ಲಿ ತೊಡಗಿರಬೇಕಾಗಿತ್ತು, ಜನಗಳಿಗೆ ಪರಿಹಾರಗಳನ್ನು ಒದಗಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ ಕಳೆದೆರಡು ವಾರಗಳಲ್ಲಿ ಈ ಸರಕಾರದ ಆದ್ಯತೆಗಳೇನು ಎಂದು ಬಯಲಿಗೆ ಬಂದಿದೆ.

ಇದು ಬಿಜೆಪಿ ಮತ್ತು ಇತರ ಕೋಮುವಾದಿ ಶಕ್ತಿಗಳು ದುರುಪಯೋಗ ಪಡಿಸಿಕೊಳ್ಳಬಹುದಾದ ಒಂದು ಸನ್ನಿವೇಶ. ಅಮೆರಿಕಾ-ಪರ ಮಾರ್ಗ ದೇಶದಲ್ಲಿ ಬಲಪಂಥೀಯ ಕೋಮುವಾದಿ ಶಕ್ತಿಗಳಿಗೆ ಇನ್ನಷ್ಟು ಅನುಕೂಲ ಮಾಡಿಕೊಡುತ್ತದೆ. ಕಾಂಗ್ರೆಸ್ ಮುಖಂಡತ್ವ ಇಂತಹ ಒಂದು ಮಾರ್ಗ ಹಿಡಿಯುವುದರ ಗಂಭೀರ ಪರಿಣಾಮಗಳನ್ನು ಅರಿತುಕೊಳ್ಳುತ್ತದೆ ಎಂದು ಆಶಿಸಬೇಕಷ್ಟೇ.

# ಅಂತಃಕರಣೆಯ ಬರಗಾಲ

ಡಾ. ಮೀನಾಕ್ಷಿ ಬಾಳಿ


"ಮೇಡಂ ಅವರೇ ಹಳ್ಯಾನ ಮಂದಿ ಬದ್ಮಾಸ್ ಆಗ್ಯಾರಿ, ಮಹಾಕುಡುಕರು, ಮೋಸ ಗಾರರು, ಮೈಗಳ್ಳರು ಆಗ್ಯಾರ್ರಿ. ಥೊಡೇ ಕಷ್ಟಾ ಬಂದ್ರ ಸಾಕು ಸಾಯ್‌ಬೇಕ್ ಅಂತಾರ್ರಿ. ಹೇಡಿ ನನ್ ಮಕ್ಳು" ಅಂತ ಉವಾಚಿದರು. ಮೇಲ್ನದರಿಗೆ ಆ ಗೃಹಸ್ಥರ ಮಾತುಗಳಲ್ಲಿ ಸತ್ಯ ಇದೆ ಎನಿಸುತ್ತಿರಬಹುದು. ಆದರೆ

ರೈತರ ಆತ್ಮಹತ್ಯೆಗಳ ಸಂಖ್ಯೆ ಹದಿನೆಂಟಕ್ಕೆ ತಲುಪಿದೆ. ಹಾವೇರಿ ಜಿಲ್ಲೆಯಲ್ಲಿ ರೈತರ ಮೇಲೆ ಗೋಲಿಬಾರ್ ಘಟನೆ ಜರುಗಿದಂದಿನಿಂದ ದಿನಕ್ಕೆ ಸರಾಸರಿ ಒಬ್ಬರಂತೆಯಾದರೂ ರೈತರು ರಸಗೊಬ್ಬರ, ಬೀಜ, ಇತ್ಯಾದಿಗಳಿಗೆ ಪರದಾಡುತ್ತಾ ಹತಾಶರಾಗಿ ಪ್ರಾಣ ಬಿಡುತ್ತಿದ್ದಾರೆ.ಸರಣಿ ಆತ್ಮಹತ್ಯೆಗಳು ಒಟ್ಟು ವ್ಯವಸ್ಥೆ ಎಂಥ ಅರಾಜಕ ಸ್ಥಿತಿಗೆ ಬಂದು ತಲುಪಲಿದೆ ಎಂಬುದನ್ನು ಸಾರುತ್ತವೆ.

ಈ ತೆರನ ಸಾವುಗಳು ಸಂಭವಿಸಿದಾಗ ವಿವಿಧ, ಭೂರ್ಜ್ವಾ ರಾಜಕೀಯ ಪಕ್ಷಗಳು ತಮ್ಮ ಶಕ್ತ್ಯಾನುಸಾರ ನಾಟಕಗಳ ಪ್ರದರ್ಶನಕ್ಕೆ ಇಳಿಯುತ್ತಾರೆ. ಆಡಳಿತ ಪಕ್ಷದವರು ತಕ್ಷಣವೇ ಐದತ್ತು ಸಾವಿರ ರೂಪಾಯಿಗಳಿಂದ ಲಕ್ಷದವರೆಗೆ ಪರಿಹಾರ ಚೆಕ್‌ಗಳನ್ನು ನೀಡುವುದು. ಸತ್ತವರ ಮನೆಗೆ ಹೋಗಿ ಸಾಂತ್ವಾನ ಹೇಳುವುದು ಮಾಧ್ಯಮಗಳಲ್ಲಿ ದೊಡ್ಡದಾಗಿ ಫೋಜು ಹೊಡೆದು ಮೊಸಳೆ ಕಣ್ಣೀರು ಸುರಿಸುವುದು ಇದೆಲ್ಲ ನಡೆಯುತ್ತವೆ. ಅಂತೆಯೇ ವಿರೋಧಿ ಪಾಳಯದಲ್ಲಿರುವ ಇತರ ಪಕ್ಷದವರು ಎದ್ದೇವು, ಬಿದ್ದೇವು ಎಂಬಂತೆ ಮೃತರ ಮನೆಗಳಿಗೆ ಭೇಟಿ ಕೊಡುವುದು, ಅದರೊಟ್ಟಿಗೆ ರೈತರ ಆರ್ಥಿಕ ದಿವಾಳಿತನವನ್ನು ಎನ್‌ಕ್ಯಾಷ್ ಮಾಡಿಕೊಳ್ಳುವ ದಿಕ್ಕಿನಲ್ಲಿ ಪಕ್ಷದ ವತಿಯಿಂದ ಅಷ್ಟಿಷ್ಟು ಹಣ ಕೊಟ್ಟು ಸುದ್ದಿ ಮಾಡುವುದು ಇವೆಲ್ಲ ಇಂದು ಹೇಸಿಗೆ ಬರಿಸುವ ರೀತಿಯಲ್ಲಿ ನಡೆಯುತ್ತಿವೆ.

## 'ಸೋಮಾರಿ ಶುಂಠಿಗಳು!'

ಈ ನಡುವೆ ಸದನದಲ್ಲಿ ಆಡಳಿತ ಪಕ್ಷದ ಸದಸ್ಯರು ರೈತರ ಆತ್ಮಹತ್ಯೆಗಳನ್ನು ನಕಲಿ ಸಾವುಗಳು, ಸತ್ತವರೆಲ್ಲ ನಕಲಿ ರೈತರು ಎಂಬ ಬೇಜವಾಬ್ದಾರಿಯ ಹೇಳಿಕೆಯನ್ನು ಇತ್ತಿರುವುದು ಪರಮ ನೀಚತನ ಎನಿಸದೆ ಇರದು. ಬೀದರ್, ಕಲ್ಬುರ್ಗಿ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಾಗಲೂ ಇದೇ ರಾಜಕೀಯ ಧುರೀಣರು ಸತ್ತವರೆಲ್ಲ ಒಕ್ಕಲುತನಕ್ಕಾಗಿ ಮಾಡಿದ ಸಾಲದಿಂದ ಸತ್ತವರಲ್ಲ. ಅವರೆಲ್ಲ ಕುಡಿತ, ಜೂಜು, ಇನ್ನಿತರ ಚಟಗಳಿಗೆ ದಾಸರಾದ್ದರಿಂದ, ಮತ್ತು ಮೂಲತಃ ಸೋಮಾರಿಗಳು ಬೇರೆ ಬೇರೆ ಕೆಲಸಗಳಲ್ಲಿ ತೊಡಗದೆ ಕುಳಿತು ತಿನ್ನುತ್ತಿರುವುದರಿಂದ ಸಾಲ ಮಾಡಿಕೊಂಡವರು ಎಂದು ವಿಶ್ಲೇಷಣೆಗೆ ಇಳಿದಿದ್ದರು. ಇವತ್ತಿಗೂ ಸಾಯುತ್ತಿರುವ ಅಮಾಯಕ ರೈತರ ಕುರಿತಂತೆ ಮಧ್ಯಮವರ್ಗದ ವಿದ್ಯಾವಂತ ನೌಕರಶಾಹಿಗಳ ಮನಸ್ಸಿನಲ್ಲಿ ಇದೇ ತರಹದ ಭಾವನೆಗಳಿವೆ. ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿಯ ಪೋಲಕಪಳ್ಳಿ ಗ್ರಾಮದಲ್ಲಿ ಆತ್ಮಹತ್ಯೆಗೆ



ಚನ್ನಗಿರಿ ತಾಲ್ಲೂಕಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತ ಮಹಿಳೆಯ ಶವ

ಶರಣಾದ ರೈತನನ್ನು ಕುರಿತು ಮಾತಾಡುವಾಗಲೂ ಪಕ್ಕದೂರಿನ ಬಿಜೆಪಿ ಬೆಂಬಲಿತ ನಿವೃತ್ತ ನೌಕರನೊಬ್ಬ ಇದೇ ರೀತಿಯ ವಾದಕ್ಕೆ ಇಳಿದದ್ದು ಕಂಡು ಸಭ್ಯಗೃಹಸ್ಥರಾದ ಸರದಿ ನನ್ನದಾಗಿತ್ತು. ಆ ಸಬ್ಬಗೃಹಸ್ಥರು ಹೂಡುವ ವಾದವೇನೆಂದರೆ ಭೇ ಸತ್ತವನು ಮಹಾಕುಡುಕನಾಗಿದ್ದ ಮತ್ತು ಮೈಗಳ್ಳ, ಅವಾರಾ ವ್ಯಕ್ತಿಯಾಗಿದ್ದ. ಅಸಲಿಗೆ ಅವನು ಒಕ್ಕಲುತನ ಖುದ್ದು ಮಾಡುತ್ತಿರಲಿಲ್ಲ. ಇದ್ದಿರುವ ನಾಲ್ಕೈದು ಎಕರೆ ಭೂಮಿಯಲ್ಲಿ ಅವನ ಹೆಂಡತಿ ಮಕ್ಕಳೇ ಒಕ್ಕಲುತನ ಮಾಡುತ್ತಿದ್ದರು. ಹೆಂಡತಿಯೇ ಎಲ್ಲಾ ಜವಾಬ್ದಾರಿ ನಿಭಾಯಿಸುತ್ತಿದ್ದಳು. ಜಬರದಸ್ತಿನಿಂದ ಗಂಡನಿಗೆ ಗೊಬ್ಬರ ತೆಗೆದುಕೊಂಡು ಬರಲು ಒಪ್ಪಿಸಿದ್ದರಿಂದ ಮೂಲತಃ ಸೋಮಾರಿಯಾದ ಆತ ಹೆಂಡತಿ ಮಕ್ಕಳ ಮೇಲಿನ ಸಿಟ್ಟಿನಿಂದ ಮಡಿದಿರುವುದುಂಟು ಎಂಬ ವಾದವನ್ನು ಅವರು ಹೂಡಿದರು ಮತ್ತೂ ಮುಂದುವರೆದು ಅವರು 'ನಾನು ರೈತನಿದ್ದೇನೆ. ನನಗೂ ಭೂಮಿ ಇದೆ. ಸ್ವಂತ ಒಕ್ಕಲುತನ ಮಾಡುತ್ತೇನೆ. ಆದರೆ ನಾನು ಸಾಲ ಮಾಡಿಲ್ಲ. ನನ್ನ ಮಕ್ಕಳು ಬೇರೆ ಬೇರೆ ಕೆಲಸ ಮಾಡಿ ದುಡಿದು ತಿನ್ನುತ್ತಿದ್ದಾರೆ. ನಮಗೆ ಯಾವುದಕ್ಕೂ ಕಡಿಮೆ ಇಲ್ಲ'. "ಮೇಡಂ ಅವರೇ ಹಳ್ಯಾನ ಮಂದಿ ಬದ್ಮಾಸ್ ಆಗ್ಯಾರಿ, ಮಹಾಕುಡುಕರು, ಮೋಸ ಗಾರರು, ಮೈಗಳ್ಳರು ಆಗ್ಯಾರ್ರಿ. ಥೊಡೇ ಕಷ್ಟಾ ಬಂದ್ರ ಸಾಕು ಸಾಯ್‌ಬೇಕ್ ಅಂತಾರ್ರಿ. ಹೇಡಿ ನನ್ ಮಕ್ಳು" ಅಂತ ಉವಾಚಿದರು. ಮೇಲ್ಪದರಿಗೆ ಆ ಗೃಹಸ್ಥರ ಮಾತುಗಳಲ್ಲಿ ಸತ್ಯ ಇದೆ ಎನಿಸುತ್ತಿರಬಹುದು. ಆದರೆ ಸಮಸ್ಯೆಯ ಸಂಕೀರ್ಣ ಆಯಾಮಗಳನ್ನು ಅರ್ಥೈಸಿಕೊಳ್ಳುವ, ಪರಾಮರ್ಶಿಸುವ ಸಹನೆ, ವ್ಯವಧಾನ ಅವರಾರಿಗೂ ಇಲ್ಲವಲ್ಲ ಎಂಬುದೇ ಈ ಹೊತ್ತಿನ ದುರಂತ.

## ಜಮೀನಿದ್ದರೆಲ್ಲ ರೈತರಾ?

ಜಮೀನು ಹೊಂದಿದವರೆಲ್ಲರೂ ರೈತರೆಂದೇನೂ ಅಲ್ಲ. ಅಷ್ಟಿಷ್ಟು ಜಮೀನು ಹೊಂದಿರುವ ಮಧ್ಯಮಗಾತ್ರದ ರೈತರು ಒಕ್ಕಲುತನವಲ್ಲದ ಬೇರೆ ಬೇರೆ ವ್ಯಾಪಾರ, ನೌಕರಿಗಳಲ್ಲಿ ತೊಡಗಿದ್ದು ಇತರೆ ಮೂಲದ ಆದಾಯ ಪಡೆದುಕೊಳ್ಳುವ ಹೊತ್ತಿನವರಿಗೆ ಪ್ರಾಯಶಃ ಇದರ ಬಿಸಿ ತಟ್ಟಲಾರದು. ಹೀಗೆಂದು ಅವರಿಗೂ ಒಕ್ಕುತನವನ್ನು ಉಪ ಆದಾಯವೆಂದು ಪರಿಗಣಿಸುತ್ತಿರುವಾಗಲೂ ಭಾರಿ ಆದಾಯವೇನು ದಕ್ಕುತ್ತಿಲ್ಲ. ಏಕೆಂದರೆ ಕಳೆದ ನೂರು ವರ್ಷಗಳ ಅವಧಿಯಲ್ಲಿ ಒಕ್ಕಲುತನವು ಆದಾಯಕರ ವೃತ್ತಿಯಾಗಿಯೇ ಇಲ್ಲ. ವರ್ಷದಿಂದ ವರ್ಷಕ್ಕೆ ಕೃಷಿಯು ಉತ್ಪಾದನೆ ಮತ್ತು ಮಾರಾಟದ ಬಿಕ್ಕಟ್ಟುಗಳನ್ನು ಎದುರಿಸುತ್ತಲೇ ಬರುತ್ತಿದೆ. ಇಂದು ಆಯ್ಕೆಯ ಅವಕಾಶಗಳಿಲ್ಲದ, ತೀರ ಮುಗ್ಧ ಅಮಾಯಕರು ಮಾತ್ರ ಶುದ್ಧ ಒಕ್ಕಲಿಗರಾಗಿ ಉಳಿದಿದ್ದಾರೆ. ಕೇವಲ ಕೃಷಿ ಆದಾಯದ ಮೇಲೆ ಅವಲಂಬಿಸಿರುವ, ಚಿಕ್ಕಾಸಿನ ಇತರ ಆದಾಯ ಮೂಲಗಳಿಲ್ಲದ ಶುದ್ಧಾಮಗ ಒಕ್ಕಲಿಗರಾಗಿರುವ ಗ್ರಾಮೀಣ ಜನತೆಯೇ ಇಂದು ಸಾವಿಗೆ ಶರಣಾಗುತ್ತಿದ್ದಾರೆ ಎಂಬುದನ್ನು ಗಮನಿಸಬೇಕು.

## ಕುಡುಕರನ್ನಾಗಿ ಮಾಡಿದವರ್ಯಾರು?

ಅಷ್ಟಕ್ಕೂ ರೈತಾಪಿ ಸಮೂಹದಲ್ಲಿ ಹಲವರು ಕುಡುಕರು, ಮತ್ತು ಇತರ ವ್ಯಸನಿಗಳಾಗಿರುವುದನ್ನು ಅಲ್ಲಗಳೆಯ ಲಾಗದು. 50-60 ವರ್ಷಗಳ ಹಿಂದೆ ತೀರ ಮುಗ್ಧರು, ಶುದ್ಧ ಸಾತ್ವಿಕರು, ಅಪಾರ ದುಡಿಮೆಗಾರರು ಆಗಿದ್ದ ಆ ಸಮುದಾಯದವರನ್ನು ಇಂದು ಈ ಸ್ಥಿತಿಗೆ ತಂದು ನಿಲ್ಲಿಸಿದವರು ಯಾರು? ಇಂದು ಹಳ್ಳಿಗಳಲ್ಲಿ ಕುಡಿತ, ಗುಟಖಾ ಇವುಗಳನ್ನು ಸಾಂಕ್ರಾಮಿಕ ರೋಗದಂತೆ ಹಬ್ಬಿಸಿದವರು ಯಾರು? ಬಿಜೆಪಿ, ಕಾಂಗ್ರೆಸ್, ಜನತಾದಳ, ಬಿ.ಎಸ್.ಪಿ., ಈ ಯಾವುದೇ ಪಕ್ಷಗಳಿರಬಹುದು ಕಳೆದ ಚುನಾವಣೆಗಳಲ್ಲಿ ಹೆಂಡ, ಸೆರೆ, ಹಣವನ್ನು ಹಂಚುವ ಮೂಲಕ ಇವರು ತಾನೇ ಜನರನ್ನು ಕುಡುಕರನ್ನಾಗಿ ಮಾಡಿದ್ದು, ಪ್ರತಿಯೊಂದು ಚುನಾವಣೆಯಲ್ಲಿ ನೂರಾರು ಹೊಸ ಕುಡುಕರು ನಿರ್ಮಾಣವಾಗುತ್ತಾರೆ. ಚುನಾವಣೆ ಪ್ರಚಾರಕ್ಕಾಗಿ ಸಾಮಾನ್ಯ ಜನತೆಯನ್ನು

ಪುಟ 15ಕ್ಕೆ

---

# ರಾಜ್ಯಪಾಲರ........

ಪುಟ 7 ರಿಂದ


ಸ್ಪಷ್ಟಪಡಿಸಿದ್ದವು.

ಸಿನ್ಹ ಮೊದಲೇ ಸಂಘಪರಿವಾರದ ಪರವಾದ ವ್ಯಕ್ತಿ. ಗೌರ್ನರ್ ಹುದ್ದೆಯಲ್ಲಿದ್ದರೂ ಬಿಜೆಪಿ ಪರವಾಗಿ ಹಲವಾರು ಕಾನೂನುಗಳನ್ನು ಕೈಗೊಳ್ಳುವಂತಹ ಘನಂಧಾರಿ ಕೆಲಸಗಳನ್ನು ಮಾಡಿದ್ದಾರೆ. ಅಸ್ಸಾಂನ ಗೌರ್ನರ್ ಸ್ಥಾನದಿಂದ ಸಿನ್ಹ ಅವರನ್ನು ಉದ್ದೇಶಪೂರ್ವಕವಾಗಿಯೇ ತೆಗೆದುಹಾಕಿದ ನಂತರ ಜಮ್ಮು ಮತ್ತು ಕಾಶ್ಮೀರದ ಗೌರ್ನರ್ ಆಗಿ ನೇಮಕ ಮಾಡಲಾಯಿತು. ಎಲ್ಲರಲ್ಲೂ ಆಶ್ಚರ್ಯ ಮೂಡುವ ವಿಷಯ ಎಂದರೆ ಯುಪಿಎ ಸರ್ಕಾರ ಸಿನ್ಹ ಅವರನ್ನು ಪೂರ್ಣಾವಧಿ ಮುಗಿಸಲು ಹೇಗೆ ಅವಕಾಶ ನೀಡಿತು ಎಂಬುದು. ಸಿನ್ಹ ತಮ್ಮ ಅಧಿಕಾರಾವಧಿಯಲ್ಲಿ ಪ್ರತ್ಯೇಕತಾವಾದಿ ಗುಂಪುಗಳಾದ ಸೈಯದ್ ಅಲಿ ಗಿಲಾನಿ ನೇತೃತ್ವದ ಹುರಿಯತ್‌ನಂತಹ ಮೂಲಭೂತವಾದಿ ಸಂಘಟನೆಗಳನ್ನು ಉದ್ರೇಕಿಸುವಂತ ಕೆಲಸ ನಿರ್ವಹಿಸಿರುವುದೇ ಆಗಿತ್ತು. ಇದೇ ಸಂದರ್ಭದಲ್ಲಿ ಜಮ್ಮುವಿನಲ್ಲಿರುವ ಹಿಂದೂ ಕೋಮುವಾದಿಗಳು ಅಲ್ಲಿನ ಜನತೆಯನ್ನು ಬೀದಿಗಿಳಿಸಿ ಪ್ರತಿಭಟನೆ ಮಾಡಲು ಅನುವಾಗುವಂತ ಪರಿಸ್ಥಿತಿಯನ್ನು ಸಿನ್ಹ ನಿರ್ವಹಿಸಿದರು.

ಪ್ರತಿ ವರ್ಷ ಸಾವಿರಾರು ಮಂದಿ ಕಾಶ್ಮೀರ ಮತ್ತು ಅಮರನಾಥ ಯಾತ್ರೆಗೆ ಪ್ರವಾಸ ಕೈಗೊಳ್ಳುತ್ತಾರೆ. ಇದು ಅನಾದಿ ಕಾಲದಿಂದಲೂ ಮುಂದುವರೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ. 1990ರಿಂದ ಹಿಂದೂ ಕೋಮುವಾದಿ ಸಂಘಟನೆಗಳು ಅಮರನಾಥ ಯಾತ್ರೆ ಮೇಲೆ ಕಣ್ಣಿಟ್ಟು ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳಲು ಮುಂದಾದರು. ಚಿಕ್ಕಮಗಳೂರಿನ ಬಾಬಾ ಬುಡನ್ ಗಿರಿ, ಕೋಲಾರದ ಅಂತರಗಂಗೆಯಲ್ಲಿ ಮಾಡುತ್ತಿರುವಂತೆ. ಯಾತ್ರಾರ್ಥಿಗಳ ಮಧ್ಯೆ ಪ್ರಚೋದನಕಾರಿ ಘೋಷಣೆಗಳನ್ನು ಕೂಗಲು ಆರಂಭಿಸಿದರು. ಯಾತ್ರೆಯನ್ನು ಸಂಪೂರ್ಣವಾಗಿ ಕೋಮುವಾದಿ ಬೀಜಗಳನ್ನು ಬಿತ್ತಲು ಶುರು ಮಾಡಿದರು. ಅನಾದಿ ಕಾಲದಿಂದಲೂ ಕೋಮುಸೌಹಾರ್ದತೆಯನ್ನು ಒಡಲಲ್ಲಿ ಇಟ್ಟುಕೊಂಡು ಬಂದಿರುವ ಕಾಶ್ಮೀರದ ಪರಂಪರೆಗೆ ಇದು ಸಂಪೂರ್ಣವಾಗಿ ವ್ಯತಿರಿಕ್ತವಾಯಿತು. ವಾಸ್ತವಾಗಿ ಅಮರನಾಥ ಗುಹೆಗಳು ಬಟಗುಂಡ್ ಮತ್ತು ಪಹಲ್‌ಗಾಂವ್‌ನ ಮುಸ್ಲಿಂ ಮಾಲಿಕ್‌ಗಳ ಸುಪರ್ದಿಯಲ್ಲಿದೆ. ಈ ಪ್ರದೇಶದಲ್ಲಿ ಯಾತ್ರಾರ್ಥಿಗಳಿಂದ ಅಪಾರ ಪ್ರಮಾಣದಲ್ಲಿ ಮಾಲಿನ್ಯ ಉಂಟಾಗುತ್ತದೆ. ಅಲ್ಲಿಗೆ ತೆಗೆದುಕೊಂಡು ಹೋಗುವ ವಸ್ತುಗಳನ್ನು ಬಳಸಿದ ನಂತರ ಅಲ್ಲೇ ಬಿಟ್ಟು ಬರುತ್ತಾರೆ. ಆದರೆ ದೈವಭಕ್ತಿಯಿಂದ ಕೂಡಿದ್ದ ಈ ಯಾತ್ರೆ ಇತ್ತೀಚಿನ ವರ್ಷಗಳಲ್ಲಿ ಕೋಮುವಾದ ಮತ್ತು ಮತ್ತೊಂದು ಕೋಮಿನ ವಿರುದ್ಧ ಅಣೆ ನೆರೆಸುತ್ತಿರುವ ಯಾತ್ರೆಯಂತಾಗಿದೆ.

ಅರಣ್ಯ ಭೂಮಿಯನ್ನು ಯಾತ್ರೆ ಕೈಗೊಳ್ಳುವ ಮಂಡಳಿಗೆ ಹಸ್ತಾಂತರಿಸುವುದು ಪರಿಸರ ಮಾಲಿನ್ಯಕ್ಕೆ ಎಡೆ ಮಾಡಿಕೊಟ್ಟಂತೆ. ಮೊದಲೇ ಸೂಕ್ಷ್ಮವಾಗಿರುವ ಕಾಶ್ಮೀರದ ಸುಂದರ ಪ್ರಕೃತಿಯನ್ನು ಇದು ವಿಕೃತಗೊಳಿಸುತ್ತದೆ. ಅಲ್ಲಿನ ಮೈತ್ರಿ ಸರ್ಕಾರ ನೀಡುತ್ತಿರುವ ವಿವಿಧ ರೀತಿಯ ಹೇಳಿಕೆಗಳನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಕಾಶ್ಮೀರದಲ್ಲಿ ಸೌಹಾರ್ದತೆ ಕಾಪಾಡಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಯಾತ್ರೆ ಮಂಡಳಿಗೆ ಭೂಮಿ ಹಸ್ತಾಂತರಿಸಲು ಕೈಗೊಂಡಿರುವ ನಿರ್ಧಾರವನ್ನು ಮತ್ತೆ ಪರಿಶೀಲಿಸಬೇಕು. ಈ ಯಾತ್ರೆ ಇತರ ಕೋಮಿನ ವಿರುದ್ಧ ದ್ವೇಷ ಸಾಧಿಸಲು ಅಲ್ಲ ಎನ್ನುವ ನಿಟ್ಟಿನಲ್ಲಿ ಕಾಶ್ಮೀರದಲ್ಲಿನ ಎಲ್ಲ ಜಾತ್ಯಾತೀತ ರಾಜಕೀಯ ಪಕ್ಷಗಳು ಮತ್ತು ಶಕ್ತಿಗಳು ಕಾರ್ಯನಿರ್ವಹಿಸುವ ಅಗತ್ಯ ಹಿಂದೆಂದಿಗಿಂತಲೂ ಈಗ ಅಧಿಕವಾಗಿದೆ.

ಕನ್ನಡಿ



ಕೆ.ಎಸ್.ವಿಮಲ

# ಭೂತನಹಳ್ಳಿಯಲ್ಲಿ ಆ ಅಲೆಮಾರಿಗಳು

ಅಯ್ಯೋ ಇದೇನಮ್ಮ ಬದುಕು, ಮೈಗೆ ಸೋಪು, ಬಟ್ಟೆಗೆ ಸೋಪು, ಕರೆಂಟ್ ದೀಪ ಅಂತೆ, ಅದಕ್ಕೆ ಪ್ರತಿ ತಿಂಗಳು ದುಡ್ಡು ಕಟ್ಬೇಕಂತ ಯಾರಿಗಮ್ಮ ಬೇಕಿತ್ತು ಇದು. ನಾವು ನಮ್ ಬದುಕಿನಲ್ಲೇ ಸುಖವಾಗಿದ್ವಿ. ನಾವೇ ಮಹಾರಾಜರಾಗಿದ್ವಿ. ಗಂಡ, ಹೆಂಡತಿ, ಮಕ್ಕಳು ಮರಿ ಅಂತ ಒಂದು ಗುಂಪು ಕಟ್ಕೊಂಡಿದ್ವಿ. ಮನಸ್ಸು ಬಂದಲ್ಲಿಗ ಎದ್ಕೊಂಡು ಹೋಗ್ತಿದ್ವಿ. ತಲೆಗೊಂದು ರುಮಾಲು ಕಟ್ಟಿ ಲಂಗೋಟಿ ಬಿಗಿದು, ಹಸುಗಳ ಮೇಲೆ ಸಾಮಾನು, ಬೆನ್ನಿಗೆ ಮಕ್ಕಳು ಕಟ್ಟಿಕೊಂಡು ನಮ್ ಖುಷಿ ಬಂದ ಹಾಗೆ ಹೋಗ್ತಿದ್ವಿ. ಈಗ ನೋಡು ಗೇಯೋಕೆ ಕೆಲಸ ಇಲ್ಲ, ಹೊಟ್ಟೆಗೆ ಹಿಟ್ಟಿಲ್ಲ. ಪಸಂಗಯ್ಯನ ಕಥೆ ಹೀಗೆ ಹರೀತಾನೇ ಇತ್ತು.

ಪಸಂಗಯ್ಯ, ಹಕ್ಕಿಪಿಕ್ಕಿ ಜನಾಂಗದ ಹಿರಿಯ ಜೀವ ಕಳೆದ 54 ವರ್ಷಗಳಿಂದ ತಮ್ಮ ಸಮುದಾಯದ ಜೀವನ ವಿಧಾನಕ್ಕೆ ಭಿನ್ನವಾಗಿ ಒಂದು ಕಡೆ ನೆಲೆ ನಿಂತ ಕುರಿತು ಅದರಿಂದ ಎದುರಿಸುತ್ತಿರುವ ಸಮಸ್ಯೆ ಕುರಿತು ಆಡುತ್ತಿರುವ ಮಾತಿದು.

ಈ ಜನರಿಗೆ ತಮ್ಮ ಜನಾಂಗದ ಮೂಲ ಯಾವುದೆಂದು ತಿಳಿದಿಲ್ಲ. ತಮ್ಮ ಪೂರ್ವಿಕರ ಮೂಲ ಊರು ಯಾವುದೆಂದೂ ತಿಳಿದಿಲ್ಲ. ಅಲೆಮಾರಿ ಜೀವನ ವಿಧಾನಕ್ಕೆ ಒಗ್ಗಿಕೊಂಡಿದ್ದ ಇವರನ್ನು ಈಗಿರುವ ಸ್ಥಳದಲ್ಲಿ ಉಳಿಯುವಂತೆ ಮಾಡಿದ್ದು ಆ ಊರಿನ ಒಬ್ಬ ಹಿರಿಯ ಎನ್ನುತ್ತಾನೆ ಚಂದ್ರಯ್ಯ. ಊರಿಂದೂರಿಗೆ ಅಲೆಯುತ್ತ ಬಯಲು ಕಂಡ ಜಾಗದಲ್ಲಿ ಟೆಂಟ್ ಹಾಕಿ, ಮಣಿಸರ, ಕುಸುರಿ, ಕವಡೆಗಳ ಕೆಲಸ ಮಾಡಿ, ಮಾರಾಟ ಮಾಡಿ ಜೀವನ ಸಾಗಿಸುವ ಈ ಜನ ದೇಶದ ಎಲ್ಲಾ ಭಾಷೆ ಮಾತನಾಡುತ್ತಾರೆ. ಇಂಗ್ಲೀಸ್ ಭಾಷೆ ಮಾತ್ರ ಬಾರದೆಂಬ ಕೊರಗೂ ಇವರಿಗಿದೆ.

**ಭೂತನಹಳ್ಳಿಯಲ್ಲಿ....**

ಕರ್ನಾಟಕದಲ್ಲಿ ಒಂದು ಭಾಷೆ ಇಲ್ಲ, ಕನ್ನಡ ರಾಜ್ಯದ ಭಾಷೆಯಾದರೂ ಕರ್ನಾಟಕದಲ್ಲಿಯೇ ವಿವಿಧ ರೀತಿಯ ಕನ್ನಡವಿದೆ ಎಂಬುದೂ ಅವನಿಂದ ವ್ಯಕ್ತವಾಗುತ್ತದೆ. ತಮಿಳುನಾಡಿನಲ್ಲಿ, ಆಂಧ್ರದಲ್ಲಿ ಅವರವರದೇ ಭಾಷೆ ಇದೆ. ಆದರೆ ಕರ್ನಾಟಕದಲ್ಲಿ ಎಲ್ಲ ಭಾಷೆಯ ಜನ ಸಿಗುತ್ತಾರೆ ಎಂಬುದನ್ನು ಆತ ಗಮನಿಸಿದ್ದಾನೆ. ಎಲ್ಲೋ ಒಂದು ಕಡೆ ಅದರ ಕುರಿತು ಅಸಹನೆಯೂ ಇದೆ. ಇದು ಯಾರ ಪ್ರಭಾವ ಎಂಬುದಕ್ಕೆ ಅವನಲ್ಲಿ ಉತ್ತರವಿಲ್ಲ. ಈ ಪಸಂಗಯ್ಯನ ಪ್ರಸಂಗ ನಮಗೆ ಸಿಕ್ಕಿದ್ದು ಪಡಿತರ (ಅ)ವ್ಯವಸ್ಥೆಯ ಸುತ್ತ ಒಂದು ಗಸ್ತು ಹಾಕುವ ನೆಪದಲ್ಲಿ ರಾಜ್ಯದ ರಾಜಧಾನಿಯಿಂದ ಕೂಗಳತೆಯ ದೂರದಲ್ಲಿರುವ ಆನೇಕಲ್ ತಾಲ್ಲೂಕಿನ ಹಕ್ಕಿ-ಪಿಕ್ಕಿ ಕಾಲೋನಿಗೆ ಭೇಟಿ ನೀಡಿದಾಗ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹತ್ತಿಕೊಂಡಂತೆ ಇರುವ ಭೂತನಹಳ್ಳಿಗೆ ನಾವು ಭೇಟಿ ನೀಡಿದಾಗ ರೇಷನ್ ಅಂಗಡಿ ಮಾಲೀಕ ... [illegible]

ಬರುತ್ತಾರೆ. ಹಿಂದೆಲ್ಲ ಕಾರ್ಡಿಗೆ 28 ಕೆ.ಜಿ. ಅಕ್ಕಿ ಕೊಡುತ್ತಿದ್ದೇವು. ಈಗ ಅದು ತಲೆಗೆ 4 ಕೆ.ಜಿ.ಯಂತೆ 16 ರಿಂದ 20 ಕೆ.ಜಿ.ಗೆ ಬಂದು ನಿಂತಿದೆ. ಅಣ್ಣ 2 ಕೆ.ಜಿ.ಯಾದರೂ ಜಾಸ್ತಿ ಕೊಡಣ್ಣ. ಗಂಜಿ ಕುಡಿಯೋಕೂ ಸಾಲಲ್ಲ ಎಂದು ಗೊಳಾಡುತ್ತಾರೆ. ನಮಗೆ ಕೊಡುವ ಅಕ್ಕಿಯಲ್ಲಿ ಎಲ್ಲರಿಗೂ ಕೊಡಬೇಕು. ನಾವೆಲ್ಲಿಂದ ಜಾಸ್ತಿ ಕೊಡಲು ಸಾಧ್ಯ ಹೇಳಿ. ಕೆಲವು ಬಾರಿ ಕಾರ್ಡಿಗೆ ಕೊಡಬೇಕಾದಷ್ಟು ಕೂಡ ಸರಬರಾಜು ಇರುವುದಿಲ್ಲ. ಬಡವರ ಗೋಳು ನೋಡಲಾಗುವುದಿಲ್ಲ ಎನ್ನುತ್ತಾರೆ. ದಿನಗೂಲಿಯೂ ಸಿಗದ ಸ್ಥಿತಿಯಲ್ಲಿರುವ ಜನರಿಗೆ ಎಪಿಎಲ್ ಕಾರ್ಡು. ಇನ್ನೂ ಕೆಲವರ ಬಳಿ ಹಳೆಯ ಕಾರ್ಡುಗಳಿವೆ ಹೊಸ ಸಮೀಕ್ಷೆಯ ನಂತರ ತಾತ್ಕಾಲಿಕ ಕಾರ್ಡು ಸಿಕ್ಕಿಲ್ಲ. ಹಾಗಾಗಿ ಅವರು ರೇಷನ್ ವ್ಯಾಪ್ತಿಗೆ ಒಳಪಡುವುದಿಲ್ಲ. ಆದರೆ ಗಂಜಿಯಾದರೂ ಕುಡಿಯು ಆಸೆಯಿಂದ ರೇಷನ್ ಅಂಗಡಿಗೆ ಓಡಿ ಬರುತ್ತಾರೆ. ಮಾನವೀಯ ಹೃದಯದ ಒಬ್ಬಿಬ್ಬರು ಇರುವ ದಾಸ್ತಾನಿನಲ್ಲಿ ಹೇಗೋ ಅಡ್ಜಸ್ಟ್ ಮಾಡಲು ಪ್ರಯತ್ನಿಸುತ್ತಾರೆ. ಆದರೆ ಸರ್ಕಾರ?

**ಪಾಳಿಯಂತೆ ಊಟ**

ಹಕ್ಕಿ-ಪಿಕ್ಕಿ ಕಾಲೋನಿಯಲ್ಲಿ ಸುಮಾರು 1000 ಜನ ವಸತಿ ಇದ್ದಾರೆ. ಹಲವರ ಬಳಿ ಬಿಪಿಎಲ್ ಕಾರ್ಡ್ ಇದೆ. ಆದರೆ ಕೊಡುವ ಅಕ್ಕಿ ಯಾವ ಮೂಲೆಗೂ ಸಾಲದು. ದುಡಿಯಲು ಕೂಲಿ ವಾರಕ್ಕೆ ಒಂದೆರಡು ದಿನ ಸಿಗಬಹುದು. ಕುಲ ಕಸುಬಾದ ಮಣಿ, ಸರ, ಸೂಜಿ, ದಬ್ಬಣ ಮಾರಾಟಕ್ಕೆ ಪ್ರಯತ್ನಿಸಿದಲ್ಲಿ ವಾರಕ್ಕೆ 100 ರಿಂದ 150 ಸಂಪಾದಿಸಬಹುದು. ಆದರೆ ಅದಕ್ಕೆ ಬೇಕಾದ ಕಚ್ಚಾ ಮಾಲಿಗೆ ಬೆಂಗಳೂರಿನ ಸಿಟಿ ಮಾರ್ಕೆಟ್‌ಗೆ ಹೋಗಬೇಕು. ಅಲ್ಲಿಂದ ತಂದು ಪೋಣಿಸಿ ಚಂದದ ಹಾರ ಮಾಡಿ ಮತ್ತೆ ಮಾರಾಟಕ್ಕೆ ತಿರುಗಾಡಿದಲ್ಲಿ ಸಿಗುವುದು 100-150 ರೂ.ಗಳು ಅದರಲ್ಲಿ ಮತ್ತೆ ಆದಾಯ ಸಿಗುವ ತನಕ ಬದುಕು ಕಳೆಯಬೇಕು. ಹಾಗೆಂದೇ ವಾರದಲ್ಲಿ 3 ದಿನ ಊಟ ಮಾಡಬಹುದಾದ ಪರಿಸ್ಥಿತಿ. ಬೆಳಿಗ್ಗೆ ತಿಂದರೆ ಮಾರನೇದಿನದವರೆಗೆ ಏನೂ ಇಲ್ಲ ಎನ್ನುವ ಸ್ಥಿತಿ. ಕೆಲವೊಮ್ಮೆ ಗಂಡ ಒಂದು ದಿನ, ಹೆಂಡತಿ ಒಂದು ದಿನ ಊಟ ಮಾಡುವ ಸ್ಥಿತಿ, ಈ ಪರಿಸ್ಥಿತಿ ವರ್ಷದುದ್ದಕ್ಕೂ!! ಯಾಕೆ? ಈ ಪ್ರಶ್ನೆಗೆ ಉತ್ತರ ಹುಡುಕುವುದು ನಮ್ಮ ಉದ್ದೇಶವಾಗಿತ್ತು.

ಪಸಂಗಯ್ಯ ಹೇಳುವಂತೆ ಅವರು ಅಲೆಮಾರಿಗಳಾಗಿದ್ದಾಗಲೇ ಅವರ ಬದುಕು ಸುಖವಾಗಿತ್ತು. ನೀರು ಕಂಡಲ್ಲಿ ಇಳಿದು, ನೆರಳು ಕಂಡಲ್ಲಿ ಟೆಂಟ್ ಹಾಕಿ, ಕಾಡು ಕಂಡಲ್ಲಿ ಬೇಟೆಯಾಡುತ್ತಿದ್ದ ಕಾಲವನ್ನು ಪಸಂಗಯ್ಯ ಖುಷಿಯಿಂದ ನೆನೆಸಿಕೊಳ್ಳುತ್ತಾನೆ. ಬೆಳಿಗ್ಗೆ ಮಧ್ಯಾಹ್ನ ರಾತ್ರಿ 3 ಹೊತ್ತು ಮಾಂಸ ಊಟ ಮಾಡುತ್ತಿದ್ದ ಕಾಲ. ಈಗ ಮಾಂಸ ತಿಂಗಳಿಗೊಮ್ಮೆ ಕೂಡ ಸಿಗದ ಗಗನ ಕುಸುಮ. ಇವರು ಹೆಸರಿಡುವುದೂ ವಿಚಿತ್ರ. ಯಾವ ಊರಿನಲ್ಲಿ ಮಗು ಹುಟ್ಟಿದರೆ ಆ ಊರಿನ ಹೆಸರು. ಹಾಗೆಂದೇ ಪಂಜಾಬ್, ಆಪಲ್ ರಾಣಿ, ... [illegible]

ಮಹಾರಾಜರು 350 ಎಕರೆ ಜಮೀನನ್ನು ಅವರ ಹೆಸರಿಗೆ ಉಂಬಳಿಯಾಗಿ ಬರೆದು ಕೊಟ್ಟಿದ್ದಕ್ಕೆ ದಾಖಲೆಯೂ ಇದೆ ಎನ್ನುತ್ತಾರೆ. ಆದರೆ ಸ್ವತಂತ್ರ ಭಾರತದ ಕರ್ನಾಟಕ ರಾಜ್ಯದಲ್ಲಿ ಆಗಿ ಹೋದ ಹಲವು ಸರ್ಕಾರಗಳು ಅತ್ತ ತಲೆಯೇ ಕೆಡಿಸಿಕೊಳ್ಳಲಿಲ್ಲ. ದಾಖಲೆ ಹಿಡಿದುಕೊಂಡು ಅಧಿಕಾರಿಗಳನ್ನು ಕೇಳಿ ಹೊರಟರೆ ಬಿಳಿ ಅಂಗಿ ಹಾಕಿ, ಠಾಕು, ಠೀಕಾಗಿ ಹೋಗದ ಈ ಜನರನ್ನು ತಿರುಗಿ ಕೂಡ ನೋಡುವುದಿಲ್ಲ, ನಾವು ಮನುಷ್ಯರಲ್ವ? ಇದು ಅಲ್ಲಿನ ನಿವಾಸಿಗಳ ಪ್ರಶ್ನೆ. ಒಬ್ಬಿಬ್ಬರು ತಹಶೀಲ್ದಾರ್‌ರು ಇವರ ಬಗ್ಗೆ ಸ್ವಲ್ಪ ಸಹಾನುಭೂತಿ, ಆಸಕ್ತಿ ತೋರಿಸಿದರಾದರೂ ಆಡಳಿತಾತ್ಮಕವಾಗಿ ಕೆಲಸ ಮುಂದೆ ಸಾಗುವ ಮೊದಲೇ ರಾಜಕೀಯದ ಪ್ರಭಾವದಿಂದ ವರ್ಗಾವಣೆಗೆ ಒಳಗಾದರೆಂಬುದೂ ಅಲ್ಲಿ ಕೇಳಿ ಬರುವ ಪಿಸು ಮಾತು. ಆ ಜನರ ಬದುಕಿಗೆ ಆಧಾರವಾಗಬಹುದಾಗಿದ್ದ 350 ಎಕರೆ ಜಮೀನು ಸಿಗುವುದೋ, ಇಲ್ಲವೋ ಆದರೆ ಕಾಲೋನಿಯ ಸುತ್ತ ಮುತ್ತ ಇರುವ ಸಣ್ಣ ಪುಟ್ಟ ಜಾಗದಲ್ಲಿ ಕೃಷಿ ಕೆಲಸ ಮಾಡುವ ಇವರಿಗೆ ಸುತ್ತಲಿನ ಆನೆಗಳ ಕಾಟ, ಕನಿಷ್ಠ ವರ್ಷಕ್ಕೆ ಒಬ್ಬರಾದರೂ ಆನೆಗಳ ಧಾಳಿಗೆ ಬಲಿಯಾಗುತ್ತಾರೆ.

**ವಧು ದಕ್ಷಿಣೆ!**

ಈ ಜನರಿಗೆ ತಮ್ಮ ಮೂಲವೇ ಗೊತ್ತಿರದಿದ್ದರೂ ಕೆಲವು ಆಚರಣೆಗಳನ್ನು ತಮ್ಮದೆಂದು ಗುರುತಿಸಿಕೊಂಡಿದ್ದಾರೆ. ಅವರ ಕುಲದ ನಿಯಮದಂತೆ ಹೆಣ್ಣು ಮಗುವಿಗೆ 7 ವರ್ಷವಾಗುವಾಗಲೇ ಮದುವೆ ನಡೆಯುತ್ತದೆ. ಗಂಡು ಕೂಡ 12-13ರ ಆಸುಪಾಸಿನಲ್ಲೇ ಇರುತ್ತಾನೆ. ಕುತೂಹಲದಿಂದ ಹೆಣ್ಣು ಮಗುವೆಂದು ಗರ್ಭಪಾತ ಮಾಡಿಸುವ ಪರಿಪಾಠವಿದೆಯೇ ಎಂದು ಕೇಳಿದರೆ ಅಯ್ಯಯ್ಯೋ ಮದ್ವೆ ಆಗಬೇಕು ಅಂದ್ರೆ ಹೆಣ್ಣಿನ ಕಡೆಯವರಿಗೆ 10,000 ಕೊಡಬೇಕು ನೀವೆಲ್ಲಿದ್ದೀರಿ. ಮುಂಚೆ ಎಲ್ಲಾ 500 ರೂ, 1000 ರೂ, ಇತ್ತು. ಈಗ ಸಾವಿರಾರು ಕೊಡಬೇಕು ಅಂತಾರೆ. ಹೊಟ್ಟೆಗೆ ಹಿಟ್ಟಿಲ್ಲದ ಆ ಬಡ ಸಮೂಹದಲ್ಲಿಯೂ ಹಣದ ಪಿಶಾಚಿ ಕಾಡುತ್ತಿದೆಯಲ್ಲ ಎನಿಸಿತು. ದಕ್ಷಿಣೆ ಯಾವುದೇ ಇರಲಿ ಕೊಡುವವರಿಗೆ ಅದು ಶೂಲವೇ ಅಲ್ಲವೇ? ಇಷ್ಟೆಲ್ಲ ಹಕ್ಕಿ-ಪಿಕ್ಕಿಗಳ ಸುತ್ತ ಸುತ್ತವಾಗ ಅವರ ಒಟ್ಟು ಬದುಕಿನ ಜೊತೆ ನಮ್ಮನ್ನೆಲ್ಲ ಬಹಳವಾಗಿ ಕಾಡಬೇಕಿರುವುದು ಯಾಕೆ ಈ ದೇಶದಲ್ಲಿ ಹಿಡಿ ಕೂಳಿಗೆ ಜನ ಪರದಾಡಬೇಕು. ಕೃಷಿ ಪ್ರಧಾನ ದೇಶವಾಗಿದ್ದು, ಹಸಿರು ಕ್ರಾಂತಿಯ ಹೆಗ್ಗಳಿಕೆ ಹೊಂದಿದ್ದು, ಇಂದಿಗೂ ಬಿಸಿಲು, ಮಳೆ, ಗಾಳಿ ಲೆಕ್ಕಿಸದೇ ದುಡಿಯುತ್ತಿರುವ ನೇಗಿಲ ಯೋಗಿಗಳ ಸಮೂಹ ಅನ್ನ ಕೃಷಿಯ ಕಾಯಕದಲ್ಲಿ ನಿರತರಾಗಿರುವಾಗ ಯಾಕೆ ಈ ಪರಿತಾಪ?

**ರೇಷನ್ ವ್ಯವಸ್ಥೆ**

ರೇಷನ್ ವ್ಯವಸ್ಥೆ ಎಂಬುದು ಕೇವಲ ನಮ್ಮ ದೇಶಕ್ಕೆ ಸೀಮಿತವಾದ, ಇತ್ತೀಚಿನ ಸಂಗತಿ ಅಲ್ಲ. ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಆಹಾರಕ್ಕಾಗಿ ಹಾಹಾಕಾರವೆದ್ದಾಗ ಬಂದಿದ್ದು ಈ ರೇಷನ್ ವ್ಯವಸ್ಥೆ. ಅಂದು ನಗರಗಳಲ್ಲಿ ಆಹಾರದ ತೀವ್ರ ಕೊರತೆ ... [illegible]

ಭಾರತದ ಸಂದರ್ಭದಲ್ಲಿ ಅದು ಮುಂದುವರೆಯಿತಲ್ಲದೇ ಹಲವು ನಿರ್ದಿಷ್ಟ ಕಾರಣಗಳಿಗಾಗಿ ಗ್ರಾಮಾಂತರ ಪ್ರದೇಶದಲ್ಲಿ ವಿಸ್ತರಿಸಲ್ಪಟ್ಟಿತು. ದೇಶದ ಎಲ್ಲರಿಗೂ ರೇಷನ್ ಪದ್ಧತಿಯಲ್ಲಿ ಧಾನ್ಯ, ಎಣ್ಣೆಗಳು ಸಿಗುತ್ತಿದ್ದದ್ದು ಜಾಗತೀಕರಣದ ಬಿಸಿಯಲ್ಲಿ ನಿಧಾನವಾಗಿ ಕರಗಿ ಇಂದು ಎಪಿಎಲ್ / ಬಿಪಿಎಲ್ ಎಂಬ ವರ್ಗೀಕರಣಕ್ಕೆ ಬಂದು ನಿಂತಿದೆ. 2000 ರಿಂದ 2004 ರ ಅವಧಿ ಯಲ್ಲಂತೂ ರೇಷನ್ ವ್ಯವಸ್ಥೆಯ ಅವನತಿಯ ಶೃಂಗಕಾಲವೆಂದೇ ಗುರುತಿಸ ಬಹುದು. ಒಂದು ಕಡೆ ಆಹಾರ ಉಗ್ರಾಣಗಳಲ್ಲಿ ತುಂಬಿ ತುಳುಕುತ್ತಿರುವ ಹುಳು ಹಿಡಿದು ಹಾಳಾಗುತ್ತಿರುವ 70 ಮಿಲಿಯನ್ ಟನ್ ಆಹಾರ ಧಾನ್ಯಗಳು. ಇನ್ನೊಂದೆಡೆ ಒರಿಸ್ಸಾದಂತಹ ರಾಜ್ಯಗಳಲ್ಲಿ ಹಸಿವಿನ ಸಾವುಗಳು, ಮಾನವೀಯತೆಯ ಕನಿಷ್ಠ ಭಾವ ಇರುವ ಯಾವುದೇ ವ್ಯಕ್ತಿ ಬೆಚ್ಚಿ ಬೀಳುವಂತಹ ಕ್ರಿಯೆಯಲ್ಲಿ ನಡೆಯಿತು. 2003ರಲ್ಲಿ ಹಸಿವಿನ ಸಾವುಗಳು ಜನ ಬದುಕುಳಿಯಲು ದಾರಿಯಾಗಿ ವಿಷಪೂರಿತ ಮಾವಿನ ಗೊರಟು ತಿನ್ನುತ್ತಿರುವಾಗ ಭಾರತ ಸರ್ಕಾರ ಸಾವಿರಾರು ಟನ್ ಆಹಾರ ಧಾನ್ಯಗಳನ್ನು ಅರಬ್ಬಿ ಸಮುದ್ರಕ್ಕೆ ಎಸೆದಿತ್ತು. ದೇಶದ ನಿರ್ಗತಿಕರು, ಬಡವರು ಹೊತ್ತು ಕೂಳಿಗಾಗಿ ಪರದಾಡುತ್ತಿದ್ದರೆ ನೆರವಿಗೆ ಧಾವಿಸಬೇಕಾದ ಸರ್ಕಾರ ರೇಷನ್ ದರಕ್ಕಿಂತ ಕಡಿಮೆ ದರಕ್ಕೆ 17 ಮಿಲಿಯನ್ ಟನ್ ಆಹಾರ ಧಾನ್ಯವನ್ನು ಪಶುಗಳ ಆಹಾರಕ್ಕಾಗಿ ವಿದೇಶಕ್ಕೆ ರಫ್ತು ಮಾಡಿತ್ತು.

2001-2002 ರಲ್ಲಿ ಒಂದು ಟನ್‌ಗೆ 2200 ರೂ.ಗಳಂತೆ ಎಂದರೆ ಸುಮಾರು 14,000 ಕೋಟಿ ರೂ.ಗಳನ್ನು ಆಹಾರ ದಾಸ್ತಾನು, ಸಾಗಾಣಿಕೆಗಾಗಿ ಸರ್ಕಾರ ವೆಚ್ಚ ಮಾಡಿತ್ತು. ಬಹುಶಃ ಕಡು ಬಡವರಿಗೆ ಸರ್ಕಾರ ಪುಕ್ಕಟೆ ಹಂಚಿ ಬಿಟ್ಟಿದ್ದರೂ ಬೊಕ್ಕಸಕ್ಕೆ 14000 ಕೋಟಿ ಉಳಿತಾಯವಾಗುತ್ತಿತ್ತು. ಆದರೇನು ಮಾಡುವುದು, ವಿಶ್ವ ಬ್ಯಾಂಕ್ ಅನುಮತಿ ಇರಲಿಲ್ಲವಲ್ಲ! ಜನರ ನೋವಿಗೆ ಸಂಕಟ ಪಟ್ಟವರಂತೆ ಅಂದಿನ ಪ್ರಧಾನಿ ವಾಜಪೇಯಿಯವರು ತಮ್ಮ ಹುಟ್ಟುಹಬ್ಬದ ಕೊಡುಗೆ ಎಂದು ಅಂತ್ಯೋದಯ, ಅನ್ನಪೂರ್ಣ ಎಂಬಿತ್ಯಾದಿ ಯೋಜನೆಗಳನ್ನು ಘೋಷಿಸಿದರು. ಅದರ ಬೆನ್ನಲ್ಲೇ ಅವರದೇ ಸರ್ಕಾರದ ಆದೇಶ ರಾಜ್ಯಗಳಿಗೆ ಬಂತು. ಅದರ ಪ್ರಕಾರ ರಾಜ್ಯದಲ್ಲಿನ ಬಡವರ ಸಂಖ್ಯೆ ಕಡಿಮೆ ಮಾಡಬೇಕು. ಅದು ಹೇಗೆ? ಬಡತನ ನಿರ್ಧಾರವಾಗುವ ಮಾನದಂಡಗಳಲ್ಲಿ ಬದಲಾವಣೆ, ಅದಕ್ಕಾಗಿಯೇ ಹೊಸ ಸಮೀಕ್ಷೆ, ಆ ಮೂಲಕ ವರಮಾನದಲ್ಲಿ ಏರಿಕೆ ಇಲ್ಲದಿದ್ದರೂ ಬಡವರಲ್ಲ. ಎಂತಹ ಜಾದೂ ಇದು!

ಈ ನೀತಿಯೇ ಮುಂದುವರೆಯುತ್ತಾ ಬಂದು ಈಗ ದೇಶ ತೀವ್ರ ಕೃಷಿ ಬಿಕ್ಕಟ್ಟನ್ನು ಎದುರಿಸುವ ಸ್ಥಿತಿಗೆ ಬಂದು ತಲುಪಿದೆ. ಆಹಾರ ಧಾನ್ಯಗಳ ಸ್ವಾವಲಂಬನೆಯತ್ತ ಕನಿಷ್ಠ ಗಮನವೂ ಹರಿಸದೇ ಎರ್ರಾ, ಬಿರ್ರಿ ವಾಣಿಜ್ಯ ಬೆಳೆಗಳಿಗೆ ಆದ್ಯತೆ ನೀಡಲಾಯಿತು. ನಂತರದಲ್ಲಿ ಅವುಗಳೂ ಬೆಲೆ ಸಿಗದ ಸ್ಥಿತಿ ತಲುಪಿತು. ಈಗ ಸಾಲದ ಸುಳಿಯಲ್ಲಿ ಸಿಕ್ಕು ... ಸಮುದಾಯ ಆತ್ಮಹತ್ಯೆಗೆ ... [illegible]

ವಾರದ ಸಂದರ್ಶನ

ಎಸ್‌ವೈಜಿ

## ಎನ್‌ಡಿಎ-ಯುಪಿಎ ಇಬ್ಬರೂ ಅಪರಾಧಿಗಳೇ

'ನಿಜ ಇದು ಆತಂಕದ ಬೆಳವಣಿಗೆ, ಆದರೆ ಪ್ರಬಲವಾಗಿ ಬೆಳೆಯಲು ಹೊಸ ಅವಕಾಶ' ಕರ್ನಾಟಕ ದಲ್ಲಿ ಬಿಜೆಪಿ ಅಧಿಕಾರ ಹಿಡಿದಿರುವ ಸನ್ನಿವೇಶದ ಬಗ್ಗೆ ಪ್ರತಿಕ್ರಿಯಿಸುತ್ತಾ, ಪ್ರಗತಿಪರ ಶಕ್ತಿಗಳು ಬೆಳೆಯಲು ಒದಗಿರುವ ಅವಕಾಶಗಳನ್ನು ನೆನಪಿಸುತ್ತ ಒಡನಾಡಿ ಕೆ.ವರದರಾಜನ್ ರವರು ಹೇಳಿದ ಖಚಿತ ಮಾತುಗಳು. ಮತ್ತು ಗೊಬ್ಬರಕ್ಕಾಗಿ ಹಾಹಾಕಾರ ಎದ್ದಿರುವ ಕರ್ನಾಟಕದಲ್ಲಿ ಈ ಸಮಸ್ಯೆಯ ಒಳ- ಹೊರಗು ಬಲ್ಲವರು. ನೀತಿಗಳ ಬದಲಾವಣೆ ಗಳಿಗೆ ಶ್ರಮಿಸುತ್ತಿರುವವರು. ಮೊನ್ನೆ ಬೆಂಗಳೂರಿಗೆ ಬಂದಿದ್ದಾಗ 'ಜನಶಕ್ತಿ' ಒಂದು ಕಿರು ಸಂದರ್ಶನ ನಡೆಸಿತು. ಕಾಮ್ರೇಡ್ ಕೆ.ವರದರಾಜನ್ ದೇಶದ ಜಗತ್ತಿನ ಅತೀ ದೊಡ್ಡ ರೈತ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳು ಹಾಗೆಯೇ ರಾಷ್ಟ್ರ ರಾಜಕಾರಣದಲ್ಲಿಯೂ ಒಬ್ಬ ಪ್ರಮುಖ ನಾಯಕರು. ಈ ಅನುಭವ ಮಿಳಿತ ಮಾತುಗಳು ಇಲ್ಲಿ....



# ಗೊಬ್ಬರದ ಕೊರತೆ ಖಂಡಿತ ನೀಗಿಸಬಹುದು. ಆದರೆ....

ಜನಶಕ್ತಿ: ರಸಗೊಬ್ಬರಕ್ಕಾಗಿ ಎಲ್ಲೆಡೆ ಹಾಹಾಕಾರ ಸೃಷ್ಟಿಯಾಗಿದೆ? ಈ ಸ್ಥಿತಿಗೆ ಕಾರಣವಾದ ಮೂಲಭೂತ ಅಂಶಗಳೇನು?

ಕೆ.ವಿ: ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ 15 ವರ್ಷಗಳಿಂದ ತರುತ್ತಿರುವ 'ಸುಧಾರಣೆಗಳ' ಫಲ. ಖಾಸಗೀಕರಣ, ಉದಾರೀಕರಣ, ಜಾಗತೀಕರಣ (ಎಲ್‌ಪಿಜಿ)ಗಳ ಹೆಸರಿನಲ್ಲಿ ಮುಕ್ತ ಮಾರುಕಟ್ಟೆಗೆ ಅವಕಾಶ ಕಲ್ಪಿಸಲಾಗಿದೆ. ಕಳೆದ ಒಂದೂವರೆ ದಶಕದಲ್ಲಿ ಕೃಷಿ ರಂಗದಲ್ಲಿ ಹೊಸ ಬಂಡವಾಳ ಹೂಡಿಕೆ ಮಾಡಲಾಗಿಲ್ಲ. ವಿಶೇಷವಾಗಿ ಶೇ.55ರಷ್ಟು ಗೊಬ್ಬರ ಕೈಗಾರಿಕೆಗಳು ಸರ್ಕಾರದ, ಸಹಕಾರ ಸಂಘಗಳ ಅಡಿಯಲ್ಲಿವೆ. ಭಾರತ ದೇಶವು 3ನೇ ಅತಿದೊಡ್ಡ ರಸಗೊಬ್ಬರ ಉತ್ಪಾದಕ. ಆದರೆ ಈ ಕ್ಷೇತ್ರದಲ್ಲಿ ಹಣದ ಹೂಡಿಕೆ ಇಲ್ಲ. ಸಹಕಾರಿ ಸಂಘಗಳ ಹಾಗೂ ಸರ್ಕಾರದ ಈ ಕೈಗಾರಿಕೆಗಳಿಗೆ ಬೃಹತ್ ಸಾಮರ್ಥ್ಯವಿದೆ. ಅದನ್ನು ಸರಿಯಾಗಿ ಬಳಸಲಿಲ್ಲ. ಬಳಸಿದ್ದು ಸಾಮರ್ಥ್ಯದ ಕೇವಲ ಶೇ.60 ರಷ್ಟು ಮಾತ್ರ. ಅದರಲ್ಲಿಯೂ ಬಹಳಷ್ಟು ಕೈಗಾರಿಕೆಗಳು ಮುಚ್ಚತೊಡಗಿವೆ.

ಜನಶಕ್ತಿ: ಕೃಷಿ ಪ್ರಧಾನವಾಗಿರುವ ಭಾರತದಲ್ಲಿ ಹೂಡಿಕೆಯನ್ನು ಯಾಕೆ ಕುಗ್ಗಿಸಲಾಯಿತು?

ಕೆ.ವಿ: ಇಲ್ಲಿ ನಮ್ಮ ದೇಶದ ಆದ್ಯತೆಗಳಿಗಿಂತ ಕೈಗಾರಿಕೆಗಳು ಲಾಭ ನಷ್ಟಗಳನ್ನು ನೋಡತೊಡಗಿವೆ. ಈ ಕೈಗಾರಿಕೆ ಅತಿ ಹೆಚ್ಚಿನ ಲಾಭವನ್ನು ಆಕರ್ಷಿಸುತ್ತಿಲ್ಲವಾದ್ದರಿಂದ ಹೂಡಿಕೆಯು ಇಲ್ಲ. ಖಾಸಗಿ ಉದ್ದಿಮೆಗಳೂ ಸಹ ಹೂಡಿಕೆ ಮಾಡುತ್ತಿಲ್ಲ.

2002-03 ರಲ್ಲಿ ಒಂದು ಹೆಕ್ಟೇರ್ ಆಹಾರ ಧಾನ್ಯಗಳ ಬೆಳೆಗೆ ಸರಾಸರಿ 100ಕೆ.ಜಿ. ರಸಗೊಬ್ಬರ ಬೇಕಾಗಿತ್ತು. ಆದರೀಗ ಆ ಬೆಳೆಯ ಬದಲಿಗೆ ಬೇರೆಯ ಬೆಳೆಗಳಿಗೆ ವರ್ಗಾವಣೆಯಾಗಿದೆ. ಹೀಗಾಗಿ ಅದಕ್ಕೆ ಹೆಕ್ಟೇರಿಗೆ 115 ಕೆ.ಜಿ. ಬಳಸಲಾಗುತ್ತಿದೆ. ಅಂದರೆ ಹೆಚ್ಚಿನ ಗೊಬ್ಬರ ಅಗತ್ಯವಿದೆ. ಆದರೆ ಅದಕ್ಕನುಗುಣವಾಗಿ ಉತ್ಪಾದನೆ ಯಾಗುತ್ತಿಲ್ಲ. ಇದಾಗ್ಯೂ ಭಾರತ ಜಗತ್ತಿನಲ್ಲಿಯೇ ಅತ್ಯಂತ ಕಡಿಮೆ ರಸಗೊಬ್ಬರ ಬಳಸುವ ದೇಶ ಎಂಬುದನ್ನು ಗಮನಿಸಬೇಕು.

| ದೇಶ | ಬಳಕೆ ಒಂದು ಹೆ. (2002ರಲ್ಲಿದ್ದಂತೆ) |
|---|---|
| ನೆದರ್‌ಲ್ಯಾಂಡ್ಸ್ | 367 |
| ಕೋರಿಯಾಗಣರಾಜ್ಯ | 410 |
| ಜಪಾನ್ | 291 |
| ಬ್ರಿಟನ್ | 313 |
| ಈಜಿಪ್ಟ್ | 438 |
| ಚೀನಾ | 278 |
| ಫ್ರಾನ್ಸ್ | 215 |
| ಜರ್ಮನಿ | 220 |
| ನ್ಯೂಜಿಲೆಂಡ್ | 569 |
| ಬಾಂಗ್ಲಾದೇಶ | 178 |
| ಪಾಕಿಸ್ತಾನ | 138 |
| ಅಮೇರಿಕಾ | 110 |
| ಭಾರತ | 100 |

ಅಗತ್ಯವಿರುವಷ್ಟು ರಸಗೊಬ್ಬರವನ್ನು ನಾವು ಉತ್ಪಾದಿಸಬಹುದು. ಆ ಸಾಧ್ಯತೆಗಳು ನಮ್ಮಲ್ಲಿವೆ.

ಜನಶಕ್ತಿ: ಅದು ಹೇಗೆ?

ಕೆ.ವಿ: ನಮ್ಮಲ್ಲಿ ದೊರೆಯುವ ಕಲ್ಲಿದ್ದಲ್ಲನ್ನು ಬಳಸಿ ಅಗತ್ಯವಿರುವಷ್ಟು ಗೊಬ್ಬರ ತಯಾರಿಸಬಹುದು. ನಾವೀಗ ಹೊರ ದೇಶಗಳಿಂದ ಆಮದು ಮಾಡಿಕೊಳ್ಳುವುದರ ಅರ್ಧ ಬೆಲೆಗೆ ಉತ್ಪಾದಿಸಬಹುದು. ಆದರೀಗ ಎರಡರಷ್ಟು ಬೆಲೆಯನ್ನು ಆಮದಿಗೆ ಕೊಡುತ್ತಿದ್ದೇವೆ. ಇಂದು ನಮ್ಮಲ್ಲಿನ ಕಲ್ಲಿದ್ದನ್ನು ಹೊರದೇಶಗಳಿಗೆ ರಫ್ತು ಮಾಡುತ್ತಿದ್ದೇವೆ. ಈ ನೀತಿಯನ್ನು ಬಿಜೆಪಿಯ ಎನ್.ಡಿ.ಎ. ಸರ್ಕಾರ ತಂದಿತು, ಅದನ್ನೇ ಕಾಂಗ್ರೆಸ್‌ನ ಯು.ಪಿ.ಎ. ಸರ್ಕಾರ ಮುಂದುವರಿಸುತ್ತಿದೆ.

ಜನಶಕ್ತಿ: ರಸಗೊಬ್ಬರಕ್ಕೆ ನೀಡುವ ಸಬ್ಸಿಡಿ ಪ್ರಶ್ನೆಯೂ ಒಂದು ವಿವಾದವಾಗಿಸಲಾಗುತ್ತಿದೆಯಲ್ಲಾ?

ಕೆ.ವಿ: ರಸಗೊಬ್ಬರಕ್ಕೆ ಸಬ್ಸಿಡಿ ಕೊಡುವುದು ಅತ್ಯಗತ್ಯವಾಗಿದೆ. 1970ರಲ್ಲಿ ಇದಕ್ಕೆ ಸುಮಾರು ಶೇ.7 ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಈಗ 'ಸುಧಾರಣೆ' ಹೆಸರಿನಲ್ಲಿ ಕಡಿತ ಮಾಡುತ್ತಿದ್ದಾರೆ. ಸರ್ಕಾರಗಳೇ ಒಪ್ಪಿದ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಇದು ಅನೇಕ ಸಹಕಾರಿ ಕೈಗಾರಿಕೆಗಳು ಮುಚ್ಚಲು ಕಾರಣವಾಗಿದೆ. ಹೀಗೆ ಸಬ್ಸಿಡಿ ಕಡಿತ ಮಾಡಬೇಕೆಂಬುದು ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಘಟನೆಗಳ ನಿರ್ದೇಶನ, ಹೀಗಾಗಿ ಸಬ್ಸಿಡಿ ಸದ್ಯ ಶೇ.4 ರಷ್ಟಕ್ಕೆ ಇಳಿದಿದೆ.

ಜನಶಕ್ತಿ : ರಾಸಾಯನಿಕ ಗೊಬ್ಬರಗಳನ್ನು ಬಳಸಿದ್ದರಿಂದಲೇ ಈ ಬಿಕ್ಕಟ್ಟು, ಈ ದುರ್ಗತಿ ಎಂದೆಲ್ಲಾ ಹೇಳಲಾಗುತ್ತಿದೆ! ಹೀಗಾಗಿ ಸಾವಯುವ, ಜೈವಿಕ ಗೊಬ್ಬರವೇ ಪರಿಹಾರ ಎನ್ನುತ್ತಿದ್ದಾರಲ್ಲ!

ಕೆ.ವಿ: ರಾಸಾಯನಿಕ ಗೊಬ್ಬರದ ಅತಿ ಬಳಕೆಯಿಂದ ಕೆಲವು ಅಡ್ಡ ಪರಿಣಾಮವಿದೆ ನಿಜ. ಅದಕ್ಕೆ ವೈಜ್ಞಾನಿಕ ಬಳಕೆ ದೃಷ್ಟಿಬೇಕು, ಹಾಗೆಯೇ ಜೈವಿಕ, ಸಾವಯುವದಂತಹ ಗೊಬ್ಬರದ ಬಳಕೆಯನ್ನು ಸ್ವಾಗತಿಸಬಹುದು. ಒಂದರ ಬಳಕೆಯನ್ನು ಇನ್ನೊಂದಕ್ಕೆ ವಿರುದ್ಧವಾಗಿ ಮಂಡಿಸುವುದಲ್ಲ.

ಆದರೆ ನೀರಾವರಿ ಅಭಿವೃದ್ಧಿಪಡಿಸದೇ ಆಹಾರ ಉತ್ಪಾದನೆ, ಕೃಷಿ ಪ್ರಗತಿ ಅದೆಲ್ಲಾ ಆಗದು. ಈಗಲೂ ನೀರಾವರಿ ಶೇ.30ರಷ್ಟು ಮಾತ್ರವಿದೆ. ಇದ್ದಕ್ಕಿದ್ದಂತೆ ಗೊಬ್ಬರ ಬಳಕೆ, ಬದಲಾವಣೆ ಮಾಡುವುದರಿಂದ ಆಹಾರ ಧಾನ್ಯಗಳ ಉತ್ಪಾದನೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. 1950ರಲ್ಲಿ 5 ಕೋಟಿ ಟನ್ ಆಹಾರ ಧಾನ್ಯ ಉತ್ಪಾದನೆಯಾಗುತ್ತಿತ್ತು. ಈಗ ಮೂರರಷ್ಟು ಅಂದರೆ 15 ಕೋಟಿ ಟನ್ ಉತ್ಪಾದನೆಯಾಗುತ್ತಿದೆ. ಈ ಬೆಳವಣಿಗೆ 'ಹಸಿರು ಕ್ರಾಂತಿ' ಸಂದರ್ಭದಲ್ಲಿ ಹೆಚ್ಚಿತು. ಮುಖ್ಯವಾಗಿ ಹೊಸ ಬೀಜ ತಳಿಗಳು, ರಾಸಾಯನಿಕ ಗೊಬ್ಬರ ಬಳಕೆಯಿಂದ. ಆಹಾರಧಾನ್ಯಗಳು ಹಿಂದಿಗಿಂತಲೂ ಇಂದು ಹೆಚ್ಚು ಬೇಕಿದೆ. ಕೃಷಿಯನ್ನು ವಿಸ್ತಾರ ಪ್ರದೇಶಕ್ಕೆ ಸಮರ್ಥವಾಗಿ ಕೊಂಡೊಯ್ಯಬೇಕು. ಇಲ್ಲದಿದ್ದರೆ ಆಹಾರ ಧಾನ್ಯಗಳ ಕೊರತೆ ತೀವ್ರವಾಗುತ್ತದೆ. ಹಾಗಾಗಿಯೇ ಸಮಗ್ರವಾಗಿಯೇ ಒಂದು ಸಕಾರಾತ್ಮಕ ಪರಿಹಾರ ರೂಪಿಸಬೇಕಾಗುತ್ತದೆ. ಸರ್ಕಾರಗಳ ನೀತಿಯಲ್ಲಿ ಬದಲಾವಣೆ ಬೇಕೇ ಬೇಕಾಗುತ್ತದೆ.

## ಕರ್ನಾಟಕದಲ್ಲಿ ಬಿಜೆಪಿ : ಆತಂಕದ ಸನ್ನಿವೇಶ ಆದರೆ ಬೆಳೆಯಲು ಹೊಸ ಅವಕಾಶ

ಜನಶಕ್ತಿ: ಕಾಂ: ಕೆ.ವಿ.ಯವರೇ, ಕರ್ನಾಟಕದಲ್ಲಿ ಮೊದಲಬಾರಿಗೆ ಬಿಜೆಪಿ ಸರ್ಕಾರ ಬಂದಿದೆ. ಅದರ ಆಳ್ವಿಕೆಯು ಹೇಗಿರಬಹುದು? ದೇಶದ ಇತರೆಡೆಯ ಅನುಭವವೇನು?

ಕೆ.ವಿ. : ಬಾಯಿಯಲ್ಲಿ ಅದೆಷ್ಟು ಭರವಸೆಗಳನ್ನು ನೀಡಿದರೂ ಬಿಜೆಪಿ ಅನುಸರಿಸುತ್ತಿರುವ ನೀತಿಗಳು ಜನ ವಿರೋಧಿಯಾಗಿಯೇ ಇವೆ. ಜನರ ಮೂಲಭೂತ ಪ್ರಶ್ನೆಗಳನ್ನು ಇತ್ಯರ್ಥಪಡಿಸದೇ ಹಾದಿ ತಪ್ಪಿಸುವ ಪ್ರಯತ್ನಗಳನ್ನು ಬಿಜೆಪಿ ಹಾಗೂ ಅದರ ಹಿಂದಿರುವ ಆ ಸಂಘ ಪರಿವಾರ ಮಾಡದೇ ಇರದು. ಹೀಗಾಗಿ ದೇಶದಲ್ಲಿ ಬಿಜೆಪಿ ಸರ್ಕಾರ ಇರುವ ಎಲ್ಲಾ ಕಡೆಗಳಲ್ಲಿಯೂ ಜನತೆಯ ಹೋರಾಟಗಳು ಸ್ಫೋಟಗೊಂಡು ವಿಸ್ತಾರವಾಗುತ್ತಿವೆ. ಉದಾಹರಣೆಗೆ :ರಾಜಸ್ಥಾನ- ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಅನೇಕ ಭರವಸೆಗಳನ್ನು ನೀಡಿತ್ತು. ಆದರೆ ಅದು ಹಿಂದಿನ ಸರ್ಕಾರದ ನೀತಿಗಳನ್ನೇ ಜಾರಿಗೊಳಿಸಿತು. ಇದರಿಂದಾಗಿ ವಿವಿಧ ಜನವಿಭಾಗಗಳು ಹೋರಾಟದ ಕಣಕ್ಕೆ ಇಳಿದ್ದವು.

ಜನಶಕ್ತಿ: ಪ್ರಗತಿಪರ ಶಕ್ತಿಗಳ ಪಾತ್ರವೇನು?

ಕೆ.ವಿ.: ದೇಶದಾದ್ಯಂತ ತರಲಾಗುತ್ತಿರುವ 'ಸುಧಾರಣೆ' ಹೆಸರಿನ ನೀತಿಗಳ ಜಾರಿಯ ವಿರುದ್ಧ ಜನ ಬೀದಿಗಿಳಿಯುತ್ತಿದ್ದಾರೆ. ಎಡಶಕ್ತಿಗಳು ಅಲ್ಲದೆ ಇತರೆ ಪ್ರಜಾಸತ್ತಾತ್ಮಕ ಸೆಕ್ಯುಲರ್ ಶಕ್ತಿಗಳು ಒಂದೆಡೆ ಕಲೆತು ಜನತೆಯ ಹೋರಾಟಗಳನ್ನು ಸಂಘಟಿಸುವುದು ಇಂದು ಅತ್ಯಗತ್ಯ. ಆಯ್ದ ಪ್ರಮುಖ ವಿಷಯಾಧಾರದಲ್ಲಿ ಆಯ್ದ ಜನ ವಿಭಾಗಗಳ ನಡುವೆ ನಿರ್ದಿಷ್ಟತೆಯಿಂದ ಕಾರ್ಯಕ್ಕೆ ತೊಡಗಬೇಕು. ಇದರಿಂದ ಮಾತ್ರವೇ ನಿಜವಾದ ಬದಲಾವಣೆ ತರಲು ಸಾಧ್ಯ. ಇಂತಹ ಪ್ರಬಲ ಹೋರಾಟಗಳು ವಿಸ್ತರಿಸುತ್ತಾ, ಆಳಗೊಳ್ಳುತ್ತಾ ಹೋಗಬೇಕು. ಅಂದಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಬದಲಿಸಬಹುದು.

ಜನಶಕ್ತಿ: ಕರ್ನಾಟಕದಲ್ಲಿ ಬಿಜೆಪಿ ಅಧಿಕಾರ ದಕ್ಷಿಣ ಭಾರತದಲ್ಲಿ ಒಟ್ಟಾರೆ ಏನು ಪರಿಣಾಮ ಬೀರಬಹುದು ಅನ್ನಿಸುತ್ತೇ?

ಕೆ.ವಿ: ನನಗನ್ನಿಸಿದಂತೆ ಅಂತಹ ಭಾರೀ ಪ್ರಭಾವ ಆಗಲಿಕ್ಕಿಲ್ಲ. ತಮಿಳುನಾಡು, ಆಂಧ್ರ, ಕೇರಳ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು, ಗೆಲ್ಲಲು ಸಾಕಷ್ಟು ಯತ್ನಿಸಿದೆ. ಹಿಂದೆಲ್ಲಾ ಕೇಂದ್ರ ಸರ್ಕಾರದಲ್ಲಿದ್ದು ಅಧಿಕಾರದ ಬಲವನ್ನು ಬಳಸಿದೆ. ಆದರೆ ಅದಕ್ಕೆ ಜನರು ಅಷ್ಟು ಉತ್ತೇಜಕ ಪ್ರತಿಕ್ರಿಯೆ ನೀಡಲಿಲ್ಲ. ಮೇಲಾಗಿ ಈ ಮೂರು ರಾಜ್ಯಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ಕರ್ನಾಟಕಕ್ಕಿಂತಲೂ ಬಲಯುತವಾಗಿದೆ.

ಎಡ ಚಳುವಳಿ ದುರ್ಬಲ ಇರುವಲ್ಲಿಯೇ ಈ ಸ್ಥಿತಿಯನ್ನು ಬಿಜೆಪಿ ಬಳಸುತ್ತದೆ. ಜೆಡಿ(ಎಸ್)ನ ಸಂದರ್ಭಸಾಧಕ ನಿರ್ಧಾರದಿಂದ, ಕಾಂಗ್ರೆಸ್‌ನ ನೀತಿಗಳು ಹಾಗೂ ಪಕ್ಷದ ಒಳಗಿನ ಕಿತ್ತಾಟವು ಬಿಜೆಪಿ ಅಧಿಕಾರಕ್ಕೆ ಬರುವ ಮಾರ್ಗವನ್ನು ಸುಗಮಗೊಳಿಸಿದೆ. ಆದರೆ ಕಲ್ಲಿನ ಚಿತ್ರಣ ಬಹಳ ಬೇಗ ಬಯಲಾಗುವುದು. ಇನ್ನೊಂದು ಅಂಶ ಜಾತಿ ವಿಭಜನೆ, ಕರ್ನಾಟಕದ ಸಂದರ್ಭದಲ್ಲಿ ಈ ಅಂಶವನ್ನು ಬಿಜೆಪಿ ಬಹಳ ಅನುಕೂಲಕರವಾಗಿ ಬಳಸಿತು: ಇಂತಹ ಸಾಧ್ಯತೆಗಳು ಬೇರೆ ರಾಜ್ಯಗಳಲ್ಲಿ ಇಲ್ಲ. ಆದರೆ ಬಿಜೆಪಿ ಆಡಳಿತ, ಅದರ ಜನ ವಿರೋಧಿ ಅಂಶಗಳು ತನ್ನಿಂದ ತಾನೇ ಅನಾವರಣ ಗೊಂಡು ಸರ್ಕಾರ ಬದಲಾಗಿ ಬಿಡುತ್ತದೆ ಎಂದು ಭಾವಿಸಬೇಕಿಲ್ಲ. ಈಗಲೂ ಬಿಜೆಪಿಯು ಅಧಿಕಾರದಲ್ಲಿ ಉಳಿಯಲು ರಾಜಕೀಯವಾಗಿ ಹಲವು ತಂತ್ರಗಳನ್ನು ಮಾಡಬಹುದು. ಅದರ ಹಿಂದೆ ಫ್ಯಾಶಿಸ್ಟ್ ಮನೋಭಾವದ ಆರ್‌ಎಸ್ ಎಸ್ ಕೆಲಸ ನಿರ್ವಹಿಸುತ್ತಿದೆ ಎಂಬುದನ್ನು ಮರೆಯಲಾಗದು. ನಿಜ, ಬಿಜೆಪಿ ಆಡಳಿತ ಜನವಿರೋಧಿ, ಐಕ್ಯತೆಗೆ ಅಪಾಯಕಾರಿ. ಆದರೆ ಇನ್ನೊಂದೆಡೆ ಎಡ-ಪ್ರಜಾಸತ್ತಾತ್ಮಕ ಚಳುವಳಿ, ಬೆಳೆಯಲು ಹೊಸ ಅವಕಾಶ. ಸರ್ಕಾರದ ನೀತಿಗಳನ್ನು ಬಯಲು ಮಾಡಿ ಒದಗಿಬರುವ ಎಲ್ಲಾ ಅವಕಾಶಗಳನ್ನು ಸಮರ್ಥವಾಗಿ ಬಳಸಿ, ಮಧ್ಯ ಪ್ರವೇಶಿಸಿ ಮುನ್ನಡೆಯಬೇಕು. ಆದ್ದರಿಂದ ಇದು ಬೆಳೆಯಲು ಅತ್ಯುತ್ತಮ ಅವಕಾಶವೂ ಹೌದು.

## ಜಗದಗಲ

ಶರತ್‌ಚಂದ್ರ

# ಸೂಪರ್‌ಲಾಭಕ್ಕೆ ಗೊಬ್ಬರ ಹಾಕಿ, ಹಸಿವು ಬಿತ್ತುವ ಬೃಹತ್ ಕೃಷಿ ಕಂಪನಿಗಳು

ಜಗತ್ತಿನ ಎಲ್ಲೆಡೆ ಆಹಾರಧಾನ್ಯಗಳ ಬೆಲೆ ಗಗನಕ್ಕೇರಿದ್ದು ಹಸಿವು ತಾಂಡವವಾಡುತ್ತಿದೆ. ಇದಕ್ಕೆ ಕಾರಣ ಆಹಾರಧಾನ್ಯಗಳ ಅಭಾವವೂ ಅಲ್ಲ, ಉತ್ಪಾದನಾ ವೆಚ್ಚ ಏರುತ್ತಿರುವುದೂ ಅಲ್ಲ, ಕೃಷಿ ಕಂಪನಿಗಳ ತಣಿಸಲಾಗದ ಸೂಪರ್‌ಲಾಭದ ಹಸಿವು ಕಾರಣ ಎಂಬುದು ಕೆಳಗಿನ (ಈ ವರ್ಷದ ಮೊದಲ ಮೂರು ತಿಂಗಳ ಲಾಭ ಮತ್ತು ಲಾಭ ಏರಿಕೆಯ) ಅಂಕಿ ಸಂಖ್ಯೆಗಳಿಂದ ಸ್ಪಷ್ಟವಾಗಿದೆ:

ಆಹಾರಧಾನ್ಯಗಳ ಜಾಗತಿಕ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳು

ಎ.ಡಿ.ಎಂ. : ಕಳೆದ ವರ್ಷಕ್ಕಿಂತ ಲಾಭ ಶೇ.55 ರಷ್ಟು ಏರಿ 115 ಕೋಟಿ ಡಾಲರುಗಳು ತಲುಪಿದೆ.

ಕಾರ್ಗಿಲ್ : ಕಳೆದ ವರ್ಷಕ್ಕಿಂತ ಲಾಭ ಶೇ.86 ರಷ್ಟು ಏರಿ 103 ಕೋಟಿ ಡಾಲರುಗಳು ತಲುಪಿದೆ.

ಬುಂಜ್ : ಕಳೆದ ವರ್ಷಕ್ಕಿಂತ ಲಾಭ ಶೇ.189 ರಷ್ಟು ಏರಿ 87 ಕೋಟಿ ಡಾಲರುಗಳು ತಲುಪಿದೆ.

ಬೀಜಗಳು ಮತ್ತು ಕ್ರಿಮಿನಾಶಕಗಳ ಜಾಗತಿಕ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳು

ಮೊನ್ಸಾಂಟೊ : ಕಳೆದ ವರ್ಷಕ್ಕಿಂತ ಲಾಭ ಶೇ.54 ರಷ್ಟು ಏರಿ 223 ಕೋಟಿ ಡಾಲರುಗಳು ತಲುಪಿತು.

ಡೂಪೊಂಟ್ : ಕಳೆದ ವರ್ಷಕ್ಕಿಂತ ಲಾಭ ಶೇ.21 ರಷ್ಟು ಏರಿ 79 ಕೋಟಿ ಡಾಲರುಗಳು ತಲುಪಿದೆ.

ಗೊಬ್ಬರಗಳ ಜಾಗತಿಕ ವ್ಯಾಪಾರದಲ್ಲಿ ತೊಡಗಿರುವ ಕಂಪನಿಗಳು

ಪೊಟಾಶ್ : ಕಳೆದ ವರ್ಷಕ್ಕಿಂತ ಲಾಭ ಶೇ.186 ರಷ್ಟು ಏರಿ 6.6 ಕೋಟಿ ಡಾಲರುಗಳು

ಮೊಸಾಯಿಕ್ : ಕಳೆದ ವರ್ಷಕ್ಕಿಂತ ಲಾಭ ಶೇ.1200 ರಷ್ಟು ಏರಿ 52 ಕೋಟಿ ಡಾಲರುಗಳು



ಮೇಲೆ ಕಾಣಿಸಿರುವ ಕೆಲವು ಕಂಪನಿಗಳು ಕೃಷಿ ಉತ್ಪನ್ನದ ಮತ್ತು ಉತ್ಪಾದನೆಗೆ ಬೇಕಾದ ಸರಕುಗಳ (ಬೀಜ, ಗೊಬ್ಬರ ಇತ್ಯಾದಿ) ವಹಿವಾಟಿನಲ್ಲಿ ಪೂರ್ಣ ಅಥವಾ ಹೆಚ್ಚು ಕಡಿಮೆ ಪೂರ್ಣ ಏಕಸ್ವಾಮ್ಯ ಸಾಧಿಸಿರುವ ಕಂಪನಿಗಳು ಇವು. ಕೇವಲ ಆರು ಕಂಪನಿಗಳು ಶೇ.85 ರಷ್ಟು ಆಹಾರಧಾನ್ಯಗಳ ಜಾಗತಿಕ ವ್ಯಾಪಾರವನ್ನು ನಿಯಂತ್ರಿಸುತ್ತವೆ. ಮೂರು ಕಂಪನಿಗಳು ಶೇ.83 ರಷ್ಟು ಕೊಕೊ ಜಾಗತಿಕ ವ್ಯಾಪಾರವನ್ನು ನಿಯಂತ್ರಿಸುತ್ತವೆ. ಮೂರು ಕಂಪನಿಗಳು ಶೇ.80 ರಷ್ಟು ಬಾಳೆಹಣ್ಣಿನ ಜಾಗತಿಕ ವ್ಯಾಪಾರವನ್ನು ನಿಯಂತ್ರಿಸುತ್ತವೆ.

ಎ.ಡಿ.ಎಂ., ಕಾರ್ಗಿಲ್, ಬುಂಜ್ - ಈ ಮೂರು ಕಂಪನಿಗಳು ಆಹಾರಧಾನ್ಯಗಳ ಶೇ.85 ನ್ನು ಹೊಂದಿದ್ದು, ಅವು ಈ ಆಹಾರಧಾನ್ಯಗಳನ್ನು ಜನರ ಆಹಾರಕ್ಕೆ ಕೊಡಬೇಕೆ? ಎಷ್ಟು ಪ್ರಾಣಿಗಳ ಆಹಾರ ಅಥವಾ ಇಂಧನ ಅಥವಾ ಸಿಹಿಕಾರಕ ಮುಂತಾದ ಇತರ ಕ್ಷೇತ್ರಗಳಿಗೆ ಹೋಗಬೇಕು ಎಂತ ನಿರ್ಧಾರ ಮಾಡುತ್ತವೆ. ಸ್ವಾಭಾವಿಕವಾಗಿಯೇ ಯಾವುದೇ ನಿಯಂತ್ರಣವಿಲ್ಲದಿದ್ದರೆ, ಎಲ್ಲಿ ಸೂಪರ್ ಲಾಭ ಬರುತ್ತದೋ ಅಲ್ಲಿ ಅದನ್ನು ಮಾರುತ್ತವೆ. ಯಾವುದೇ ಕ್ಷೇತ್ರದಲ್ಲಿ ಅಭಾವ ಸೃಷ್ಟಿಸಿ ಸೂಪರ್ ಲಾಭ ಬರುವುದಾದರೆ ಅದನ್ನೂ ಮಾಡುತ್ತವೆ. ಅದನ್ನೇ ಅವು ಮಾಡಿರುವುದು ಕೂಡಾ.

ಈಗ ಕಾಣುತ್ತಿರುವ ಆಹಾರಧಾನ್ಯಗಳಬೆಲೆ ಮತ್ತು ಹಸಿವಿನ ವಿಪರೀತ ಏರಿಕೆಗೆ ಈ ದೈತ್ಯ ಕೃಷಿ ಕಾರ್ಪೋರೇಷನ್ ಗಳ ಸೂಪರ್ ಲಾಭಕ್ಕೆ ಗೊಬ್ಬರ ಹಾಕಿ, ಹಸಿವು ಬಿತ್ತುವ ನೀತಿಗಳೇ ಕಾರಣ.

# ಇಸ್ರೇಲಿ - ಹಮಾಸ್ ಕದನ ವಿರಾಮ

ಇಸ್ರೇಲಿ ಸರ್ಕಾರ ಮತ್ತು ಹಾಮಾಸ್ ನಡುವೆ ಈಜಿಪ್ಟ್ ಮಧ್ಯಸ್ತಿಕೆಯಿಂದ ಕದನ ವಿರಾಮ ಏರ್ಪಟ್ಟಿದೆ. ಸ್ವತಂತ್ರ ಪ್ಯಾಲೆಸ್ಟೈನ್ ನ ಗಾಜಾ ಪಟ್ಟಿ ಪ್ರದೇಶದ ಪೂರ್ಣ ನಿಯಂತ್ರಣದಲ್ಲಿರುವ ಹಾಮಾಸ್ ಮೂಲತಃ ಇಸ್ಲಾಮಿಕ್ ಮೂಲಭೂತವಾದಿ ಚಳುವಳಿ. ಕಳೆದ ಪ್ಯಾಲೆಸ್ಟೈನ್ ಚುನಾವಣೆಯಲ್ಲಿ ಬಹುಮತ ಪಡೆಯಿತು. ಆದರೆ ಇಸ್ರೇಲ್ ಮತ್ತು ಅಮೆರಿಕ ಸರ್ಕಾರಗಳು ಹಾಮಾಸ್ ಸರ್ಕಾರಕ್ಕೆ ಇನ್ನಿಲ್ಲದ ಅಡೆತಡೆಗಳನ್ನು ಒಡ್ಡಿದರು. ಆರ್ಥಿಕ ದಿಗ್ಬಂಧನ ಹೊರಿಸಿ, ಎಲ್ಲಾ ನೆರವು ನಿಲ್ಲಿಸಿದರು. ಪಿ.ಎಲ್.ಒ. ಮತ್ತು ಹಾಮಾಸ್ ನಡುವೆ ಆಂತರಿಕ ಯುದ್ಧ ಉಂಟು ಮಾಡಿದರು. ಆದರೆ ಹಾಮಾಸ್ ಇವೆಲ್ಲದರಿಂದ ಜನಬೆಂಬಲ ಕಳೆದುಕೊಳ್ಳುವ ಬದಲು ಜನಬೆಂಬಲ ಜಾಸ್ತಿಯಾಯಿತು.

ಗಾಜಾ ಪಟ್ಟಿ ಪ್ರದೇಶದಲ್ಲಿ ಹಾಮಾಸ್ ಪೂರ್ಣ ನಿಯಂತ್ರಣದಲ್ಲಿ ಇದೆ. ಇಸ್ರೇಲಿ ಸರ್ಕಾರದ ವಿರುದ್ಧ ಪ್ರತಿರೋಧ ಸಂಘಟಿಸುವುದರಲ್ಲಿ ಯಶಸ್ವಿಯಾಗಿದೆ. ಗಾಜಾ ಪಟ್ಟಿ ಪ್ರದೇಶ ದಿಗ್ಬಂಧನಕ್ಕೆ ಒಳಗಾಗಿ ಅಲ್ಲಿನ ಜನತೆ ಯಾರೂ ಕಂಡರಿಯದ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಜನ ಜೀವನಾವಶ್ಯಕ ವಸ್ತುಗಳಿಗೆ ಈಜಿಪ್ಟ್ ಗಡಿ (ಹಾಮಾಸ್ ಬೆಂಬಲದಿಂದ) ಭದ್ರತಾ ಗೋಡೆ ಒಡೆದು ಈಜಿಪ್ಟ್ ಗೆ ಹೋಗುವ ಪರಿಸ್ಥಿತಿ ಇದೆ. ಈ ವರೆಗೆ ಇಸ್ರೇಲಿ ಸರ್ಕಾರ ಮತ್ತು ಹಾಮಾಸ್ ಪರಸ್ಪರ ಮಾನ್ಯ ಮಾಡದಿದ್ದರೂ, ಈ ಕದನ ವಿರಾಮದ ಮೂಲಕ ಮಾನ್ಯತೆ ಕೊಟ್ಟಂತಾಗಿದೆ. ಇದು ಶಾಶ್ವತ ತಾಳಬಹುದಾದ ಶಾಂತಿಗೆ ಎಡೆಮಾಡಿಕೊಡ ಬಹುದೇ ಎಂಬುದು ಇನ್ನೂ ಕಾದು ನೋಡಬೇಕಾದ ಸಂಗತಿ.

## ಜಿಂಬಾಬ್ವೆ ಬಿಕ್ಕಟ್ಟು

ಜಿಂಬಾಬ್ವೆಯ ರಾಜಕೀಯ ಬಿಕ್ಕಟ್ಟು ಹಾಗೇ ಮುಂದುವರೆಯುತ್ತಿದೆ. ಎರಡನೇ ಸುತ್ತಿನ ಅಧ್ಯಕ್ಷೀಯ ಚುನಾವಣೆಯಲ್ಲಿ ವಿರೋಧ ಪಕ್ಷ ಎಂ.ಡಿ.ಸಿ. ಅಭ್ಯರ್ಥಿ ಮೋರ್ಗನ್ ತ್ಸಾವಂಗಿರೈ ಭಾಗವಹಿಸುತ್ತಿಲ್ಲ. ತೀವ್ರ ಹಿಂಸಾಚಾರ ನಡೆದು, ಚುನಾವಣಾ ಅಕ್ರಮ ಆಪಾದನೆ ಮೇಲೆ ತಮ್ಮ ಪಕ್ಷದ ಹಲವು ಕಾರ್ಯಕರ್ತರ ಬಂಧನ ಆಗಿದ್ದು, ನ್ಯಾಯಯುತ ಚುನಾವಣೆ ಸಾಧ್ಯವಿಲ್ಲ, ತಮ್ಮ ಪಕ್ಷದ ಕಾರ್ಯಕರ್ತರ ಬಿಡುಗಡೆ ಆಗಿ ಅಂತರ್ರಾಷ್ಟ್ರೀಯ ಮಧ್ಯಸ್ತಿಕೆಯಲ್ಲಿ ಶಾಂತಿ ಮಾತುಕತೆ ನಡೆಯಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ.

ಮೋರ್ಗನ್ ಸೋಲುವ ಭಯದಿಂದ ಎರಡನೇ ಸುತ್ತಿನ ಚುನಾವಣೆಯಲ್ಲಿ ಭಾಗವಹಿಸುತ್ತಿಲ್ಲ, ಮೋರ್ಗನ್ ಎರಡನೇ ಸುತ್ತಿನ ಚುನಾವಣೆಯಲ್ಲಿ ಭಾಗವಹಿಸಲಿ. ನಂತರ ಏನಿದ್ದರೂ ಶಾಂತಿ ಮಾತುಕತೆ ಎಂದು ಜಿಂಬಾಬ್ವೆಯ ಅಧ್ಯಕ್ಷ ಮುಗಾಬೆ ತಮ್ಮ ನಿಲುವಿಗೆ ಅಂಟಿಕೊಂಡಿದ್ದಾರೆ. ಮೋರ್ಗನ್ ಬಹಿಷ್ಕಾರದಿಂದ ಮುಗಾಬೆ ಮನಃ ಸಂವೈಧಾನಿಕವಾಗಿ ಅಧ್ಯಕ್ಷರಾಗಿ ಚುನಾಯಿತರಾಗಲಿದ್ದು, ಬಿಕ್ಕಟ್ಟು ಮುಂದುವರೆಯಲಿದೆ.

ಮೋರ್ಗನ್ ಜಿಂಬಾಬ್ವೆಯಲ್ಲಿ ಇರುವ ಡಚ್ ರಾಯಭಾರ ಕಚೇರಿಯಲ್ಲಿ ಶರಣು ಪಡೆದಿದ್ದಾರೆ. ದಕ್ಷಿಣ ಆಫ್ರಿಕಾದ 14 ದೇಶಗಳ ವೇದಿಕೆಯ ನಾಯಕರು ಮಧ್ಯಸ್ತಿಕೆಗೆ ಪ್ರಯತ್ನ ಮುಂದುವರೆಸಿದ್ದಾರೆ. ಆದರೆ ಈ ವರೆಗೆ ಎರಡೂ ಪಕ್ಷಗಳಿಗೆ ಅಂಗಿಕಾರಾರ್ಹವಾದ ಪರಿಹಾರ ಸಿಕ್ಕಿಲ್ಲ.

## ಉ.ಕೊರಿಯಾ 'ಭಯೋತ್ಪಾದಕ' ಪಟ್ಟಿಯಿಂದ ಮುಕ್ತ ?

ಉತ್ತರ ಕೊರಿಯಾ ಜತೆ ಚೀನಾ ನಾಯಕತ್ವದ ಆರು-ದೇಶಗಳ ಗುಂಪಿನ ಜತೆ ಅಣು ಕಾರ್ಯಕ್ರಮದ ಬಗ್ಗೆ ಮಾತುಕತೆ ಮತ್ತು ಕ್ರಮಗಳಲ್ಲಿ ಪ್ರಗತಿ ಆಗಿದೆ. ಆ ಪರಿಣಾಮವಾಗಿ ಉತ್ತರ ಕೊರಿಯಾವನ್ನು ಅಮೆರಿಕನ್ ಸರ್ಕಾರ ತನ್ನ 'ಭಯೋತ್ಪಾದಕ ಪಟ್ಟಿ'ಯಿಂದ ತೆಗೆದು ಹಾಕುವ ಸಂಭವ ಇದೆ. ಇದರ ಜತೆ ಕೊರಿಯಾ ಪರ್ಯಾಯ ದ್ವೀಪವನ್ನು ಅಣ್ವಸ್ತ್ರ-ರಹಿತಗೊಳಿಸುವತ್ತ ಮೊದಲ ಹೆಜ್ಜೆ ಆಗಲಿದೆ.

ಇಪ್ಪತ್ತು ವರ್ಷಗಳ ಹಿಂದೆ ಉತ್ತರ ಕೊರಿಯಾವನ್ನು ಅಮೆರಿಕನ್ ಸರ್ಕಾರ ತನ್ನ 'ಭಯೋತ್ಪಾದಕ ಪಟ್ಟಿ' ಯಲ್ಲಿ ಸೇರಿಸಿತ್ತು. ಅಣ್ವಸ್ತ್ರ ತಯಾರಿಸಿ ಅಮೆರಿಕದ ಭದ್ರತೆಗೆ 'ಬೆದರಿಕೆ' ಹಾಕುವ ಪ್ರಯತ್ನದ ಆಪಾದನೆಯನ್ನು ಸತತವಾಗಿ ಮಾಡಿ ಅಧ್ಯಕ್ಷ ಬುಶ್ ಉತ್ತರ ಕೊರಿಯಾವನ್ನು 'ಕೇಡಿನ ಸಾಮ್ರಾಜ್ಯ'ಕ್ಕೆ ಸೇರಿಸಿ ಬಿಟ್ಟಿದ್ದರು.

ಕಳೆದ ಕೆಲವು ವರ್ಷಗಳಿಂದ ಹಲವು ಷರತ್ತುಗಳ ಮೇಲೆ ಅಣು ಕಾರ್ಯಕ್ರಮವನ್ನು ಬಿಟ್ಟು ಕೊಡುವ ಮಾತುಕತೆ ನಡೆದಿತ್ತು. ಹಲವು ಸಂದರ್ಭಗಳಲ್ಲಿ ಅಮೆರಿಕ ತನ್ನ ಮಾತು ಮುರಿದಾಗ, ಉತ್ತರ ಕೊರಿಯಾದ ಸಾರ್ವಭೌಮತ್ವ ಎತ್ತಿ ಹಿಡಿದು ಉತ್ತರ ಕೊರಿಯಾ ಅಮೆರಿಕಕ್ಕೆ ಸವಾಲು ಹಾಕಿತ್ತು. ಹೋರಾಟ-ಮಾತುಕತೆ-ಒಪ್ಪಂದಗಳ ಜಾಣ ಬಳಕೆಯಿಂದ ಉತ್ತರ ಕೊರಿಯಾ ಈ ಬಿಕ್ಕಟ್ಟನ್ನು ಪರಿಹರಿಸಿದೆ ಎನ್ನಬಹುದು.

## ಪಾಕಿಸ್ತಾನದ ಐ.ಎಸ್.ಐ.ನಿಂದ ಕರ್ಜಾಯಿ ಕೊಲೆ ಪಿತೂರಿ ?

ಇತ್ತೀಚೆಗೆ ಅಫ್ಘಾನಿಸ್ತಾನದ ಅಧ್ಯಕ್ಷ ಕರ್ಜಾಯಿ ಕಾಬೂಲ್ ನಲ್ಲಿ ನಡೆದ ಪ್ರಾಣಾಂತಿಕ ಹಲ್ಲೆ ಪ್ರಯತ್ನ, ಪಾಕಿಸ್ತಾನದ ಮಿಲಿಟರಿ ಗೂಢಚಾರ ಸಂಸ್ಥೆ ಐ.ಎಸ್.ಐ. ಯೋಜಿಸಿದ್ದು ಎಂಬ ಆಪಾದನೆ ಕೇಳಿ ಬಂದಿದೆ. ಅಫ್ಘಾನಿಸ್ತಾನದ ಗೂಢಚಾರ ಸಂಸ್ಥೆಯೇ ಈ ಆಪಾದನೆ ಮಾಡಿದೆ. ಹಲ್ಲೆಯ ನಂತರ ನಡೆಸಿದ ತನಿಖೆ, ಹಲ್ಲೆಗೆ ಸಹಾಯ ಮಾಡಿದ ಬಂಧಿತರ ವಿಚಾರಣೆ ಮತ್ತು ಅವರ ಫೋನ್ ಸಂಭಾಷಣೆಯ ವಿವರಗಳಿಂದ ಇದು ವ್ಯಕ್ತವಾಗುತ್ತದೆ ಎಂದು ವಕ್ತಾರರು ಹೇಳಿದ್ದಾರೆ. ಇದು ಅಂದಾಜು ಅಥವಾ ಊಹೆ ಅಲ್ಲ, ಖಚಿತ ಮಾಹಿತಿ ಎಂದು ಅವರು ಹೇಳಿದ್ದಾರೆ. ಎರಡು ದೇಶಗಳ ನಡುವೆ ತಿಕ್ಕಾಟ ಉಲ್ಬಣಗೊಳ್ಳುತ್ತಿದೆ. ಪಾಕಿಸ್ತಾನದ ಗಡಿಯೊಳಗಿಂದ ಬರುವ ಇಸ್ಲಾಮಿಕ್ ಮೂಲಭೂತವಾದಿ ಭಯೋತ್ಪಾದಕರು ಅಫ್ಘಾನಿಸ್ತಾನದ ಮೇಲೆ ದಾಳಿ ನಡೆಸಿದ್ದಾರೆ. ಅವರನ್ನು ಬೆನ್ನಟ್ಟಿ ಅಗತ್ಯ ಬಿದ್ದರೆ ಪಾಕಿಸ್ತಾನದ ಒಳಗೆ ತಮ್ಮ ಸೈನ್ಯ ಕಳಿಸುವುದಾಗಿ ಕರ್ಜಾಯಿ ಹೇಳಿದ್ದಾರೆ.

## ಚುಚ್ಚುಮದ್ದು

### 'ಸತ್ತರೆ ಬೆಲೆ?!'

■ "ಬದುಕಿದ್ದಾಗ ಬೆಲೆಯಿಲ್ಲ, ಸತ್ತರಷ್ಟೇ ಲಾಭ" ಎಂಬ ಮಾನಸಿಕ ವ್ಯಾಧಿ ರೈತರನ್ನು ವ್ಯಾಪಿಸಿದೆ. ಇದಕ್ಕೆ ಮುಖ್ಯ ಕಾರಣ. ರೈತರರಲ್ಲಿ ಆತ್ಮವಿಶ್ವಾಸದ ಕೊರತೆ"

- ಡಾ. ವೀರೇಂದ್ರ ಹೆಗ್ಗಡೆ
ಧರ್ಮಸ್ಥಳದ ಧರ್ಮಾಧಿಕಾರಿ

▶ ಎಂ.ಎಸ್.ಕೃಷ್ಣ ಅವರು ಡಾ. ವೀರೇಶ್ ಸಮಿತಿ ಮೂಲಕ 'ರೈತರು ಪರಿಹಾರಕ್ಕೋಸ್ಕರ ಆತ್ಮಹತ್ಯೆ ಮಾಡ್ಕೋತಾ ಇದ್ದಾರೆ' ಅಂತ ಹೇಳಿಸಿದ್ದರು. ಯಡಿಯೂರಪ್ಪನವರು ತಮ್ಮ ಮೂಲಕ ಹೇಳಿಸ್ತಾ ಇದ್ದಾರೆ ಅಷ್ಟೇ ಅಲ್ವಾ"

★

### ಥೋರಿಯಂ ತಂತ್ರಜ್ಞಾನ ಬೆಳೆಸುವವರೆಗೆ

■ "ನಮ್ಮ ದೇಶದಲ್ಲಿ ಜಗತ್ತಿನಲ್ಲೇ ಎರಡನೇ ಅತಿದೊಡ್ಡ ಥೋರಿಯಂ ನಿಕ್ಷೇಪ ಇದೆ. ಇಂತಹ ಥೋರಿಯಂ ಆಧಾರಿತವಾದ ಅಣು ವಿದ್ಯುತ್ ಉತ್ಪಾದನೆ ನಮ್ಮ ವಿಜ್ಞಾನಿಗಳಿಂದ ಸಾಧ್ಯವಾಗುವವರೆಗೆ ನಮಗೆ ಯುರೇನಿಯಂ ಅಗತ್ಯವಾಗುತ್ತದೆ. ಅಮೇರಿಕಾದೊಂದಿಗಿನ ಒಪ್ಪಂದದಿಂದ ನಮಗೆ ಯುರೇನಿಯಂ ದೊರೆಯುವುದರಿಂದ ಅಣು ಒಪ್ಪಂದ ಅಗತ್ಯವಾಗಿದೆ.

ಡಾ. ಅಬ್ದುಲ್ ಕಲಾಂ
ಮಾಜಿ ರಾಷ್ಟ್ರಪತಿಗಳು

▶ ಅಮೇರಿಕಾದೊಂದಿಗೆ ಒಪ್ಪಂದ ಮಾಡಿಕೊಂಡ ಮೇಲೆ ನಮ್ಮ ವಿಜ್ಞಾನಿಗಳು ಥೋರಿಯಂ ಬಳಕೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಅವರು ಬಿಡಬೇಕಲ್ಲ ಕಲಾಂ ಅವರೇ?

★

# ಅಂತಃಕರಣೆಯ ಬರಗಾಲ

ಪುಟ 11 ರಿಂದ

ಬಳಸಿಕೊಂಡು ಅವರ ನೈತಿಕತೆ, ಚಾರಿತ್ರ್ಯವನ್ನು ಹರಣ ಮಾಡಲಾಗುತ್ತದೆ. ಭೂಜ್ರ್ವಾ ಪಕ್ಷಗಳ ಚುನಾವಣಾ ತಂತ್ರಗಳು ಜನತೆಯ ಬದುಕುವ ಮಾರ್ಗ ಮತ್ತು ಶಕ್ತಿ ಎರಡನ್ನು ಲೂಟಿ ಮಾಡಿವೆ. ಹೌದು, ಹಲವು ರೈತರು ಕೃಷಿ ಕೂಲಿ ಕಾರ್ಮಿಕರು ಇಂದು ಚಟಗಳ ದಾಸಾನುದಾಸರಾಗಿದ್ದಾರೆ. ಅವರನ್ನು ಈ ಸ್ಥಿತಿಗೆ ತಂದು ನಿಲ್ಲಿಸಿರುವ ನಾಯಕಮಣಿಗಳು ಮಾತ್ರ ಅಸೆಂಬ್ಲಿಯಲ್ಲಿ ಕುಳಿತು ಅದೇ ರೈತರ ಸಾವನ್ನು ನಕಲಿ ಎಂದು ಷರಾ ಬರೆಯುತ್ತಿದ್ದಾರೆ. ಹಾಗೇ ನೋಡಿದರೆ ಇಂದು ಕುಡಿತ, ಜೂಜು, ದುಂದುಗಾರಿಕೆಗಳಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಎಲ್ಲ ವರ್ಗ, ವಯೋಮಾನದವರ ಮಧ್ಯೆ ಸಾಮಾನ್ಯ ಲಕ್ಷಣಗಳಾಗಿವೆ. ಆದರೆ ಅವುಗಳ ಪರಿಣಾಮ ಮಾತ್ರ ಸಾಮ್ರಾಜ್ಯಶಾಹಿ ನಿರ್ಮಿಸಿದ ಬಡವ-ಬಲ್ಲಿದರ ನಡುವಿನ ಅಪಾಯ ಕಂದರದ ಕಾರಣವಾಗಿ ವ್ಯತಿರಿಕ್ತವಾಗಿದೆ. ಕುಡಿಸಿ ಹಣ ಬಾಚಿ ಕೊಳ್ಳುವವರದೇ ಒಂದು ವರ್ಗವಾದರೆ, ಕುಡಿದು ಸಂಪೂರ್ಣ ದಿವಾಳಿಯಾಗಿ ಸಾವನ ಪ್ಪುತ್ತಿರುವವರದು ಇನ್ನೊಂದು ವರ್ಗವಾಗಿದೆ.

**ಯಾಕೆ ಸಾವನ್ನ ಆಯ್ಕೆ ಮಾಡುವರು!**

ಸಂಪೂರ್ಣ ಒಕ್ಕಲುತನದ ಮೇಲೆ ಅವಲಂಬಿತವಾದ ರೈತ ಕುಟುಂಬಗಳಿಗೆ ಕುಡಿತ, ಜೂಜು, ಸಾಮಾಜಿಕ ಹುಸಿ ಪ್ರತಿಷ್ಠೆ, ಅಕಾರಣ ದುಂದು ವೆಚ್ಚ. ಇವೆಲ್ಲ ಶಾಪವಾಗಿ ಪರಿಣಮಿಸಿವೆ. ನಾಲ್ಕು ಎಕರೆಯಿಂದ ಹಿಡಿದು ನಲವತ್ತು, ಐವತ್ತು ಎಕರೆ ಹೊಂದಿರುವ ಶುದ್ದಾಂಗ ರೈತರೆಲ್ಲ ಇಂದು ಸಾರಾಸಗಟು ಸಾಲಗಾರರು. ಮನೆಯ ವೆಚ್ಚ ಭರಿಸಲಾಗದಷ್ಟು ಕಡಿಮೆ ಆದಾಯ. ಮನೆಯಲ್ಲಿ ಬೆಳೆದು ಮದುವೆಗೆ ನಿಂತ ಮಕ್ಕಳು, ಊರಲ್ಲಿ ನಾಲ್ಕು ಮಂದಿ ಸರೀಕರ ನಡುವೆ ಲೋಕ ವ್ಯವಹಾರ ಜರುಗಿಸಬೇಕಾದ ಅನಿವಾರ್ಯತೆ. ಮದುವೆ, ತೊಟ್ಟಿಲು, ಕುಬಸಾ, ಜವಳ ಮುಂತಾದ ಸಾಮಾಜಿಕ ಸಮಾರಂಭಗಳಿಗೂ ಸಾಲ ಮಾಡದೆ ಗತ್ಯಂತರವಿಲ್ಲ. ಮೇಲಾಗಿ ಊರಲ್ಲಿ ದೇವರ ಜಾತ್ರೆ, ಉತ್ಸವ, ಮಡದಯ್ಯ, ಧರ್ಮಾಧಿಕಾರಿಗಳಿಗೆ ಕೊಡಲೇಬೇಕಾದ ವಂತಿಗೆ, ದೇವರು ದಿಂಡರುಗಳಿಗೆ ಸಲ್ಲಿಸಬೇಕಾದ ಹರಕೆ ಇತ್ಯಾದಿ ಧರ್ಮಭೀರುತ್ವದ ಒತ್ತಡಗಳು. ಈ ಎಲ್ಲಾ ಒತ್ತಡ, ದುಗುಡ, ದುಮ್ಮಾನಗಳಿಂದ ಪಾರಾಗಲೆಂದೇ ನಿರ್ಮಿಸಲಾದ ಗೆಳೆಯರ ಜೊತೆಗಿನ ಮೈಖಾನಾ (ಶರಾಬು ಅಡ್ಡೆ) ಮೆಹಫಿಲ್, ಮರಿ, ಕಿರಿ ಪುಢಾರಿಗಿರಿ ಇದ್ದದ್ದೆ. ವರ್ಷವಿಡಿ ಮೈ ಮುರಿದು ದುಡಿದರೂ ಬರುವ ಒಕ್ಕಲುತನದ ಆದಾಯ ಅಷ್ಟಕಷ್ಟೇ. ಒಂದು ಮಾಮೂಲಿ ಪಾನ್‌ಬೀಡಾದ ಅಂಗಡಿಯವನ ಆದಾಯದ ಶೇಕಡಾ ಒಂದರಷ್ಟು ಆದಾಯ ಬರದ ಸ್ಥಿತಿಯಲ್ಲಿ ಇರುವ ಒಕ್ಕಲುತನದ ಬಗೆಗೆ ಅದ್ಹೇಗೆ ಗೌರವ, ಪ್ರೀತಿ, ಆಸಕ್ತಿ ಬೆಳೆಯಲು ಸಾಧ್ಯ. ಇಂಥ ಅರಾಜಕ ಸ್ಥಿತಿಯಲ್ಲಿ ರೈತರು ಸಾವಿಗೆ ಶರಣಾಗುವ ಬಗೆಬಗೆಯ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ರೈತರ ಹೆಸರಿನಿಂದ ಅಧಿಕಾರ ಸ್ವೀಕರಿಸಿರುವ ಮುಖೇನ ಸಂಘ ಪರಿವಾರಗಳು ಇವು ನಕಲು ಸಾವುಗಳು, ನಕಲಿ ರೈತರು ಎಂದು ಉವಚಿಸುತ್ತಿದ್ದಾರೆ. ಈ ನಾಡು ನೀರಿನ ಬರಗಾಲ ಎದುರಿಸಿದೆ, ಅನ್ನದ ಬರಗಾಲ ಎದುರಿಸಿದೆ. ಆದರೆ ಮಾನವೀಯತೆಯ ಬರಗಾಲವನ್ನು ಈ ಹಿಂದೆ ಎಂದೂ ಎದುರಿಸಿರಲಿಲ್ಲ. ಅನ್ನ, ನೀರು ಕಡಿಮೆ ಬಿದ್ದರೆ ಎಲ್ಲಿಂದಾದರೂ ಸುಭಿಕ್ಷ ನಾಡಿನಿಂದ ತಂದು ಪೂರೈಸಬಹುದು. ಆದರೆ ಮಾನವಾಂತಃ ಕರಣೆಯ, ಹೃದಯವಂತಿಕೆಯ ಬರಗಾಲ ಬಿದ್ದರೆ ಅದನ್ನು ಎಲ್ಲಿಂದತರಲಾದೀತು?

○

# ರಾಜಋಷಿಗಳ ಮಾರ್ಗದರ್ಶನವೂ.......

ಪುಟ 4 ರಿಂದ

ದರ್ಬಾರಿನಲ್ಲಿ ತಮ್ಮ ಮಾತು ಬಂದಾಗ ಭಟ್ಟರು ...ವಲುನಾಯಿ' ಎಂಬ ಮಾತಿನಿಂದ ಉಂಟಾಗಿದ್ದ ... ಭಾವನೆಯುನ್ನು ಕರಗಿಸಿ ಬಿಟ್ಟರಲ್ಲ. ...ವರಾದರೋ ತಾವು ಯಡಿಯೂರಪ್ಪನವರ ...ೂಗಿನ ಕೆಳಗೆ' ನಿಂತಿರುವುದಾಗಿ ಸಾರಿ ತಮ್ಮದು ...ತಹ ಕಾವಲು ನಾಯಿಯ ಪಾತ್ರ ಎಂದು ಸಾರಿ ...ಟ್ಟರಲ್ಲ.

ಪತ್ರಿಕೆಯು ಮಹಾರಾಜರಿಗೆ ಸಲ್ಲಿಸಿದ 12 ...ಶಗಳ ಭಿನ್ನಹದ ಬಗೆಗೆ ಮಹಾರಾಜರಾದರೂ ...ು ಮಾಡುವರೆಂದು ಮುಂದೆ ಬೆಳ್ಳಿ ತೆರೆಯ ಮೇಲೆ ...ೋಡೋಣ. ಪರಂತು, ಕಠಿಣ ಪದಗಳ ಅರ್ಥ ...ಯೋಣ.

...ದ್ದಿಜೀವಿಗಳು: ಇದು ಬುದ್ಧಿ ಜೀವಿಗಳು ಲದ್ದಿ ...ವಿಗಳು ಎಂಬ ಪದಗಳ ಸಮ್ಮಿಶ್ರಣದಿಂದ ...ಪುಗೊಂಡಿರುವ ಪದ. ಇದರ ಬಗೆಗೆ ಹೆಚ್ಚಿನ ...ವರಣೆ ಬೇಕಾದರೆ ಚಿ.ಮೂ., ಕಸಾಪದ ಮಾಜಿ ಅಧ್ಯಕ್ಷರಾದ ಹಂಪನಾ. ಕ.ಹಂಪನಾ ಮೊದಲಾದವರನ್ನು ಸಂಪರ್ಕಿಸಬಹುದು.

ಬಾಲಂಗೋಚಿ: ಇತ್ತ ಕಾರ್ಯಕ್ರಮ ಮುಗಿದ ಮೇಲೆ ಬೆಂಗಳೂರಿನ 'ಕೇಶವ ಕೃಪ' ದಲ್ಲಿ ಸಂಭ್ರಮವೋ ಸಂಭ್ರಮವಂತಲ್ಲ. ಏಕೆಂದರೆ ಸರ್ಕಾರದ ಜುಟ್ಟು ಹಿಡಿದುಕೊಂಡಿರುವ ಗಣಿ ಧಣಿಗಳ ಬಗ್ಗೆ ಇರಲಿ, ಗಣಿ ಲೂಟಿ, ರೇಷನ್ ಕಾರ್ಡ್‌ನ ಸಮಸ್ಯೆ ಮತ್ತು ಇನ್ನು ಎಷ್ಟೋ ಸಮಸ್ಯೆಗಳನ್ನು ಯಾರೂ ಪ್ರಸ್ತಾಪಿಸುವ ಪಾಪವನ್ನೇ ಮಾಡಲಿಲ್ಲವಂತಲ್ಲ. ಸಂತಸಕ್ಕೆ ಇದೊಂದು ಕಾರಣವಾದರೆ 'ಕೇಶವ ಕೃಪ' ದಲ್ಲಿ ತಯಾರಾದ ನೀಲನಕ್ಷೆಯಂತೆಯೇ ಎಲ್ಲವೂ ನಡೆದು ಯಶಸ್ವಿಯಾಯಿತಲ್ಲ. 'ನಮ್ಮ ಆಸೆ-ನಿಮ್ಮ ಭಾಷೆ' ಅಂತ ಚೆಡ್ಡಿ ಧುರೀಣರೊಬ್ಬರು ವಿ.ಕ. ಕುರಿತು-ಅದು ಹೇಗಿರಬೇಕು ಅಂತ ಆದೇಶಿಸುವಾಗ ಹೇಳಿದ್ದನ್ನೇ ಭಟ್ಟರು ಪತ್ರಿಕೆಯ ಅಭಿಯಾನಕ್ಕೆ ಹೆಸರನ್ನಿಟ್ಟು ಬಿಟ್ಟಿದ್ದಾರೆ ಅಂತಲೂ ಖುಷಿಯಂತಲ್ಲ.

○

# ...ೊತನಹಳ್ಳಿಯಲ್ಲಿ ಆ ಅಲೆಮಾರಿಗಳು...

...ಟ 12 ಕ್ಕೆ

...ಶದ ಜನಸಂಖ್ಯೆಯ ಪ್ರಮುಖ ಭಾಗದ ಆದಾಯ ...ವೊಂದಕ್ಕೆ 8 ರಿಂದ 20 ರೂ.ಗಳು. ಆದರೂ ...ಬಡವರ ಸಾಲಿಗೆ ಸೇರಲು ಅರ್ಹರಲ್ಲ. ...ೆಲ್‌ಸ್ತರದ 20 ಜನರ ಆದಾಯ ಕ್ಷಣವೊಂದಕ್ಕೆ ...ಕ್ಷಾಂತರ ರೂಪಾಯಿಗಳು ಮಾರುಕಟ್ಟೆಯಲ್ಲಿನ ...ತ್ಯಕ್ಷ ವಸ್ತುಗಳ ಬೆಲೆ ಮಾಧ್ಯಮ ವರ್ಗದವರಿಗೆ ... ಮುಟ್ಟಿಸುತ್ತಿರುವಾಗ ಇನ್ನೂ 20ರೂ.ಗಳ ದಿನದ ...ಾಯದ ಜನ ಏನು ಕೊಂಡು ತಿಂದಾರು. ಹಾಗಾಗೀ ಅವರ ಪಾಲಿಗೆ ವಾರಕ್ಕೆರಡು ಊಟವೇ ಗತಿ. ಆದರೆ ಈ ಪರಿಸ್ಥಿತಿ ರೈತನ ಮಗನೆಂದು ಕಣ್ಣೀರು ಸುರಿಸುವ ರಾಜ್ಯದ ಮುಖ್ಯಮಂತ್ರಿಗಾಗಲಿ, ಪೆಟ್ರೋಲ್ ಬೆಲೆ ಏರಿದ ಕಾರಣದಿಂದಾಗಿ ಮಂತ್ರಿಗಳು ವಿದೇಶಿ ಪ್ರಯಾಣದ ಖರ್ಚು ಕಡಿಮೆ ಮಾಡಬೇಕೆಂದು ಉದಾರತೆ ಪ್ರದರ್ಶಿಸುತ್ತಿರುವ ಪ್ರಧಾನ ಮಂತ್ರಿಗಳಿ ಗಾಗಲಿ, ಹಣದುಬ್ಬರ ಪ್ರಗತಿಯ ಸಂಕೇತವೆಂದು ಬಣ್ಣಿಸುವ ಹಣಕಾಸು ಮಂತ್ರಿಗಳಿಗಾಗಲಿ ಅರ್ಥವಾದೀತೇ?

○

# ರಿಟೇಲ್ ಕ್ಷೇತ್ರಕ್ಕೂ ಲಗ್ಗೆ .....

ಪುಟ 2 ರಿಂದ

ವಾಲ್‌ಮಾರ್ಟ್, ಸೇಫ್‌ವೇ, ಸೋಸ್‌ಫೀಲ್ ಮೊದಲಾದ ಭಯಂಕರ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳೂ ಕಣಕ್ಕಿಳಿದಿವೆ. ಇದರ ಪರಿಣಾಮ ಎಷ್ಟೊಂದು ಭೀಕರವಾಗಬಹುದೆಂಬುದನ್ನು ಊಹಿಸಬಹುದು.

**ದೈತ್ಯ ಎಂದರೆ 'ವಾಲ್‌ಮಾರ್ಟ್' ಅಂತ**

ವಾಲ್‌ಮಾರ್ಟ್ ಬಹುರಾಷ್ಟ್ರೀಯ ಎಷ್ಟೊಂದು ದೊಡ್ಡ ದೈತ್ಯ ಕಂಪೆನಿಯೆಂದರೆ ಅದರ ಸನಿಹದ ಪ್ರತಿಸ್ಪರ್ಧಿ ಫ್ರಾನ್ಸಿನ ಕೆಯರ್‌ಮೋರ್‌ಗಿಂತ ಅದು ಮೂರು ಪಟ್ಟು ದೊಡ್ಡದು ಹಾಗೂ ಒಂಬತ್ತು ದೇಶಗಳ ಒಟ್ಟು ರಾಷ್ಟ್ರೀಯ ಅರ್ಥವ್ಯವಸ್ಥೆಗಳಿಗಿಂತ ಅದು ದೊಡ್ಡದು. ಉದಾರೀಕರಣದ ವಕಾಲತ್ತು ನಡೆಸುವ ಭಾರತೀಯ ಮಧ್ಯವರ್ಗದ ಗ್ರಾಹಕರಿಗೆ ಅದು ಆಕರ್ಷಕವಾಗಿ ಕಾಣಸುತ್ತದೆ. ಅದು ಬಹಳ ಕಡಿಮೆ ಬೆಲೆಯಲ್ಲಿ ಸರಕನ್ನು ಮಾರುತ್ತದೆ ಎಂಬುದು ಅದರ ಬಗೆಗಿನ ಒಂದು ಪ್ರಚಾರ. ಅದು ಅಮೇರಿಕಾದ ಮಾರುಕಟ್ಟೆಯ ಮೇಲೆ ಏಕಛತ್ರ ಪ್ರಭುತ್ವವನ್ನು ಸ್ಥಾಪಿಸಿದೆ. ಅಮೇರಿಕಾದಲ್ಲಿ ವಾಲ್‌ಮಾರ್ಟ್ ಬಗೆಗೆ ಸಾಕಷ್ಟು ವಿರೋಧವಿದೆ. ವಾಲ್‌ಮಾರ್ಟ್ ತನ್ನ ನೌಕಕರ ಶೋಷಣೆಗೆ ಅತ್ಯಂತ ಕುಖ್ಯಾತ. ಕಡಿಮೆ ಸಂಬಳ ಕೊಡುವುದು, ಸುಲಿಗೆಗೆ ಅನುಕೂಲವಾಗುವಂತೆ ಬಿಳಿಯರಲ್ಲದ ಆಫ್ರಿಕಾದ, ಅಮೇರಿಕಾದ ಜನರನ್ನು ಹೆಚ್ಚಾಗಿ ಕೆಲಸಕ್ಕಿಟ್ಟುಕೊಂಡಿರುವುದು. ಅಂತೆಯೇ ಅದರ ಬಹುಸಂಖ್ಯಾತ ಕಾರ್ಮಿಕರು ಮಹಿಳೆಯರೇ. ಕಂಪೆನಿಯು ಪುರುಷರಿಗಿಂತ ಅವರಿಗೆ ಕಡಿಮೆ ಸಂಬಳ ಕೊಡುತ್ತದೆ. ಅಲ್ಲದೆ ಅವರನ್ನು ದಮನ ಮಾಡುವುದು ಸುಲಭ ಎನ್ನುವುದು ಅವರ ಲೆಕ್ಕ. ಆ ಕಂಪೆನಿಗೆ ಪರಿಸರದ ಯಾವುದೇ ಕಾಳಜಿಯಿಲ್ಲ. 'ಯೂನಿಯನ್' ಎಂದರೆ ಅದು ಉರಿದು ಬೀಳುತ್ತದೆ. ಇಂತಹ ಕಂಪೆನಿಗಳು ಭಾರತದಂತಹ ಅಭಿವೃದ್ಧಿಶೀಲ ದೇಶವನ್ನು ಕಬ್ಬಿನ ಜಲ್ಲೆಯಂತೆ ಹೀಬಿ ಬಿಡುತ್ತದೆ. ಇಂದು ಪರಿಸ್ಥಿತಿ ಎಷ್ಟೊಂದು ಗಂಭೀರವೆಂದರೆ ಕೇಂದ್ರ ಮತ್ತು ಹೆಚ್ಚಿನ ರಾಜ್ಯ ಸರಕಾರಗಳೆಲ್ಲ ಬಹುರಾಷ್ಟ್ರೀಯ ಕಂಪನಿಯ ಏಜೆಂಟರಂತೆ ವರ್ತಿಸುತ್ತವೆ.

○

## ಭಾರತ - ಅಮೆರಿಕಾ ಅಣು ಒಪ್ಪಂದ

# ಸ್ವಾತಂತ್ರ್ಯವನ್ನು, ಸಂಶೋಧನೆಯ ಹಕ್ಕನ್ನು ಕಳೆದುಕೊಂಡು ಮಾಡಿಕೊಳ್ಳುವ ಒಪ್ಪಂದ ಬೇಕೆ?

## ಖ್ಯಾತ ಅಣು ವಿಜ್ಞಾನಿಗಳ ಪ್ರಶ್ನೆ

ಭಾಂ ರಹಸ್ಯ, ಮಾಧ್ಯಮಗಳ ಪ್ರಚೋದನೆ, ಅಣುಶಕ್ತಿ ಸಂಘಟನೆಗಳ ಸ್ವಾರ್ಥ ಹಿತಾಸಕ್ತಿ ಈ ವಿಷಯದ ಬಗೆಗೆ ಸಾಮಾನ್ಯ ಜನರ ನಿರ್ಲಕ್ಷ್ಯ ಎಲ್ಲಾ ಸೇರಿ ದೇಶವನ್ನು ಅತ್ಯಂತ ಅಪಾಯದ ಅಂಚಿಗೆ ತಳ್ಳುತ್ತಿವೆ.

ಭಾರತ, ಅಮೇರಿಕ ಪರಮಾಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಅವಸರ ಅವಸರದಲ್ಲಿ ಅಂತರಾಷ್ಟ್ರೀಯ ಅಣುಶಕ್ತಿ ಆಯೋಗ (ಐಎಇಎ) ದೊಂದಿಗೆ ಸಂರಕ್ಷತಾ ಒಪ್ಪಂದಕ್ಕೆ ಮುಂದಾಗುವ ಕೇಂದ್ರ ಸರ್ಕಾರದ ಕ್ರಮವನ್ನು ನಾವುಗಳು ತೀವ್ರವಾಗಿ ವಿರೋಧಿಸುತ್ತೇವೆ.

ದೇಶದಲ್ಲಿ ಈ ಬಗ್ಗೆ ಸಂಪೂರ್ಣ ಚರ್ಚೆ ನಡೆಯದ ಹೊರತು ಅಥವಾ ಕನಿಷ್ಟ ಯುಪಿಎ, ಎಡಪಕ್ಷಗಳ ಸಮನ್ವಯ ಸಮಿತಿಯ ಜೊತೆಗಾದರೂ ಚರ್ಚಿಸದೆ ಸರ್ಕಾರ ಈ ನಿಟ್ಟಿನಲ್ಲಿ ಮುಂದುವರಿಯುವುದನ್ನು ನಾವು ವಿರೋಧಿಸುತ್ತೇವೆ. ವಿಷಯವನ್ನು ತಜ್ಞರ ಗುಂಪಿನೊಂದಿಗೆ ಸಹ ಚರ್ಚಿಸಿ ಒಪ್ಪಂದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅವರಿಗೆ ಒದಗಿಸಬೇಕು.

ಒಪ್ಪಂದ ಒಮ್ಮೆ ಜಾರಿಗೆ ಬಂದರೆ ಅಮೇರಿಕಾ ಅಥವಾ ಇತರ ಯಾವುದೇ ದೇಶದೊಂದಿಗಿನ ಭಾರತ ಪರಮಾಣು ಸಂಬಂಧಿ ವ್ಯವಹಾರಗಳು ವಾಷಿಂಗ್‌ಟನ್ (ಅಮೇರಿಕಾ) ನಿಂದಲೇ ನಿಯಂತ್ರಿಸಲ್ಪಡುತ್ತವೆ.

'ಇಂಧನ ಭದ್ರತೆ' ಎನ್ನುವ ವಾದವೇ ಮೂಲಭೂತವಾಗಿ ಒಂದು ಭ್ರಮೆ. ಆಮದು ಮಾಡಿಕೊಳ್ಳಲಾದ ಅಣು ರಿಯಾಕ್ಟರ್‌ನಿಂದ ಉತ್ಪಾದಿಸಲಾದ ವಿದ್ಯುತ್ ಅತ್ಯಂತ ದುಬಾರಿಯಾಗುತ್ತದೆ ಮಾತ್ರವಲ್ಲ, ಈ ಅಣು ಒಪ್ಪಂದದ ಹೈಡ್ ಕಾಯ್ದೆಯು ಭಾರತದ ಯಾವುದೇ ದೇಶದೊಂದಿಗೆ ಭಾರತವು ನಡೆಸುವ ಯಾವುದೇ ಅಣುಶಕ್ತಿ ಕುರಿತಾದ ವಾಣಿಜ್ಯ ವ್ಯವಹಾರವು ವಾಷಿಂಗ್‌ಟನ್‌ನ ಬಿಗಿಮುಷ್ಟಿಯ ಹಿಡಿತದಲ್ಲೇ ಇರುತ್ತದೆ.

ಹೀಗಾಗಿ ನಮ್ಮ ಮುಂದಿರುವ ನಿಜವಾದ ಪ್ರಶ್ನೆ ಎಂದರೆ ಸಾಂಪ್ರದಾಯಿಕವಾದ ವಿದ್ಯುತ್ ಉತ್ಪಾದನಾ ವೆಚ್ಚಕ್ಕಿಂತ ಮೂರುಪಟ್ಟು ದುಬಾರಿಯಾದ ಈ ಆಮದು ಅಣು ವಿದ್ಯುತ್ ನಮಗೆ ಬೇಕೆ? ಅದೂ ಕೂಡ ಭಾರತವೂ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಕಳೆದುಕೊಂಡು, ತಾನು ದೇಶೀಯವಾಗಿ ಅಣು ವಿಜ್ಞಾನವನ್ನು ಅಭಿವೃದ್ಧಿ ಪಡಿಸುವ, ಸಂಶೋಧನೆ ಕೈಗೊಳ್ಳುವ ಎಲ್ಲಾ ಹಕ್ಕುಗಳನ್ನು ಕಳೆದುಕೊಂಡು ಇಂತಹ ವಿದ್ಯುತನ್ನು ಪಡೆದುಕೊಳ್ಳಬೇಕೇ ಎಂಬುದಾಗಿದೆ. ಅದೂ ಅಲ್ಲದೆ ಈ ಹೆಚ್ಚುವರಿ 'ಇಂಧನ ಭದ್ರತೆ' ಎಂದು ಹೇಳಲಾಗುತ್ತಿರುವುದೂ ಕೂಡ ಒಂದು ಭ್ರಮಾತ್ಮಕವಾದ ವಿಚಾರವಾಗಿದೆ.



ಕಲ್ಪಾಕಂ: ಇಂದಿರಾಗಾಂಧಿ ಅಣು ಸಂಶೋಧನಾ ಕೇಂದ್ರದ ಚಿತ್ರ. ಇಂತಹ ದೇಶೀಯ ಅಣುಸ್ಥಾವರಗಳ ಸ್ವಾತಂತ್ರ್ಯ ಉಳಿಯುವುದೇ?

> ನಮ್ಮ ಮುಂದಿರುವ ನಿಜವಾದ ಪ್ರಶ್ನೆ ಎಂದರೆ ಸಾಂಪ್ರದಾಯಿಕವಾದ ವಿದ್ಯುತ್ ಉತ್ಪಾದನಾ ವೆಚ್ಚಕ್ಕಿಂತ ಮೂರುಪಟ್ಟು ದುಬಾರಿಯಾದ ಈ ಆಮದು ಅಣು ವಿದ್ಯುತ್ ನಮಗೆ ಬೇಕೆ? ಅದೂ ಕೂಡ ಭಾರತವೂ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಕಳೆದುಕೊಂಡು, ತಾನು ದೇಶೀಯವಾಗಿ ಅಣು ವಿಜ್ಞಾನವನ್ನು ಅಭಿವೃದ್ಧಿಪಡಿಸುವ, ಸಂಶೋಧನೆ ಕೈಗೊಳ್ಳುವ ಎಲ್ಲಾ ಹಕ್ಕುಗಳನ್ನು ಕಳೆದುಕೊಂಡು ಇಂತಹ ವಿದ್ಯುತನ್ನು ಪಡೆದುಕೊಳ್ಳಬೇಕೇ ಎಂಬುದಾಗಿದೆ.

ಹೈಡ್ ಕಾಯ್ದೆ ಮಾತ್ರವೇ ಅಲ್ಲ. ಅಣು ಸುರಕ್ಷತಾ ನಿರ್ಬಂಧಗಳಿಗೆ ಭಾರತವನ್ನು ಒಡ್ಡುವ 123 ಒಪ್ಪಂದ ಕೂಡ ಭಾರತಕ್ಕೆ ತಡೆ ರಹಿತವಾದ ಅಣು ಇಂಧನ ಸರಬರಾಜನ್ನೇನು ಖಾತರಿ ಪಡಿಸುವುದಿಲ್ಲ. ಸರ್ಕಾರವು ಐಎಇಎಯೊಂದಿಗಿನ ಸುರಕ್ಷತಾ ಒಪ್ಪಂದದಲ್ಲಿನ ದೋಷವನ್ನು ಸರಿಪಡಿಸುವುದಾಗಿ ಭರವಸೆ ನೀಡುತ್ತಿದ್ದರೂ ಸಹ ಈ 'ಐಎಇಎ'ಯು ಅಣು ಇಂಧನ ಪೂರೈಕೆಯನ್ನು ಖಾತ್ರಿ ಮಾಡುವ ಸಂಸ್ಥೆಯಲ್ಲ ಎಂಬುದನ್ನು ನೆನಪಿಡಬೇಕು. ಆದ್ದರಿಂದ ಭಾರತದ ಪರವಾಗಿ ಮಾತುಕತೆಗೆ ತೆರಳಿದವರು ಈ ವಿಷಯದಲ್ಲಿ ಐಎಇಎಯಿಂದ ಭರವಸೆ ಪಡೆದಿರುವ ಬಗೆಗೆ ಕೂಡ ಗಂಭೀರವಾದ ಅನುಮಾನಗಳಿವೆ.

ಮುಂದೆ ಒಂದೊಮ್ಮೆ ಅಣು ಇಂಧನ ಪೂರೈಕೆಯಲ್ಲಿ ತಡೆ ಉಂಟಾದಲ್ಲಿ ಅದನ್ನು ಎದುರಿಸುವ ಬಗೆಗೆ, ಸರಿಪಡಿಸುವ ಬಗೆಗೆ 123 ಒಪ್ಪಂದದಂತೆ ತೆಗೆದುಕೊಳ್ಳಲಾಗುವ ಪರಿಹಾರದ ಕ್ರಮಗಳೇನು ಎಂಬುದನ್ನು ಸರ್ಕಾರವು ಬಹಿರಂಗಪಡಿಸಬೇಕಿದೆ.

ಭಾರತದಲ್ಲಿನ ದೇಶೀಯ ಅಣು ಸ್ಥಾವರಗಳಲ್ಲಿ ವಿದೇಶಿ ಮೂಲದ ಇಂಧನ ಮತ್ತು ಉಪಕರಣಗಳನ್ನು ಕಸಿದುಕೊಂಡು ಅನಂತರ ಅದಕ್ಕೆ ಸುರಕ್ಷತಾ ಕ್ರಮಗಳಿಂದ ರಿಯಾಯಿತಿ ನೀಡುವುದರಿಂದೇನೂ ಅಣು ಇಂಧನದ ನಿರಂತರ ಪೂರೈಕೆಯನ್ನು ಖಾತ್ರಿಪಡಿಸಿದಂತಾಗುವುದಿಲ್ಲ ಮತ್ತು ಇಂತಹ ಸುರಕ್ಷತಾ ಕ್ರಮಗಳ ವಿನಾಯಿತಿಯು ಭಾರತದ ಬಹುದೊಡ್ಡ ಬಂಡವಾಳವನ್ನು ತೊಡಗಿಸಿ ಸ್ಥಾಪಿಸಲಾಗುವ ವಿದೇಶದಿಂದ ಆಮದಾದ ಅಣುಸ್ಥಾವರಕ್ಕೆ ಅನ್ವಯವಾಗುವುದಿಲ್ಲ.

ಭಾರತವು ಪ್ರಧಾನವಾದ ಸಂರಕ್ಷಣಾ ಒಪ್ಪಂದದ ಜೊತೆಗೆ ಈ ವಿಚಾರದ ಕುರಿತು ಸಹ ಮಾತುಕತೆ ನಡೆಸಬೇಕು.

### ಒಪ್ಪಂದ ಅಪಾಯಕಾರಿ, ದೇಶದ ಭವಿಷ್ಯಕ್ಕೆ ಮಾರಿ

ಪರಮಾಣು ಭಸ್ಮವನ್ನೇ ಮತ್ತೆ ಉರಿಸಿ ಭವಿಷ್ಯದಲ್ಲಿ ವಿದ್ಯುತ್ ಉತ್ಪಾದಿಸಬಲ್ಲ ವಿಧಾನಗಳನ್ನು ನಮ್ಮ ವಿಜ್ಞಾನಿಗಳು ರೂಢಿಗೆ ತಂದಿದ್ದರು. ಆದರೆ 123 ಒಪ್ಪಂದದ ಪ್ರಕಾರ, ಹೊಸ ತಂತ್ರಜ್ಞಾನ ಜಾರಿಗೆ ಬರುವವರೆಗೆ ನಾವು ವಿದೇಶಿ ಇಂಧನದ ಭಸ್ಮವನ್ನು ಬಳಸುವಂತೆಯೂ ಇಲ್ಲ. ನಮ್ಮದನ್ನೂ ಬಳಸುವಂತಿಲ್ಲ. ತಾತ್ವಿಕವಾಗಿ ನಮಗೆ ಅದನ್ನು ಬಳಸುವ ಹಕ್ಕು ಇದೆ ಎಂಬ ಪೊಳ್ಳು ಮಾತು ಮಾತ್ರ ಇದೆಯೇ ವಿನಾ ಆ ಹಕ್ಕನ್ನು ಮೊಟಕು ಮಾಡಬಲ್ಲ ಅನೇಕ ಕಲಮುಗಳು 123 ಒಪ್ಪಂದದಲ್ಲಿ ಸೇಪಡೆಯಾಗಿವೆ. ಅವನ್ನೆಲ್ಲ ತೆಗೆಸದೇ ಇದ್ದರೆ ಭವಿಷ್ಯದಲ್ಲಿ ಅದೇ ಒಂದು ಭೂತವಾಗಿ ಭಾರತವನ್ನು ಕಾಡಲಿದೆ.

– ಎ.ಗೋಪಾಲಕೃಷ್ಣನ್
ಅಣುಶಕ್ತಿ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷರು

– ಪಿ.ಕೆ. ಅಯ್ಯಂಗಾರ್,
ಅಣುಶಕ್ತಿ ಆಯೋಗದ ಮಾಜಿ ಮುಖ್ಯಸ್ಥರು

–ಎ.ಎನ್.ಪ್ರಸಾದ್, ಬಾಬಾ ಅಣು ಶಕ್ತಿ ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರು

---

ಕವನ

## ಬದುಕೊಂದು ವ್ಯಾಪಾರ

ಒಂದು ಹಣ್ಣು
ಕೊಂಡು ತಿನ್ನುವುದು
ಎಷ್ಟು ಸುಲಭ?
ಕಣ್ಣಿಗೆ ಕಂಡ ರೂಪ
ಮೂಗಿಗಡರಿದ ಘಮಲು
ಕಾಲು ಎಳೆಯಿತು ಹಣ್ಣಿನೆಡೆಗೆ
ಒಮ್ಮೆ ಕಣ್ಣಿನಿಂದಲೇ ಅಳೆದು
ತೂಗಿ
ಕೈಯೊಳು ಹಿಡಿದು ಮೂಸಿ
ಮನಸಿನಲೆ ಲೆಕ್ಕ ಹಾಕುತ....
'ಕೆಜಿ ಎಷ್ಟು?
ಓ ! ಅಷ್ಟೊಂದು ರೇಟಾ?
ಸ್ವಲ್ಪ ಕಡಿಮೆ ಮಾಡಿಕೊಳ್ಳೋ....'
ಚೌಕಾಸಿಗಿಳಿದೆ
'ಏನ್ ಸಾರ್,
ನೀವೆ ಹೀಗಂದ್ರೆ,
ನಮ್ಮಂಥವರ ಗತಿ ಏನು?
ಹಣ್ಣು
ರುಚಿ ನೋಡಿ ರೊಕ್ಕ ಕೊಡಿ
ಸ್ವಲ್ಪ ತಿನ್ನಿ. ತಕ್ಕೊಳ್ಳಿ' ಎಂದ
ಬಾಯಿ ಚಪ್ಪರಿಸುತ್ತಿದ್ದಂತೆ
'ಎಷ್ಟು ಕೊಡಲಿ ಸಾರ್?
ಕೆಜಿ? ಎರಡು ಕೇಜಿ?'
ಹಣ್ಣು ಕೈಲಿಡಿದು
ತೂಗಲು ಶುರು ಮಾಡಿದ
'ಬೇಡ ಬಿಡೋ,
ಹಣ್ಣು ಪೀಚು
ಹುಳಿ
ಕೆಮ್ಮಾಗುತ್ತೆ'
ಎಂದು ನುಣುಚಿಕೊಂಡೆ
'ಹೌದಾ ಸಾರ್,
ಇರಲಿ ಬಿಡಿ.
ಇದು ನನಗೆ ಮಾಮೂಲು.
ಒಂದು ಹಣ್ಣು
ಬೆಳೆದು ಮಾರುವುದು ಎಷ್ಟು ಕಷ್ಟ
(ಕೊಂಡು ತಿನ್ನುವ ನಿಮಗೆಲ್ಲಿ ಗೊತ್ತು)
ಬಿಟ್ಟಿ ತಿಂದಷ್ಟು ಸುಲಭವಲ್ಲ
ಅಲ್ವೇ ಸಾರ್?'
ಗೊಣಗುತ್ತಲೇ ಇದ್ದ.
ಕೇಳಿಯೂ
ಕೇಳದಂತೆ ಮುಂದೆ ನಡೆದೆ.

– ವಿ. ಹರಿನಾಥ್ ಬಾಬು, ಸಿರುಗುಪ್ಪ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE-560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH